# ಅಧ್ಯಾಯ-೦೮

# ಆರ್ಥಿಕ ಪ್ರವೃತ್ತಿಗಳು ಮತ್ತು ಯೋಜನೆಗಳು



ಬ್ರಿಟಿಷರು ಬರುವ ಪೂರ್ವದಲ್ಲಿ, ಬಟಾಟೆ(ಆಲೂಗಡ್ಡೆ), ಮೆಣಸಿನಕಾಯಿ, ನೆಲಗಡಲೆ ಮತ್ತು ತಂಬಾಕುಗಳಂತಹ ಬೆಳೆಗಳು ಈ ದೇಶವನ್ನು ಪ್ರವೇಶಿಸಿದ್ದರಿಂದ, ವ್ಯವಸಾಯದಲ್ಲಿ ಬೆಳೆಯ ನಮೂನೆ ಸ್ವಲ್ಪ ಮಟ್ಟಿಗೆ ಪರಿವರ್ತಿತವಾಯಿತು.ಈ ಬೆಳೆಗಳನ್ನು ಪೋರ್ಚುಗೀಸರು (ಹೊಸ ಜಗತ್ತಿನಿಂದ) ತಂದರಲ್ಲದೆ, ಯೂರೋಪಿಗೆ ಹೊಸ ಸಮುದ್ರ ಮಾರ್ಗವನ್ನು ಕಂಡುಹಿಡಿದರು. ಇದರಿಂದ, ಅಲ್ಲಿಯವರೆಗೆ, ಭಾರತದ ಸಾಗರೋತ್ತರ ವಾಣಿಜ್ಯ ವ್ಯವಹಾರದ ಮೇಲೆ ತಮ್ಮದೇ ಆದ ಪೂರ್ಣ ಹತೋಟಿಯನ್ನು ಹೊಂದಿ ನೆಮ್ಮದಿಯಲ್ಲಿದ್ದ ಅರಬರಿಗೆ ಹೊಸ ಪ್ರತಿಸ್ಪರ್ಧಿಗಳು ಹುಟ್ಟಿಕೊಂಡರು. ಡಚ್ಚರು ಮತ್ತು ಇಂಗ್ಲೀಷರು ಕರ್ನಾಟಕದ ಸಮುದ್ರ ದಂಡೆಗೆ ಬಂದೊಡನೆ, ಭಾರತದ ಪದಾರ್ಥಗಳಾದ ಅಕ್ಕಿ, ಜವಳಿ, ವಜ್ರ ಮತ್ತು ಸಾಂಬಾರ ಪದಾರ್ಥಗಳಿಗೆ ಸಾಗರೋತ್ತರ ಬೇಡಿಕೆ ಅಧಿಕವಾಯಿತು. ಟಿಪ್ಪು ರೇಷ್ಮೆ ಬೆಳೆಯನ್ನು ಆರಂಭಿಸಿ, ಗಾಜು ಮತ್ತು ಪೇಪರ್ ಉದ್ದಿಮೆಗಳನ್ನು ಸ್ಥಾಪಿಸಿದರು. ತದನಂತರ ಆದಿಲ್‌ಶಾಹಿಗಳು ಉತ್ತರ ಕರ್ನಾಟಕ ಪ್ರದೇಶದಲ್ಲಿ ಅಗರಬತ್ತಿ ತಯಾರಿಸುವುದಕ್ಕೆ ಉತ್ತೇಜನವನ್ನಿತ್ತರು.

### ಬ್ರಿಟಿಷರ ಆಗಮನ

ಬ್ರಿಟಿಷರು ಕಾಲಿಟ್ಟೊಡನೆ ರಸ್ತೆ, ಸೇತುವೆ ಮತ್ತು ಸಂಪರ್ಕ ಸಾಧನಗಳನ್ನು ಅಭಿವೃದ್ಧಿಪಡಿಸಿದರು.ಇದರಿಂದಾಗಿ ಭಾರತದಲ್ಲಿ ವ್ಯಾಪಾರಕ್ಕೆ ಹೆಚ್ಚಿನ ಪ್ರೋತ್ಸಾಹ ದೊರೆಯಿತು.ರೈಲು ಪ್ರಾರಂಭವಾದುದರಿಂದ ಈ ಚಟುವಟಿಕೆಗಳಿಗೆ ಹೆಚ್ಚಿನ ಉತ್ತೇಜನವೂ ದೊರೆಯಿತು. ಆದರೆ, ಇಂಗ್ಲೆಂಡಿನ ಕೈಗಾರಿಕಾ ಕ್ರಾಂತಿ ಹಾಗೂ ಬ್ರಿಟಿಷ್ ವಸಾಹತು ನೀತಿಯಿಂದ ಲಕ್ಷೋಪಲಕ್ಷ ಮಹಿಳೆಯರಿಗೆ ಉದ್ಯೋಗಗಳನ್ನು ಒದಗಿಸುತ್ತಿದ್ದ ನೂಲುವ ಉದ್ಯೋಗ, ಹಾಗೆಯೇ ಜವಳಿ ನೇಯ್ಗೆ ಮತ್ತು ಕಬ್ಬಿಣ, ಹಾಳೆ ಹಾಗೂ ಗೋಣಿಚೀಲ ಉತ್ಪಾದನೆಗೆ ಬಲವಾದ ಪೆಟ್ಟು ಬಿದ್ದಂತಾಯಿತು. ಉಪ್ಪಿನ ಮೇಲಿನ ಹತೋಟಿಯಿಂದ, ಉಪ್ಪು ತಯಾರಿಸುವ ಉದ್ದಿಮೆಗಳಲ್ಲದ್ದು, ಸಾವಿರಾರು ಜನರು ನಿರುದ್ಯೋಗಿಗಳಾದರಲ್ಲದೆ, ಸೀಮೆಎಣ್ಣೆಯನ್ನು ಈ ದೇಶಕ್ಕೆ ತಂದಿದ್ದರಿಂದ ದೇಶೀ ಎಣ್ಣೆ ಉತ್ಪಾದಕರ ಭವಿಷ್ಯವನ್ನು ಮಂಕುಗೊಳಿಸಿತು.ಇದರಿಂದ ವ್ಯವಸಾಯದ ಮೇಲಿನ ಅವಲಂಬನೆ ಹೆಚ್ಚಾಗಿ, ಕೃಷಿ ಭೂಮಿಯ ಮೇಲೆ ಹೆಚ್ಚಿನ ಭಾರವು ಬಿದ್ದಿತು.ಆದರೆ ಕಾಫಿ ನೆಡುವುದರಿಂದ ಮತ್ತು ಲೋಕೋಪಯೋಗಿ ಕಾರ್ಯಗಳನ್ನು ಕೈಗೊಂಡಿದ್ದರಿಂದ ಸಾವಿರಾರು ಜನರಿಗೆ ಉದ್ಯೋಗಗಳು ದೊರೆತವು.ಕ್ಷಾಮ ಮತ್ತು ಪ್ಲೇಗಿನಂತಹ ಪಿಡುಗು ರೋಗವು ೧೯ನೇ ಶತಮಾನದ ಪ್ರಾರಂಭದಲ್ಲಿ, ಮೊದಲೇ ಸೊರಗುತ್ತಲಿದ್ದ ಕೂಲಿಗಳನ್ನು ಬಲಿ ತೆಗೆದುಕೊಂಡವು.ಇದರಿಂದ, ಬೆಂಗಳೂರಿನಲ್ಲಿ ಆಗತಾನೇ ಪ್ರಾರಂಭವಾಗಿದ್ದ ಜವಳಿ ಗಿರಣಿಗಳು ಕೂಲಿಕಾರರ ಅಭಾವದಿಂದ ಕೆಲವು ತಿಂಗಳು ಮುಚ್ಚಬೇಕಾಯಿತು.ಆದರೆ, ಬರ ಪರಿಹಾರ ಕಾರ್ಯಗಳಿಂದ ಅನೇಕರಿಗೆ ಉದ್ಯೋಗಗಳು ದೊರೆತವು. ಗುಲಾಮಗಿರಿ ನಿರ್ಮೂಲನಾ ಕಾಯ್ದೆ (೧೮೪೩) ಯೂ ಕೂಡ ಕಾರ್ಮಿಕರ ಪೂರೈಕೆಯಲ್ಲಿ ಸಾಕಷ್ಟು ಬದಲಾವಣೆಗಳನ್ನು ತಂದಿತು, (ಅದರಲ್ಲೂ ಪ್ಲಾಂಟೇಶನ್‌ಗಳು ಮತ್ತು ಲೋಕೋಪಯೋಗಿ ಕಾಮಗಾರಿಗಳಿಗೆ)

ಬ್ರಿಟಿಷರು ತಮ್ಮ ವಸಾಹತು ನೀತಿಗನುಗುಣವಾಗಿ, ಕಚ್ಚಾ ಪದಾರ್ಥಗಳೆಂದೆನಿಸಿಕೊಳ್ಳುವ ಬೆಳೆಗಳನ್ನು ಬೆಳೆಯಲು ಉತ್ತೇಜನವನ್ನಿತ್ತರು. ಅವರು ಕರ್ನಾಟಕದಲ್ಲಿ ಉದ್ದ ಎಳೆಯ ಅಮೇರಿಕಾ ಹತ್ತಿ ಬೆಳೆಯಲು ಪ್ರಚಾರ ಮಾಡಿದರು.೧೮೬೦ರ ಹತ್ತಿ ಬೇಡಿಕೆ (ಅಮೇರಿಕಾ ಸಿವಿಲ್ ಯುದ್ಧದ ಕಾಲದಲ್ಲಿ) ತನ್ನದೇ ಆದ ಪರಿಣಾಮವನ್ನು ಬೀರಿತು. ಇದರಿಂದ ಮುಂದೆ ಹತ್ತಿ ಸಂಸ್ಕರಿಸುವ ಘಟಕಗಳ ಸ್ಥಾಪನೆಗೆ ಅನುಕೂಲವಾಯಿತು. ಹತ್ತಿಯನ್ನು ನೂಲುವ ಕಾರ್ಯ ಸಂಪೂರ್ಣವಾಗಿ ನಿಲ್ಲಲಿಲ್ಲ. ಆದರೆ ಅದಕ್ಕಿದ್ದ ದೊಡ್ಡ ವಿದೇಶಿ ಪೇಟೆ ಇಲ್ಲದಂತಾಯಿತು.

ಬ್ರಿಟಿಷರ ಆಡಳಿತದ ಧೋರಣೆಯಿಂದ, ಬೆಂಗಳೂರು, ಬೆಂಗಳೂರು ದಂಡು ಪ್ರದೇಶ, ಮೈಸೂರು, ಮಂಗಳೂರು, ದಾವಣಗೆರೆ, ಹುಬ್ಬಳ್ಳಿ, ಗದಗ, ಹೊಸಪೇಟೆ, ಗುಲ್ಬರ್ಗಾ ಮೊದಲಾದ ಪಟ್ಟಣ ಕೇಂದ್ರಗಳು ವಿಸ್ತಾರವಾಗಿ ಬೆಳೆಯಲು ಅನುಕೂಲವಾಯಿತು. ವೃದ್ಧಿಸುತ್ತ ನಡೆದ ಕೈಗಾರಿಕಾ ಚಟುವಟಿಕೆಗಳು ಮತ್ತು ಅಲ್ಲಲ್ಲಿ ಸ್ಥಾಪನೆಗೊಂಡ ಕಚೇರಿಗಳು ಅಥವಾ ರೈಲ್ವೆ ಘಟಕಗಳು ಇದಕ್ಕೆ ಕಾರಣವಾಯಿತು. ಬಾಸೆಲ್ ಮಿಶನ್ನಿನವರು ಆರಂಭಿಸಿದ ಹೆಂಚಿನ ಕಾರ್ಖಾನೆಗಳನ್ನು ಮಂಗಳೂರು ಕಾಣುವಂತಾಯಿತು.

ಇಪ್ಪತ್ತನೇ ಶತಮಾನದ ಪೂರ್ವಾರ್ಧದಲ್ಲಿ ಹೊಸ ಪಟ್ಟಣಗಳಾದ ಮಂಡ್ಯ, ಭದ್ರಾವತಿ, ರಾಯಚೂರು, ಹರಿಹರ, ಚಿಕ್ಕಮಗಳೂರು ಮೊದಲಾದವುಗಳು ವಿಸ್ತಾರಗೊಂಡವು. ಹೊಸ ಪಟ್ಟಣಗಳು ಉಂಟಾದುದರಿಂದ ಹೋಟೆಲ್‌ಗಳು ಪ್ರಾರಂಭವಾಗಿ ಹಾಲಿಗೆ ಹೆಚ್ಚಿನ ಬೇಡಿಕೆ ಉಂಟಾಯಿತು. ಮೈಸೂರಿನ ಆರ್ಥಿಕ ಯೋಜನಾಕಾರರು, ಹಿಂದೆಂದೂ ಕಾಣದಿದ್ದ ಆರ್ಥಿಕ ಚಟುವಟಿಕೆಗಳನ್ನು ಕೈಗೊಂಡು, ಅಣೆಕಟ್ಟು ಕಟ್ಟುವುದು, ಉದ್ದಿಮೆಗಳನ್ನು ಪ್ರಾರಂಭಿಸುವುದು, ಹಾಗೂ ವಿದ್ಯುತ್‌ನ್ನು ಉತ್ಪಾದಿಸುವುದರಲ್ಲಿ ತೊಡಗಿಸಿಕೊಂಡರು. ದಿವಾನ್ ಶೇಷಾದ್ರಿ ಅಯ್ಯರ್‌ರವರು ಈ ಪ್ರಕ್ರಿಯೆಯನ್ನು ಪ್ರಾರಂಭಿಸಿದರು. ಈ ಮಧ್ಯಂತರದಲ್ಲಿ, ಇಪ್ಪತ್ತನೇ ಶತಮಾನದ ಮೊದಲಿನ ಎರಡೂವರೆ ದಶಕಗಳಲ್ಲಿ, ಸಹಕಾರಿ ಆಂದೋಲನದ ಮತ್ತು ಬ್ಯಾಂಕಿನ ಚಟುವಟಿಕೆಗಳು ಹೆಚ್ಚಿದವು. ಬೀಡಿ ಕಟ್ಟುವುದು ಗೃಹೋದ್ಯಮವಾಯಿತು.

### ಮೈಸೂರು ಪ್ರದೇಶದಲ್ಲಿ ಯೋಜನೆಗಳು

ಸರ್.ಎಂ.ವಿಶ್ವೇಶ್ವರಯ್ಯನವರು, ೧೯೧೧ ಮತ್ತು ೧೯೩೧ರ ಮಧ್ಯೆ ಆರ್ಥಿಕ ಸಮ್ಮೇಳನವನ್ನು ನಡೆಸಿ, 'ಭಾರತಕ್ಕೆ ಯೋಜನಾ ಬದ್ಧ ಆರ್ಥಿಕವ್ಯವಸ್ಥೆ' ಎಂಬ ತಮ್ಮ ಗ್ರಂಥದಲ್ಲಿ ಆರ್ಥಿಕ ಅಭಿವೃದ್ಧಿಯನ್ನು ವಿಶ್ಲೇಷಿಸಿ, ಆರ್ಥಿಕಾಭಿವೃದ್ಧಿಗೆ ಆಗಬೇಕಾದ ಕೈಗಾರಿಕಾ ಬೆಳವಣಿಗೆಗೆ ಇರುವ ಸಾಧ್ಯತೆಗಳನ್ನು ಸೂಚಿಸಿದರು. 'ಕೈಗಾರಿಕೀಕರಣ ಇಲ್ಲವೆ ವಿನಾಶ'ಅನ್ನುವುದು ಅವರ ಧ್ಯೇಯವಾಕ್ಯವಾಯಿತು. ದೇಶದಲ್ಲಿಯೇ ಮೊದಲು ಮೈಸೂರು ಸಂಸ್ಥಾನವು ಹಲವಾರು ಯೋಜನೆಗಳನ್ನೊಳಗೊಂಡರೂ. ೪೮.೯೯ ಕೋಟಿ ಅಂದಾಜು ವೆಚ್ಚದ ಆರ್ಥಿಕ ಯೋಜನೆಯನ್ನು ೧೯೪೬ರಲ್ಲಿ ರೂಪಿಸಿತು. ಆದಾಗ್ಯೂ, ಇದಕ್ಕೂ ಮೊದಲು ಸಂಸ್ಥಾನವು ಯೋಜನಾ ಯುಗವು ಪ್ರಾರಂಭವಾಗುವ ಸಮಯದಲ್ಲಿ ವ್ಯಾಪಕವಾಗಿ ಪೂರ್ವಭಾವಿಯಾಗಿ ಕೈಗಾರಿಕೀಕರಣವಾಗಿದ್ದಿತು. ಆದರೆ ಪೂರ್ಣವಾಗಿ ಅಭಿವೃದ್ಧಿಯಾಗಿರಲಿಲ್ಲ. ಸ್ವತಂತ್ರ ಭಾರತವು ಸುಖೀ ರಾಜ್ಯದತ್ತ ಗುರಿಯನ್ನಿಟ್ಟುಕೊಂಡು ಮೂಲ ಮತ್ತು ಮುಖ್ಯ ಔದ್ಯೋಗಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತು. ಇದರಿಂದ ಬೆಂಗಳೂರಲ್ಲಿ ಅನೇಕ ಕೇಂದ್ರ ಸರ್ಕಾರದ ಕೈಗಾರಿಕೆಗಳು ಸ್ಥಾಪಿಸಲ್ಪಟ್ಟವಲ್ಲದೆ, ತುಂಗಭದ್ರಾ ಮತ್ತು ಇತರ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಿ ನೀರಾವರಿ ಸಾಮರ್ಥ್ಯವನ್ನು ಹೆಚ್ಚಿಸುವ ಪ್ರಯತ್ನಗಳು ನಡೆದವು. ರಾಜ್ಯವು ಮುಖ್ಯವಾಗಿ ಬೇಸಾಯವನ್ನೇ ಅವಲಂಬಿಸಿದ್ದರೂ, ಕೈಗಾರಿಕಾ ಅಭಿವೃದ್ಧಿಗೆ ಬೇಕಾಗುವ ಅಧೋರಚನೆಗಳನ್ನು ನಿರ್ಮಿಸಲಾಗಿತ್ತು.

೧೯೫೦ರ ನಂತರ ಸಂಸ್ಥಾನದ ಆರ್ಥಿಕ ವ್ಯವಸ್ಥೆಯು ಕೆಳಗಿನ ಲಕ್ಷಣಗಳಿಂದ ಪ್ರಭಾವಿತವಾಗಿತ್ತು.

(೧) ಸಂಪನ್ಮೂಲಗಳ ಬಳಕೆಗೆ ತಕ್ಕ ಜನಸಂಖ್ಯೆಯ ಪ್ರಮಾಣವಿರಲಿಲ್ಲ. (೨) ಕಡಿಮೆ ಇಳುವರಿ, ಅಸಮರ್ಪಕ ಸಾಲ ಮತ್ತು ಮಾರುಕಟ್ಟೆ ಕೊರತೆ ಮತ್ತು ಆರ್ಥಿಕವಾಗಿ ಲಾಭವಲ್ಲದ ತೀರ ಸಣ್ಣ ಹಿಡುವಳಿಗಳಿಂದ ಕೃಷಿಯು ಪ್ರಗತಿಶೀಲವಾಗಿರಲಿಲ್ಲ. (೩) ಕೆಳಮಟ್ಟದ ಔದ್ಯೋಗೀಕರಣ ೪) ಕೆಳಮಟ್ಟದ ತಲಾ ಆದಾಯ, ಕಡಿಮೆ ಬಂಡವಾಳ ತೊಡಗಿಸುವಿಕೆ ಮತ್ತು ಅಸಮರ್ಪಕ ಅಧೋರಚನೆ.

ರಾಜ್ಯ ಯೋಜನೆಯಲ್ಲಿದ್ದ ಈ ಕೊರತೆಗಳನ್ನು ಪರಿಹರಿಸಲು ಕೆಳಗಿನ ಅಂಶಗಳಿಗೆ ಒತ್ತು ನೀಡಲಾಯಿತು.

೧) ದಾರಿದ್ರ್ಯ ನಿರ್ಮೂಲನೆ ಮತ್ತು ಸ್ವಾವಲಂಬನೆ, ೨) ವಸ್ತು ಮತ್ತು ಹಣದ ರೂಪದಲ್ಲಿ ತಲಾವಾರು ಆದಾಯದ ಮಟ್ಟವನ್ನು ಏರಿಸುವುದು. ೩) ಉದ್ಯೋಗಾವಕಾಶಗಳನ್ನು ಒದಗಿಸುವುದು. ೪) ಲಭ್ಯವಿರುವ ಸಂಪನ್ಮೂಲಗಳ ಪೂರ್ಣ ಬಳಕೆ. ೫) ಕೃಷಿ ಮತ್ತು ಕೈಗಾರಿಕೆಗಳ ಅಭಿವೃದ್ಧಿ. ೬) ಬೆಲೆಗಳ ಹತೋಟಿ. ೭) ಕನಿಷ್ಠ ಅವಶ್ಯಕತೆಗಳ ಯೋಜನೆಯಲ್ಲಿ ಜನರ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವುದು. ೮) ಆದಾಯ ಮತ್ತು ಸಂಪತ್ತಿನ ಸಮಾನ ಹಂಚಿಕೆ.

### ಯೋಜನಾಬದ್ಧ ಅಭಿವೃದ್ಧಿ

**ಮೊದಲನೇ ಯೋಜನೆ (೧೯೫೧-೫೬)** :ಹಳೇ ಮೈಸೂರು ರಾಜ್ಯದಲ್ಲಿ ಮೊದಲನೇ ಯೋಜನೆಯ ಅಂದಾಜು ವೆಚ್ಚ ರೂ. ೪೭.೫೮ ಕೋಟಿ ಮತ್ತು ವೆಚ್ಚವಾದದ್ದು ರೂ. ೪೦.೫೧ ಕೋಟಿ. ಮುಖ್ಯವಾಗಿ ನೀರಾವರಿಗೆ ರೂ. ೧೫.೩೭ ಕೋಟಿ, ವಿದ್ಯುತ್ತಿಗೆ ರೂ. ೧೦.೩೯ ಕೋಟಿ, ಕೈಗಾರಿಕೆಗಳಿಗೆ ರೂ. ೪.೮೦ ಕೋಟಿ ಮತ್ತು ವ್ಯವಸಾಯಕ್ಕೆ ರೂ. ೩.೬೦ ಕೋಟಿ ವೆಚ್ಚ ಮಾಡಲಾಯಿತು. ಯೋಜನೆಯ ಭೌತಿಕ ಪ್ರಗತಿಯೆಂದರೆ 'ಹೆಚ್ಚು ಆಹಾರಬೆಳೆಯಿರಿ' ಘೋಷಣೆಯನ್ನು ಜನಪ್ರಿಯಗೊಳಿಸಲಾಯಿತು. ರಾಷ್ಟ್ರೀಯವಿಸ್ತರಣಾ ಯೋಜನೆಯನ್ನುಪ್ರಾರಂಭಿಸಿ, ೪,೦೦೦ ಎಕರೆ ಭೂಮಿಯಲ್ಲಿ ಅರಣ್ಯವನ್ನು ಬೆಳೆಸಲಾಯಿತು ಮತ್ತು ಮೂರು ದೊಡ್ಡ ಮತ್ತು ೧೧ ಮಧ್ಯಮ ಗಾತ್ರದ ನೀರಾವರಿ ಕಾಮಗಾರಿಗಳನ್ನು ಕೈಗೊಳ್ಳಲಾಯಿತು.

**ಎರಡನೇ ಯೋಜನೆ (೧೯೫೬-೬೧)**: ರಾಜ್ಯ ಪುನರ್‌ವಿಂಗಡಣೆಯಾದ ಮೇಲೆ ಎರಡನೇ ಯೋಜನೆಯನ್ನು ಪುನರ್ ಪರಿಶೀಲಿಸಿ ಅದರ ಅಂದಾಜು ವೆಚ್ಚವನ್ನು ರೂ. ೧೪೫.೧೩ ಕೋಟಿಯೆಂದು ನಿರ್ಧರಿಸಲಾಯಿತು. ವೆಚ್ಚ ಮಾಡಿದ್ದು ರೂ. ೧೪೨.೮೨ ಕೋಟಿ. ಪ್ರಮುಖವಾಗಿ ನೀರಾವರಿಗೆ ರೂ.೨೮.೨೭ ಕೋಟಿ, ವಿದ್ಯುತ್ತಿಗೆ ರೂ. ೨೮.೦೨ ಕೋಟಿ ಮತ್ತು ಸಮಾಜ ಸೇವೆಗೆ ರೂ. ೩೨.೪೨ ಕೋಟಿ ವೆಚ್ಚ ಮಾಡಲಾಯಿತು. ಈ ಅವಧಿಯಲ್ಲಿ ಕೃಷಿ ಉತ್ಪನ್ನವು ಹೆಚ್ಚಿತು.ಸಣ್ಣ ನೀರಾವರಿ ಸೌಲಭ್ಯಗಳನ್ನು ಮೂರು ಲಕ್ಷ ಎಕರೆ ಭೂಮಿಗೆ ವಿಸ್ತರಿಸಲಾಯಿತು.ಮೂರು ದೊಡ್ಡ ಹಾಗೂ ೧೨ ಮಧ್ಯಮ ಗಾತ್ರದ ಯೋಜನೆಗಳನ್ನು ರೂ.೭೮.೬೯ ಕೋಟಿ ಅಂದಾಜು ವೆಚ್ಚದಲ್ಲಿ ಕಟ್ಟಲು ಕೈಗೆತ್ತಿಕೊಳ್ಳಲಾಯಿತು.೨೬೯.೫ ದಶಲಕ್ಷ ಕಿಲೋವ್ಯಾಟ್‌ಗಳಷ್ಟು ವಿದ್ಯುತ್ತನ್ನು ಉತ್ಪಾದಿಸಲಾಯಿತು.

**ಮೂರನೇ ಯೋಜನೆ (೧೯೬೧-೬೬)**: ಇದೊಂದು ರಾಜ್ಯದ ಆರ್ಥಿಕ ಅಭಿವೃದ್ಧಿಗೆ ಪ್ರಥಮ ವ್ಯಾಪಕವಾದ ಯೋಜನೆಯಾಯಿತು. ಇದರ ಅಂದಾಜು ವೆಚ್ಚ ರೂ. ೨೪೬.೨೨ ಕೋಟಿ ಮತ್ತು ವೆಚ್ಚ ಮಾಡಿದ್ದು ರೂ.೨೬೪.೭೫ ಕೋಟಿ ಶೇ.೪೧ರಷ್ಟು ಹಣವನ್ನು ನೀರಿನ ಸೂಕ್ತ ಬಳಕೆ ಮತ್ತು ವಿದ್ಯುತ್ ಅಭಿವೃದ್ಧಿ, ಶೇ.೧೮.೪೬ ವ್ಯವಸಾಯ ಮತ್ತು ಅದರ ಅವಲಂಬಿತ ಚಟುವಟಿಕೆಗಳಿಗೆ ವೆಚ್ಚ ಮಾಡಲಾಯಿತು. ವೆಚ್ಚ ಮಾಡಿದ ಹಣ ತಲಾವಾರು ರೂ. ೬೪.೫ ಇದ್ದದ್ದು ರೂ.೧೦೬ಕ್ಕೆ ಏರಿತು. ಈ ಯೋಜನೆಯಲ್ಲಿ ಪ್ರಮುಖವಾಗಿ ಹಾರಂಗಿ, ಹೇಮಾವತಿ, ಕೃಷ್ಣಾ ಮೇಲ್ದಂಡೆ ಮತ್ತು ಮಲಪ್ರಭಾ

ಯೋಜನೆಗಳು ಸೇರಿದ್ದವು. ೧೯೬೬-೬೭ರಲ್ಲಿ ವಾರ್ಷಿಕ ಯೋಜನೆಗೆ ನಿಗದಿಪಡಿಸಿದ ವೆಚ್ಚ ರೂ. ೫೪.೬೮ ಕೋಟಿಗಳಾಗಿತ್ತು. ೧೯೬೬-೬೯ರ ವರೆಗಿನ ಮೂರು ವಾರ್ಷಿಕ ಯೋಜನೆಗಳು ಸಹ ರಾಜ್ಯದ ಅಭಿವೃದ್ಧಿಗೆ ಸಹಕಾರಿಯಾಗಿವೆ.

**ನಾಲ್ಕನೇ ಯೋಜನೆ (೧೯೬೯-೭೪)** : ಈ ಯೋಜನೆಯಲ್ಲಿ ಒತ್ತುಕೊಟ್ಟ ಅಂಶಗಳೆಂದರೆ (ಅ) ಪ್ರಾದೇಶಿಕ ಬೆಳವಣಿಗೆ (ಬ) ಜಿಲ್ಲಾವಾರು ಯೋಜನೆಗಳ ಪ್ರಕ್ರಮ. ಈ ಯೋಜನೆಯಲ್ಲಿ ಕೃಷಿಯಲ್ಲಿ ಶೇ.೫.೬ ಹೆಚ್ಚಳವನ್ನು ಸಾಧಿಸಲು ಅನೇಕ ಕ್ರಮಗಳನ್ನು ಕೈಗೊಳ್ಳಲಾಯಿತು.ರೂ. ೩೮೬.೮೨ ಕೋಟಿ ಹಣವನ್ನು ವೆಚ್ಚಮಾಡಲಾಯಿತು.

**ನಾಲ್ಕನೇ ಯೋಜನೆಯ ಸಾಧನೆಗಳು:** ೧೯೬೯-೭೦ ರಲ್ಲಿದ್ದ ಒಟ್ಟು ೧೩.೧೫ಲಕ್ಷ ಹೆಕ್ಟೇರು ನೀರಾವರಿ ಕ್ಷೇತ್ರವು, ೧೯೭೩-೭೪ರಲ್ಲಿ ೧೫.೯೪ ಲಕ್ಷ ಹೆಕ್ಟೇರಿಗೇರಿತು. ವಿದ್ಯುಚ್ಛಕ್ತಿಯ ಸ್ಥಾಪಿತ ಸಾಮರ್ಥ್ಯವು ೮೭೭.೫ ಮೆ.ವ್ಯಾ.ನಿಂದ ನಾಲ್ಕನೇ ಯೋಜನೆಯ ಅಂತ್ಯಕ್ಕೆ ೯೬೬.೬ ಮೆಗಾವ್ಯಾಟಿಗೇರಿತ್ತು. ವಿದ್ಯುಚ್ಛಕ್ತಿಯ ತಲಾ ಬಳಕೆ ೮೨ ಯೂನಿಟ್ ನಿಂದ ೧೨೧ ಯೂನಿಟ್‌ಗೇರಿತು. ಕೃಷಿ ಕ್ಷೇತ್ರದಲ್ಲಿದ್ದ ೧,೦೦,೨೮,೦೦೦ ಹೆಕ್ಟೇರು ಭೂಮಿ ೧,೭೫,೦೪,೦೦೦ ಹೆಕ್ಟೇರಿಗೇರಿತು. ೫೬,೩೮,೦೦೦ ಲಕ್ಷ ಟನ್‌ಗಳಷ್ಟಿದ್ದ ಆಹಾರ ಧಾನ್ಯ ಉತ್ಪಾದನೆ ೬೬,೪೧,೦೦೦ ಟನ್ನನ್ನು ತಲುಪಿತು.

**ಐದನೇ ಯೋಜನೆ (೧೯೭೪-೭೯)** : ಈ ಯೋಜನೆಯ ಮುಖ್ಯ ಲಕ್ಷಣವೆಂದರೆ ಬಡತನವನ್ನು ನಿರ್ಮೂಲ ಮಾಡಿ ಆರ್ಥಿಕ ಸ್ವಾವಲಂಬನೆಯನ್ನುಸಾಧಿಸುವುದು.ಮುಖ್ಯ ಉದ್ದೇಶಗಳೆಂದರೆ (೧) ವಾರ್ಷಿಕ ವೃದ್ಧಿಯನ್ನು ಶೇ.೮.೫ ರಷ್ಟು ಸಾಧಿಸಿ, ತಲವಾರು ಆದಾಯವನ್ನು ರಾಷ್ಟ್ರಮಟ್ಟದ ತಲಾ ಆದಾಯಕ್ಕೆ ಏರಿಸುವುದು. (೨) ವಿದ್ಯುಚ್ಛಕ್ತಿ ಮತ್ತು ಸಂಪರ್ಕ ಸಾಧನೆಗೆ ಹೆಚ್ಚಿನ ಆದ್ಯತೆಯನ್ನೀಯುವುದು (೩) ಪಟ್ಟಣ ಮತ್ತು ಗ್ರಾಮೀಣ ಭಾಗದಲ್ಲಿ ಹೆಚ್ಚು ಹೆಚ್ಚಿನ ಉತ್ಪಾದನಾ ಉದ್ದೇಶಿತ ಉದ್ಯೋಗಗಳನ್ನು ಕಲ್ಪಿಸುವುದು. (೪) ರಾಜ್ಯದಲ್ಲಿ ವಿಸ್ತೃತ, ಹೆಚ್ಚು ವೈವಿಧ್ಯಮಯ ಮತ್ತು ವಿಕೇಂದ್ರೀಕೃತ ಉದ್ದಿಮೆಯ ತಳಹದಿಯನ್ನುಂಟು ಮಾಡುವುದು.

ಈ ಯೋಜನೆಯ ಒಟ್ಟು ಅಂದಾಜು ವೆಚ್ಚ ರೂ. ೧,೦೭೬.೩೩ ಕೋಟಿ ಮತ್ತು ೧೯೭೭-೭೮ರ ಹೊತ್ತಿಗೆ ವೆಚ್ಚ ಮಾಡಿದ್ದು ರೂ. ೮೫೨.೩೯ ಕೋಟಿ. ಈ ಯೋಜನೆಯು ೧೯೭೮-೭೯ಕ್ಕೆ ಅಂತ್ಯಗೊಳ್ಳುವ ಬದಲು, ೧೯೭೭-೭೮ಕ್ಕೆ ಮುಕ್ತಾಯವಾಯಿತು. ಇದರಿಂದ ಆಯೋಜಿಸಿದ ಹಣವು ನೂರಕ್ಕೆ ನೂರರಷ್ಟು ವೆಚ್ಚವಾಯಿತು. ೧೯೭೩-೭೪ ರಿಂದ ೧೯೭೭-೭೮ನೇ ಅವಧಿಯಲ್ಲಿ ಸರಾಸರಿ ವಾರ್ಷಿಕ ಬೆಳವಣಿಗೆಯು ಚಾಲ್ತಿ ದರದಲ್ಲಿ ೭.೧ ಇದ್ದರೆ, ೧೯೫೬-೫೭ರ ಸ್ಥಿರ ದರದಲ್ಲಿ ಆರು ಇದ್ದಿತು. ಈ ಯೋಜನೆಯ ಅಂತ್ಯದಲ್ಲಿ ಚಾಲ್ತಿ ದರದಲ್ಲಿ ರಾಜ್ಯದ ಆದಾಯವು ರೂ.೨,೯೧೩ ಕೋಟಿ ಮತ್ತು ತಲಾವಾರು ಆದಾಯವು ಚಾಲ್ತಿ ದರದಲ್ಲಿ ರೂ.೮೪೦ ಇದ್ದಿತು.

ಈ ಯೋಜನೆಯ ಕೊನೆಯ ವರ್ಷ ೧೯೭೮-೭೯ ಹಾಗೂ ಅದರ ಮುಂದಿನ ವರುಷ ೧೯೭೯-೮೦ ಈ ಅವಧಿಯನ್ನು ವಾರ್ಷಿಕ ಯೋಜನೆಗಳೆಂದು ಕರೆಯಲಾಯಿತು ಮತ್ತು ಅಂದಾಜು ವೆಚ್ಚ ೧೯೭೮-೭೯ರಲ್ಲಿ ರೂ.೩೪೫.೨೨ ಕೋಟಿ ಹಾಗೂ ೧೯೭೯-೮೦ರಲ್ಲಿ ರೂ. ೩೮೫.೩೯ ಕೋಟಿ ಅನುದಾನವಿತ್ತು. ಈ ಅವಧಿಯಲ್ಲಿ ವೆಚ್ಚವು ಕ್ರಮವಾಗಿ ರೂ. ೩೦೩ ಕೋಟಿ ಮತ್ತು ರೂ.೩೪೫ ಕೋಟಿ ಇದ್ದಿತು.

**ಆರನೇ ಯೋಜನೆ (೧೯೮೦-೮೫):** ಪ್ರಮುಖ ಲಕ್ಷಣಗಳೆಂದರೆ ೧೯೮೮ರ ಹೊತ್ತಿಗೆ ಸಂಪೂರ್ಣ ಉದ್ಯೋಗ ಹಾಗೂ ರಾಜ್ಯದ ಸಂಪನ್ಮೂಲಗಳ ಗರಿಷ್ಠ ಬಳಕೆ ಮತ್ತು ಪ್ರತಿ ಶತ ೬.೫ ಅಭಿವೃದ್ಧಿಯನ್ನು ಸಾಧಿಸುವುದು ಮತ್ತು ಪ್ರತಿಶತ ತಲಾ ಆದಾಯವನ್ನು ರೂ.೧,೧೧೫(೧೯೭೯-೮೦) ರಿಂದ ರೂ.೧,೫೦೦ಕ್ಕೆ ಏರಿಸುವುದು. ಸೂಚಿತ ಅಂದಾಜು ವೆಚ್ಚ ರೂ.೨,೪೦೦ ಕೋಟಿ. ಭೌತಿಕ ಸಾಧನೆಗಳೆಂದರೆ ಆಹಾರ ಉತ್ಪಾದನೆಯನ್ನು ೫೭.೭೪ ಲಕ್ಷ ಟನ್ನುಗಳಿಂದ ೧೯೮೦-೮೨ರ ಹೊತ್ತಿಗೆ ೬೭.೩೭ ಲಕ್ಷ ಟನ್ನುಗಳಿಗೆ ಏರಿಸಿದ್ದು, ವಿದ್ಯುತ್ ಒದಗಿಸಿದ ಹಳ್ಳಿಗಳ ಸಂಖ್ಯೆ ೧೭,೬೨೬ಕ್ಕೆ ಹೆಚ್ಚಿಸಿದ್ದು, ೧೯೮೧-೮೨ ರಲ್ಲಿ ವಿದ್ಯುಚ್ಛಕ್ತಿ ಸಾಮರ್ಥ್ಯವನ್ನು ೧೮೪೭ ಮೆಗಾವ್ಯಾಟಿಗೇರಿಸಿದ್ದು, ರೂ.೩೩೨ ಕೋಟಿ ಬಂಡವಾಳವನ್ನು ತೊಡಗಿಸಿ, ೩.೨೫ ಲಕ್ಷ ಕಾರ್ಮಿಕರಿಗೆ ಉದ್ಯೋಗ ಒದಗಿಸಲಾಯಿತು.೩೯,೯೨೭ ಸಣ್ಣ ಕೈಗಾರಿಕಾ ಘಟಕಗಳನ್ನು ಸ್ಥಾಪಿಸಲಾಯಿತು.ಈ ಸಮಯದಲ್ಲಿ ಭೀಕರ ಬರಗಾಲವು ಕಾಣಿಸಿಕೊಂಡು ಕೃಷಿ ಉತ್ಪನ್ನವನ್ನು ತಗ್ಗಿಸಿತಲ್ಲದೆ ವಿದ್ಯುತ್ ಕೊರತೆಯನ್ನುಂಟುಮಾಡಿ ಕೈಗಾರಿಕೆಗಳಿಗೆ ಬಲವಾದ ಪೆಟ್ಟನ್ನಿತ್ತಿತು.

**ಏಳನೇ ಯೋಜನೆ (೧೯೮೫-೯೦):** ಈ ಯೋಜನೆಯ ಸೂಚಿತ ವೆಚ್ಚ ರೂ.೩,೫೭೫ ಕೋಟಿ ಮತ್ತು ವೆಚ್ಚವಾದದ್ದು ರೂ. ೪,೦೫೬.೪ ಕೋಟಿ. ಏಳನೇ ಯೋಜನೆಯ ಅವಧಿಯಲ್ಲಿ ವಾರ್ಷಿಕ ಸರಾಸರಿ ರಾಜ್ಯದ ಆಂತರಿಕ ಉತ್ಪನ್ನಗಳ ವೃದ್ಧಿಯನ್ನು ಶೇ.ಐದು ಎಂದು ನಿರ್ಧರಿಸಲಾಯಿತು. ಇದು ರಾಷ್ಟ್ರೀಯ ಮಟ್ಟದಲ್ಲಿ ಶೇ.೫.೬ ಇದ್ದಿತು. (ರಾಜ್ಯದ ಖಾಸಗಿ ಉತ್ಪನ್ನವು ನಿಜವಾದ ಆರ್ಥಿಕ ಹುಟ್ಟುವಳಿಯ ವೃದ್ಧಿಯನ್ನು ಪ್ರತಿಬಿಂಬಿಸುತ್ತದೆ) ಕೃಷಿ ಮತ್ತು ಕೃಷಿ ಅವಲಂಬಿತ ಚಟುವಟಿಕೆಗಳ ವಾರ್ಷಿಕ ಸರಾಸರಿ ವೃದ್ಧಿ ಏಳನೇ ಯೋಜನೆಯಲ್ಲಿ ರಾಜ್ಯದೊಳಗೆ ಶೇಕಡಾ ೨.೧ ಇದ್ದಿತು. (ಅಖಿಲ ಭಾರತದ ಮಟ್ಟದಲ್ಲಿ ಶೇ.೩.೪ರಷ್ಟಿತ್ತು). ಔದ್ಯೋಗಿಕ ಉತ್ಪತ್ತಿಯ ವೃದ್ಧಿ ಶೇ.೬.೬ರಷ್ಟಿತ್ತು. (ಅಖಿಲ ಭಾರತದ ಮಟ್ಟದಲ್ಲಿ ಇದು ಶೇ.೭.೫ ಮಟ್ಟದಲ್ಲಿತ್ತು) ರಾಜ್ಯದಲ್ಲಿದ್ದ ಅಸಂಘಟಿತ ವಲಯದಲ್ಲಿದ್ದ ಉದ್ದಿಮೆಗಳು ೧೯೮೦ರ ಪ್ರಾರಂಭದಲ್ಲಿ ರಾಜ್ಯದ ಒಟ್ಟು ಉತ್ಪಾದನೆಯಲ್ಲಿ ಶೇ.೫೦ ರಷ್ಟು ಉತ್ಪಾದಿಸುತ್ತಿದ್ದವು. ನಂತರ ಇದು ಇಳಿಮುಖವಾಯಿತು. ರಾಜ್ಯದ ಆರ್ಥಿಕ ಬೆಳವಣಿಗೆಯ ವೃದ್ಧಿಯಲ್ಲಿ ಮಂದಗತಿ ಕಾಣಿಸಿಕೊಳ್ಳಲು ಮುಖ್ಯ ಕಾರಣವೆಂದರೆ, ನೀರಾವರಿ ಸಾಮರ್ಥ್ಯವನ್ನು ನಿರ್ಮಿಸುವಲ್ಲಿ ಕಂಡುಬಂದ ಮಂದಗತಿಯ ಬೆಳವಣಿಗೆ ಹಾಗೂ ಮೇಲಿಂದ ಮೇಲೆ ಸಂಭವಿಸಿದ ಬರಗಾಲಗಳು ಹಾಗೂ ಸ್ಥಗಿತ ವಿದ್ಯುತ್ ಕೊರತೆ. ಬಿತ್ತಿದ ಒಟ್ಟು ನೆಲದ ಶೇ.ಸುಮಾರು ೭೫ ರಷ್ಟು ಭೂಮಿ ಇಂದಿಗೂ ಮಳೆ ನೀರನ್ನೇ ಅವಲಂಬಿಸಿದೆ.

ರಾಜ್ಯದ ಸೂಚಿತ ಯೋಜನಾ ವೆಚ್ಚದಲ್ಲಿ ಗಣನೀಯವಾಗಿ ಏರಿಕೆಯಾಯಿತಲ್ಲದೆ, ಇದು ನಿಜವಾದ ಸ್ವರೂಪದಲ್ಲಿ ಎರಡನೇ ಯೋಜನೆಯ ಹತ್ತುಪಟ್ಟು ದೊಡ್ಡದಾಯಿತು. ಆರು ಮತ್ತು ಏಳನೇ ಯೋಜನೆಗಳಲ್ಲಿ ಕೇಂದ್ರ ಸರ್ಕಾರವು ಬೆಂಬಲಿಸಿದ ಕಾರ್ಯಕ್ರಮಗಳಲ್ಲಿ ಬಂಡವಾಳ ಹೆಚ್ಚಾಯಿತು. ಖಾಸಗೀ ವಲಯದಲ್ಲಿಯೂ ಬಂಡವಾಳ ಹೂಡಿಕೆ ಗಣನೀಯವಾಗಿ ಹೆಚ್ಚಾಯಿತು.

ರಾಜ್ಯದ ಯೋಜನೆಗಳ ವೆಚ್ಚದಲ್ಲಿ ಗಣನೀಯ ಕೊರತೆ ಕಂಡು ಬಂದಿತು. ಐದನೇ ಯೋಜನೆಯಲ್ಲಿ, ಒಟ್ಟು ಯೋಜನಾ ವೆಚ್ಚದಲ್ಲಿ ರಾಜ್ಯಗಳ ಪಾಲು ಶೇ.೫.೫ ರಷ್ಟಿದ್ದರೆ, ರಾಜ್ಯದ ಪಾಲಿನ ಪ್ರಮಾಣ ಏಳನೇ ಯೋಜನೆಯಲ್ಲಿ ಶೇ.೪.೪ಕ್ಕೆ ಇಳಿಯಿತು.ಅದು ೧೯೯೦-೯೨ರ ವಾರ್ಷಿಕ ಯೋಜನೆಯಲ್ಲಿ ಶೇ.೫.೪ ರಷ್ಟಾಯಿತು.

**ಎಂಟನೇ ಯೋಜನೆ (೧೯೯೨-೯೭):** ಎಂಟನೇ ಪಂಚವಾರ್ಷಿಕ ಯೋಜನೆಯ ಅಂದಾಜು ಅನುದಾನ ೧೯೯೧-೯೨ ರ ಬೆಲೆಗಳಲ್ಲಿ ರೂ.೧೨,೩೦೦ ಕೋಟಿಗಳಾಗಿದ್ದು ಈ ಮೊತ್ತ ಏಳನೇ ಯೋಜನೆಯ ವೆಚ್ಚ ರೂ.೩,೫೦೦ ಕೋಟಿಗಳಗಿಂತ ಎರಡು ಪಟ್ಟಿಗೂ ಹೆಚ್ಚಾಗಿತ್ತು. ವಾರ್ಷಿಕ ಅನುದಾನ ರೂ.೧೬,೧೫೦ ಕೋಟಿಗಳಿದ್ದು, ವಾಸ್ತವಿಕ ವೆಚ್ಚ ರೂ.೧೪,೮೯೪ ಕೋಟಿಗಳೊಂದಿಗೆ ಶೇ.೮ ಇಳಿಮುಖವಾಗಿತ್ತು. ವಾಸ್ತವಿಕ ಅಂಶಗಳಲ್ಲಿ, ಏಳನೇ ಯೋಜನೆಯ ಅನುಮೋದಿತ ಅಂದಾಜು ವೆಚ್ಚ ರೂ.೧೨,೩೦೦ ಕೋಟಿಗಳಿಗೆ ಹೋಲಿಸಿದರೆ ಇದು ಶೇ.೮.೩ (ರೂ. ೧೧,೨೭೨ ಕೋಟಿಗಳು) ಇಳಿಮುಖವಾಗಿತ್ತು. ಮೂಲ ಉದ್ದೇಶಗಳೊಂದಿಗೆ ಹೋಲಿಸಿದರೆ ಎಂಟನೇ ಯೋಜನೆಯ ಸಾಧನೆಗಳು ಈ ರೀತಿ ಇವೆ.

(೧) ಸರಾಸರಿ ವಾರ್ಷಿಕ ಬೆಳವಣಿಗೆ ಶೇ.೫.೬ರಷ್ಟು (೨) ಬಡತನದ ರೇಖೆಗಿಂತ ಕೆಳಗಿರುವ್ ಜನರ ಪ್ರಮಾಣ ಶೇ.೩೮ ರಿಂದ ಶೇ.೨೫ಕ್ಕೆ ಇಳಿಮುಖ; (೩) ೧೫ ರಿಂದ ೨೦ ಲಕ್ಷ ಉದ್ಯೋಗಾವಕಾಶಗಳ ಸೃಷ್ಟಿ; (೪) ನೀರಾವರಿ ಮತ್ತು ವಿದ್ಯುತ್ ನಿರ್ವಹಣಾ ಸಾಮರ್ಥ್ಯದ ಹೆಚ್ಚಳ ಮತ್ತು (೫) ಮನೆ, ಆರೋಗ್ಯ ಶಿಕ್ಷಣ ಮತ್ತು ನೀರು ಸರಬರಾಜುಗಳಂತಹ ಮೂಲ ಸೌಲಭ್ಯಗಳಲ್ಲಿ ಹೆಚ್ಚಳ.

**ಒಂಬತ್ತನೇ ಪಂಚವಾರ್ಷಿಕ ಯೋಜನೆ (೧೯೯೭-೦೨):** ಒಂಬತ್ತನೇ ಪಂಚವಾರ್ಷಿಕ ಯೋಜನೆಗೆ ಯೋಜನಾ ಆಯೋಗದ ಅನುದಾನ ೧೯೯೬-೯೭ರಲ್ಲಿದ್ದ ಬೆಲೆಗಳಲ್ಲಿ ಸುಮಾರು ರೂ.೨೩,೪೦೦ ಕೋಟಿಗಳಾಗಿತ್ತು.ಇದು ಎಂಟನೇ ಯೋಜನೆಯ ಅಂದಾಜು ವೆಚ್ಚ ೧೯೯೧ರ ಬೆಲೆಗಳಲ್ಲಿ ರೂ.೧೨,೩೦೦ ಕೋಟಿಗಳ ಮಟ್ಟಕ್ಕಿಂತ ಸುಮಾರು ಎರಡು ಪಟ್ಟು ಹೆಚ್ಚಾಗಿತ್ತು ಮತ್ತು ಎಂಟನೇ ಯೋಜನೆಯ ವೆಚ್ಚ ರೂ.೧೪,೮೯೪ ಕೋಟಿಗಳಗಿಂತ ಶೇ.೫೭ರಷ್ಟು ಹೆಚ್ಚಾಗಿತ್ತು.ಬದಲಾದ ರಾಷ್ಟ್ರೀಯ ಪರಿಸ್ಥಿತಿ ಮತ್ತು ತತ್ಕಾರಣವಾಗಿ ಯೋಜನೆಗಳ ನಿರೀಕ್ಷಿತ ಪಾತ್ರ, ರಾಜ್ಯದ ಆರ್ಥಿಕ ಸ್ಥಿತಿಯ ಬಲಗಳು ಮತ್ತು ದೌರ್ಬಲ್ಯಗಳು ಹಾಗೂ ಅತಿಮುಖ್ಯ ಅಗತ್ಯಗಳನ್ನು ಗಣನೆಗೆ ತೆಗೆದುಕೊಂಡು ಒಂಭತ್ತನೇ ಯೋಜನೆಯನ್ನು ರೂಪಿಸಲಾಯಿತು.ರಾಜ್ಯದ ಬೆಳವಣಿಗೆ ದರ ರಾಷ್ಟ್ರದ ಬೆಳವಣಿಗೆ ದರಗಳೊಂದಿಗೆ ಚಲಿಸಬೇಕು ಹಾಗೂ ಅದನ್ನು ಮೀರಿಸಬೇಕು. ವಿವಿಧ ವಲಯಗಳ ಉತ್ಪಾದಕತೆ ಹೆಚ್ಚಾಗಬೇಕು. ಪ್ರಾಥಮಿಕ ವಲಯದಲ್ಲಿ ಅಡಗಿಕೊಂಡಿರುವ ನಿರುದ್ಯೋಗವನ್ನು ನಿರ್ಮೂಲನೆ ಮಾಡಲು ದ್ವಿತೀಯ ಮತ್ತು ತೃತೀಯ ವಲಯಗಳಲ್ಲಿ ಉದ್ಯೋಗಾವಕಾಶಗಳನ್ನು ಕಲ್ಪಿಸುವ ಮೂಲಕ ಬೆಳೆಯುತ್ತಿರುವ ನಿರುದ್ಯೋಗ ಸಮಸ್ಯೆಯನ್ನು ನಿಯಂತ್ರಿಸಬೇಕಾದ ಅಗತ್ಯವಿದೆ.ಅಭಿವೃದ್ಧಿ ಪ್ರಯತ್ನಗಳ ಅಂತಿಮ ಗುರಿ ಮಾನವ ಅಭಿವೃದ್ಧಿಯ ಎರಡು ಮೂಲ ಅಗತ್ಯಗಳಾದಂತಹ ಬಡತನ ನಿವಾರಣೆ ಮತ್ತು ಜೀವನಮಟ್ಟ ಉತ್ತಮಪಡಿಸುವುದು.ಈ ಒಟ್ಟಾರೆ ಗುರಿಯಲ್ಲಿ ಅಸಮಾನತೆ ಮತ್ತು ಅನ್ಯಾಯಗಳನ್ನು ಸರಿಪಡಿಸುವುದು, ಲಿಂಗ ಸಮಾನತೆಯನ್ನು ಸಾಧಿಸುವುದೇ ಆಗಿದೆ.ಗಮನ ಹರಿಸಬೇಕಾದಂತಹ ಪ್ರಮುಖ ಅಂಶಗಳೆಂದರೆ, ಮೂಲಭೂತ ಸೌಲಭ್ಯಗಳಾದ ಶಿಕ್ಷಣ, ಆರೋಗ್ಯ, ಕುಡಿಯುವ ನೀರು, ನೈರ್ಮಲ್ಯ ಮತ್ತು ವಾಸಗೃಹಗಳನ್ನು ಒದಗಿಸುವುದು.

**ಹತ್ತನೇ ಪಂಚವಾರ್ಷಿಕ ಯೋಜನೆ (೨೦೦೨-೦೭):** ಹತ್ತನೇ ಪಂಚವಾರ್ಷಿಕ ಯೋಜನೆಯ ಯೋಜನಾ ಆಯೋಗದ ಅನುದಾನ ೨೦೦೧-೦೨ರಲ್ಲಿದ್ದ ಬೆಲೆಗಳಲ್ಲಿ ರೂ.೪೩,೫೫೮ ಕೋಟಿಗಳು. ಇದು ಒಂಭತ್ತನೇ ಯೋಜನೆಯ ಅನುದಾನದ ರೂ.೨೩,೪೦೦ ಕೋಟಿಗಳಗಿಂತ ಶೇ.೮೬ ಹೆಚ್ಚಾಗಿದ್ದಿತು.೨೦೦೨-೦೩ರ ವಾರ್ಷಿಕ ಅನುದಾನ ರೂ. ೮,೬೧೦.೬೧ ಕೋಟಿಗಳಿದ್ದು ವಾಸ್ತವಿಕ ವೆಚ್ಚ ರೂ. ೮,೧೬೩.೯೨ ಕೋಟಿಗಳಾಗಿತ್ತು. ೨೦೦೪-೦೫ರ ವಾರ್ಷಿಕ ಅನುದಾನ ರೂ. ೧೨,೩೨೨.೯೨ ಕೋಟಿಗಳು, ಇದು ೨೦೦೩-೦೪ರ ಅನುದಾನ ರೂ.೯೭೭೯.೭೫ ಕೋಟಿಗಳಗಿಂತ ಶೇ.೨೬ ಹೆಚ್ಚಾಗಿದ್ದಿತು ಹಾಗೂ ಹತ್ತನೇ ಯೋಜನೆಯ ಅನುದಾನ ರೂ.೪೩,೫೫೮ ಕೋಟಿಗಳ ಶೇ.೨೮ ಆಗಿತ್ತು. ಹತ್ತನೇ ಪಂಚವಾರ್ಷಿಕ ಯೋಜನೆಯ ಅನುದಾನ ಮತ್ತು ವೆಚ್ಚವನ್ನು ಈ ಕೆಳಗೆ ಕೊಡಲಾಗಿದೆ.

**ಹತ್ತನೇ ಪಂಚವಾರ್ಷಿಕ ಯೋಜನೆಯಡಿ (೨೦೦೨-೦೩ ರಿಂದ ೨೦೦೬-೦೭) ಅನುದಾನ ಮತ್ತು ವೆಚ್ಚಗಳ ವಿವರ**

| ವರ್ಷ | ಅನುದಾನ (ಆಯ ವ್ಯಯ ಅಂದಾಜು) | ವೆಚ್ಚ |
|---|---|---|
| ೨೦೦೨-೦೩ | ೮,೬೧೦.೬೧ | ೮,೧೬೩.೯೨ |
| ೨೦೦೩-೦೪ | ೯,೭೭೯.೭೫ | ೮,೬೧೯.೪೫ |
| ೨೦೦೪-೦೫ | ೧೨,೩೨೨.೯೨ | ೧೧,೮೮೮.೭೦ |
| ೨೦೦೫-೦೬ | ೧೩,೫೫೫.೦೦ | ೧೨,೮೫೨.೮೪* |
| ೨೦೦೬-೦೭ | ೧೬,೧೬೬.೦೦ | ೧೬,೧೬೬.೦೦* |

*ಪರಿಷ್ಕೃತ ಅಂದಾಜುಗಳು

**ಹನ್ನೊಂದನೇ ಪಂಚವಾರ್ಷಿಕ ಯೋಜನೆ (೨೦೦೭-೧೨):** ಹನ್ನೊಂದನೇ ಪಂಚವಾರ್ಷಿಕ ಯೋಜನೆಯ ಅಂದಾಜು ವೆಚ್ಚ ರೂ.೯೬,೭೦೩ ಕೋಟಿಗಳಾಗಿದ್ದು, ಇದು ಹತ್ತನೇ ಪಂಚವಾರ್ಷಿಕ ಯೋಜನೆಯ ಅಂದಾಜು ವೆಚ್ಚ ರೂ.೪೩,೫೫೮ ಕೋಟಿಗಳಗಿಂತ ಶೇ.೧೨೨ ಹೆಚ್ಚಾಗಿರುವುದನ್ನು ತೋರಿಸುತ್ತದೆ.೨೦೦೭-೦೮ರ ವಾರ್ಷಿಕ ಅಂದಾಜು ವೆಚ್ಚ ರೂ. ೧೭,೭೮೩ ಕೋಟಿಗಳಾಗಿದ್ದು ಇದು ೨೦೦೬-೦೭ರ ಆಯವ್ಯಯ ಅನುದಾನ ರೂ.೧೬,೧೬೬ ಕೋಟಿಗಳಗಿಂತ ಶೇ.೧೦ ಹೆಚ್ಚಾಗಿತ್ತು ಹಾಗೂ ಇದು ಹನ್ನೊಂದನೇ ಪಂಚವಾರ್ಷಿಕ ಯೋಜನೆಯ ಅಂದಾಜು ವೆಚ್ಚದ ಶೇ. ೧೮.೪ ಆಗಿತ್ತು. ಹನ್ನೊಂದನೇ ಪಂಚವಾರ್ಷಿಕ ಯೋಜನೆಯ ಜಿಲ್ಲಾ ಯೋಜನೆ ರೂ.೧೦,೮೦೦ ಕೋಟಿಗಳು ಮತ್ತು ೨೦೦೭-೦೮ ವಾರ್ಷಿಕ ಯೋಜನೆ ರೂ.೧,೯೮೦

ಕೋಟಿಗಳು. ೨೦೦೭-೦೮ರ ವಾರ್ಷಿಕ ಯೋಜನೆಯಲ್ಲಿ ಬಾಹ್ಯ ಅನುದಾನ ಯೋಜನೆಗಳ ಅಂದಾಜು ವೆಚ್ಚ ರೂ.೩,೦೨೫.೫೧ ಕೋಟಿಗಳು ಹಾಗೂ ಹನ್ನೊಂದನೇ ಪಂಚವಾರ್ಷಿಕ ಯೋಜನೆಯಲ್ಲಿ ರೂ.೧೨,೦೪೧.೪೦ ಕೋಟಿಗಳು. ವಿಶೇಷ ಘಟಕ ಯೋಜನೆಯಡಿಯಲ್ಲಿ ೨೦೦೭-೦೮ರ ವಾರ್ಷಿಕ ಯೋಜನೆಯಲ್ಲಿ ರೂ.೨,೯೧೬.೪೨ ಕೋಟಿಗಳು ಮತ್ತು ಪರಿಶಿಷ್ಟ ಜಾತಿಗಳ ಕಲ್ಯಾಣಕ್ಕಾಗಿ ಹನ್ನೊಂದನೇ ಪಂಚವಾರ್ಷಿಕ ಯೋಜನೆಯಲ್ಲಿ ರೂ. ೧೫,೮೫೮.೩೬ ಕೋಟಿಗಳನ್ನು ಮೀಸಲಿಡಲಾಗಿತ್ತು. ಗಿರಿಜನ ಉಪಯೋಜನೆಯಲ್ಲಿ ಗಿರಿಜನ ಪಂಗಡಗಳ ಕಲ್ಯಾಣಕ್ಕಾಗಿ ೨೦೦೭-೦೮ರ ವಾರ್ಷಿಕ ಯೋಜನೆಯಲ್ಲಿ ರೂ.೧,೧೨೯.೧೨ ಕೋಟಿಗಳು ಮತ್ತು ಹನ್ನೊಂದನೇ ಪಂಚವಾರ್ಷಿಕ ಯೋಜನೆಯಲ್ಲಿ ರೂ.೬,೧೪೩.೫೪ ಕೋಟಿಗಳನ್ನು ಮೀಸಲಿಡಲಾಗಿತ್ತು.

**ಆದ್ಯತೆಗಳು**:ಹನ್ನೊಂದನೇ ಪಂಚವಾರ್ಷಿಕ ಯೋಜನೆಯಲ್ಲಿ, ಶೇ.೩೮.೩೬ ರಷ್ಟು ನೀರಾವರಿ ಮತ್ತು ವಿದ್ಯುತ್ ವಲಯಗಳಿಗೆ ಮೀಸಲಿಡಲಾಗಿತ್ತು, ಹಾಗೆಯೇ ಶೇ.೩೩.೫೮ ಸಾಮಾಜಿಕ ಸೇವೆಗಳಿಗೆ, ಶೇ.೧೨.೩೯ ಸಾರಿಗೆ, ಶೇ.೪.೭೪ ಗ್ರಾಮೀಣ ಅಭಿವೃದ್ಧಿ, ಶೇ.೪.೨೫ ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳಿಗೆ ಅನುದಾನ ನಿಗದಿಪಡಿಸಲಾಯಿತು. ೨೦೦೭-೦೮ರ ವಾರ್ಷಿಕ ಯೋಜನೆಯಲ್ಲಿ ಶೇ.೩೫.೨೫ ಹಣವನ್ನು ನೀರಾವರಿ ಮತ್ತು ವಿದ್ಯುತ್ ವಲಯಗಳಿಗೆ ಮೀಸಲಿಡಲಾಗಿತ್ತು, ಹಾಗೆಯೇ, ಶೇ.೩೪.೪೧ ಸಾಮಾಜಿಕ ಸೇವೆಗಳಿಗೆ, ಶೇ.೧೩.೩೬ ಸಾರಿಗೆ, ಶೇ.೨.೨೬ ಗ್ರಾಮೀಣ ಅಭಿವೃದ್ಧಿ ಮತ್ತು ಶೇ.೪.೬೫ ಕೃಷಿ ಮತ್ತು ಕೃಷಿ ಸಂಬಂಧಿತ ವಲಯಕ್ಕೆ ಅನುದಾನ ನಿಗದಿಪಡಿಸಲಾಗಿತ್ತು.

**ಹನ್ನೊಂದನೆ ಯೋಜನೆ ೨೦೦೭-೧೨ರಲ್ಲಿ (ಅನುಮೋದಿತ) ಕರ್ನಾಟಕಕ್ಕೆ ಒದಗಿಸಿದ ಅಂದಾಜು ವೆಚ್ಚಗಳು**

| ಕ್ರ ಸಂ. | ವಲಯಗಳು | ಹನ್ನೊಂದನೇ ಯೋಜನೆ ೨೦೦೭-೧೨ರ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|
| ೧ | ಕೃಷಿ ಮತ್ತು ಕೃಷಿ ಸಂಬಂಧ ಚಟುವಟಿಕೆಗಳು | ೪,೧೦,೩೬೨ |
| ೨ | ಗ್ರಾಮೀಣ ಅಭಿವೃದ್ಧಿ | ೪,೫೮,೭೧೯ |
| ೩ | ವಿಶೇಷ ಪ್ರದೇಶಾಭಿವೃದ್ಧಿ ಕಾರ್ಯಕ್ರಮಗಳು | ೬೫,೦೦೦ |
| ೪ | ನೀರಾವರಿ ಮತ್ತು ನೆರೆಹಾವಳಿ ನಿಯಂತ್ರಣ | ೨೮,೭೬,೩೩೫ |
| ೫ | ಇಂಧನ ವಲಯ | ೧೨,೨೪,೮೧೫ |
| ೬ | ಉದ್ಯಮಗಳು ಮತ್ತು ಖನಿಜಗಳು | ೧,೧೯,೭೮೬ |
| ೭ | ಸಾರಿಗೆ | ೧೧,೯೮,೪೨೭ |
| ೮ | ವಿಜ್ಞಾನ, ತಂತ್ರಜ್ಞಾನ ಮತ್ತು ಪರಿಸರ | ೧,೩೦,೩೩೬ |
| ೯ | ಸಾಮಾನ್ಯ ಆರ್ಥಿಕ ಸೇವೆಗಳು | ೨,೩೪,೧೩೦ |
| ೧೦ | ಸಾಮಾಜಿಕ ಸೇವೆಗಳು | ೩೨,೩೧,೮೯೯ |
| ೧೧ | ಸಾಮಾನ್ಯ ಸೇವೆಗಳು | ೧,೨೦,೧೮೦ |
| | **ಒಟ್ಟು ಮೊತ್ತ** | **೯೬,೭೦,೨೮೯** |

ಆಧಾರ: ಕರ್ನಾಟಕ ರಾಜ್ಯ ಕರಡು ವಾರ್ಷಿಕ ಯೋಜನೆ ೨೦೦೭-೦೮ ಸಂಪುಟ I ಮತ್ತು II

**ಆರ್ಥಿಕ ಬೆಳವಣಿಗೆಯ ಪ್ರವೃತ್ತಿ** : ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಸರಾಸರಿ ವಾರ್ಷಿಕ ಬೆಳವಣಿಗೆಯ ದರವು ಸ್ಥಿರ (೨೦೦೪-೦೫) ಬೆಲೆಗಳಲ್ಲಿ ಕಳೆದ ಏಳು ವರ್ಷಗಳಲ್ಲಿ ಅಂದರೆ ೨೦೦೪-೦೫ ರಿಂದ ೨೦೧೦-೧೧ರ ವರೆಗೆ ಶೇ.೮.೭ರಷ್ಟಾಗಿದೆ. ಈ ಅವಧಿಯ ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳು, ಕೈಗಾರಿಕೆ ಹಾಗೂ ಸೇವಾ ವಲಯಗಳಲ್ಲಿನ ಬೆಳವಣಿಗೆ ದರವು ಕ್ರಮವಾಗಿ ಶೇ.೫.೦, ಶೇ.೮.೪ ಹಾಗೂ ಶೇ.೧೦ ರಷ್ಟಾಗಿದೆ. ಸಾಮಾನ್ಯವಾಗಿ ಒಟ್ಟು ರಾಜ್ಯ ಆಂತರಿಕ ಉತ್ಪನ್ನದ ವಾರ್ಷಿಕ ಬೆಳವಣಿಗೆಯ ಪ್ರವೃತ್ತಿಯು ಕೈಗಾರಿಕಾ ಹಾಗೂ ಸೇವಾ ಕ್ಷೇತ್ರದ ಬೆಳವಣಿಗೆಯ ದರಗಳನ್ನು ಅವಲಂಬಿಸಿದೆ.

೨೦೧೫-೧೬ರ ಆರ್ಥಿಕ ಸಮೀಕ್ಷೆ ರಾಜ್ಯದ ಪ್ರಗತಿ ಮತ್ತು ಸಮಸ್ಯೆಗಳ ಬಗ್ಗೆ ಒಂದು ಕ್ಷಿಪ್ರನೋಟವನ್ನು ಒದಗಿಸುತ್ತದೆ. ೨೦೧೨-೧೩ರ ರಾಜ್ಯದ ಆರ್ಥಿಕ ಸ್ಥಿತಿಯು, ಪ್ರತಿಕೂಲ ಋತುಮಾನ ಪರಿಸ್ಥಿತಿಗಳು ಹಾಗೂ ಜಾಗತಿಕ ಮಟ್ಟದಲ್ಲಿ ಆರ್ಥಿಕ ಪ್ರವೃತ್ತಿಗಳು ಇಳಿಮುಖವಾಗಿದ್ದರಿಂದ ಆಶಾದಾಯಕವಾಗಿರಲಿಲ್ಲ. ಆದರೂ ರಾಜ್ಯವು ಸಾರ್ವಜನಿಕ ಸಂಪನ್ಮೂಲಗಳನ್ನು ಸೂಕ್ತರೀತಿಯಲ್ಲಿ ಹೊಂದಿಸಿ ಸಮರ್ಪಕವಾಗಿ ನಿರ್ವಹಣೆ ಮಾಡಿತಲ್ಲದೆ ಆರ್ಥಿಕ ಬೆಳವಣಿಗೆಗೆ ಮೂಲಾಧಾರವಾದ ಪ್ರಮುಖ ಮೂಲಸೌಕರ್ಯಗಳನ್ನು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಗಮನವನ್ನು ಕೇಂದ್ರೀಕರಿಸಿತು. ಜೊತೆಗೆ ರಾಜ್ಯವು ಶಿಕ್ಷಣ, ಆರೋಗ್ಯ, ಕೌಶಲ ಅಭಿವೃದ್ಧಿ ಮತ್ತು ಸಾಮಾಜಿಕ ರಕ್ಷಣೆ ಮುಂತಾದ ಕ್ಷೇತ್ರಗಳಲ್ಲಿ ವಿವಿಧ ನೀತಿಗಳನ್ನು ಜಾರಿಗೊಳಿಸುವ ಮೂಲಕ ಮಧ್ಯಪ್ರವೇಶ ಮಾಡಿ ಪ್ರಜೆಗಳ, ಅದರಲ್ಲೂ ಬಡಜನರ ಜೀವನಮಟ್ಟವನ್ನು ಸುಧಾರಿಸಿತು.

ಎಂಟನೇ ಪಂಚವಾರ್ಷಿಕ ಯೋಜನೆಯಿಂದ ಹನ್ನೊಂದನೇ ಪಂಚವಾರ್ಷಿಕ ಯೋಜನೆಯವರೆಗಿನ ವಲಯವಾರು ಆಂತರಿಕ ಉತ್ಪನ್ನನದ ಬೆಳವಣಿಗೆಯ ದರಗಳನ್ನು ಹೋಲಿಕೆ ಮಾಡಲಾಗಿದೆ. ಒಟ್ಟು ರಾಜ್ಯ ಆಂತರಿಕ ಉತ್ಪನ್ನದ ಸರಾಸರಿ

ವಾರ್ಷಿಕ ಬೆಳವಣಿಗೆಯ ದರವು ಎಂಟು, ಒಂಬತ್ತು ಹಾಗೂ ಹತ್ತನೇ ಪಂಚವಾರ್ಷಿಕ ಯೋಜನೆಗಳಲ್ಲಿ ಕ್ರಮವಾಗಿ ಶೇ.೬.೪, ಶೇ.೮.೩ ಹಾಗೂ ಶೇ.೭.೮ ರಷ್ಟಿರುತ್ತದೆ. ೧೧ನೇ ಪಂಚವಾರ್ಷಿಕ ಯೋಜನೆಯ ಮೊದಲ ನಾಲ್ಕು ವರ್ಷಗಳ ಸರಾಸರಿ ಬೆಳವಣಿಗೆ ದರವು ಕೃಷಿ ಸಂಬಂಧಿತ ವಲಯಗಳಲ್ಲಿ ಶೇ.೫.೭, ಕೈಗಾರಿಕೆ ವಲಯದಲ್ಲಿ ಶೇ.೬ ಮತ್ತು ಸೇವಾ ವಲಯದಲ್ಲಿ ಶೇ.೯ ರಷ್ಟಿತ್ತು.೧೧ನೇ ಪಂಚವಾರ್ಷಿಕ ಯೋಜನೆಯ ಗುರಿಯನ್ನು ತಲುಪಬೇಕಾದರೆ ಈ ಯೋಜನೆಯ ಅಂತಿಮ ವರ್ಷದ ಬೆಳವಣಿಗೆಯು ಕರ್ನಾಟಕದಲ್ಲಿ ೨೦೦೭-೦೮ ರಲ್ಲಿ ಇದ್ದುದಕ್ಕಿಂತಲೂ ಹೆಚ್ಚಿಗೆ ಆಗಬೇಕಾಗುತ್ತದೆ.

**ಎಂಟರಿಂದ ಹನ್ನೊಂದನೆ ಪಂಚವಾರ್ಷಿಕ ಯೋಜನೆಯವರೆಗಿನ ವಲಯವಾರು ಒಟ್ಟು ಆಂತರಿಕ ಉತ್ಪಾದನಾ ಬೆಳವಣಿಗೆಯ ದರಗಳು.**

| ಪಂಚವಾರ್ಷಿಕ ಯೋಜನೆಗಳು | ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳು | ಕೈಗಾರಿಕೆ | ಸೇವೆಗಳು | ಒಟ್ಟು ಆಂತರಿಕ ಉತ್ಪನ್ನ |
|---|---|---|---|---|
| ಎಂಟನೇ ಪಂಚವಾರ್ಷಿಕ ಯೋಜನೆ | ೩.೭ | ೬.೨ | ೭.೭ | ೬.೪ |
| ಒಂಬತ್ತನೇ ಪಂಚವಾರ್ಷಿಕ ಯೋಜನೆ | ೧೧.೯ | ೮.೧ | ೮.೨ | ೮.೩ |
| ಹತ್ತನೆ ಪಂಚವಾರ್ಷಿಕ ಯೋಜನೆ | ೨.೦ | ೯.೯ | ೯.೧ | ೭.೮ |
| ಹನ್ನೊಂದನೇ ಪಂಚವಾರ್ಷಿಕ ಯೋಜನೆ | ೫.೪ | ೧೨.೫ | ೧೨.೦ | ೧೧.೨ |
| ೨೦೦೭-೦೮ | ೧೨.೪ | ೧೦.೮ | ೧೩.೮ | ೧೨.೬ |
| ೨೦೦೮-೦೯ | ೨.೩ | ೫.೧ | ೯.೮ | ೭.೧ |
| ೨೦೦೯-೧೦ | ೩.೬ | ೦.೭ | ೮.೨ | ೫.೨ |
| ೨೦೧೦-೧೧ | ೧೩.೩ | ೬.೧ | ೯.೧ | ೮.೯ |
| ೨೦೧೧-೧೨ | -೨.೯ | ೩.೬ | ೧೦.೬ | ೬.೪ |
| ೧೧ನೇ ಪಂಚವಾರ್ಷಿಕ ಯೋಜನೆಯ ಸಾಧನೆ | ೫.೭ | ೫.೩ | ೧೦.೩ | ೮.೦ |

ಆಧಾರ: ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು

**ಹನ್ನೆರಡನೇ ಪಂಚವಾರ್ಷಿಕ ಯೋಜನೆಯ ಸಂಪನ್ಮೂಲಗಳು (೨೦೧೨-೧೭):** ರಾಜ್ಯದ ಯೋಜನಾ ವೆಚ್ಚವು ಗಮನಾರ್ಹವಾಗಿ ಬೆಳೆಯುತ್ತಿದೆ. ಹನ್ನೆರಡನೆಯ ಪಂಚವಾರ್ಷಿಕ ಯೋಜನೆಯ ಆಯವ್ಯಯ ಮೊಬಲಗು ರೂ.೨೫೫೨೫೦ ಕೋಟಿಗಳಾಗಿದ್ದು, ಇದರಲ್ಲಿ ೪೦% ರಾಜ್ಯ ಸಾಲ (ನಿವ್ವಳ), ಶೇ ೩೬ ರಾಜ್ಯ ಒಡೆತನದ ಸಂಪನ್ಮೂಲಗಳು, ಶೇ ೧೩ ಐ.ಇ.ಬಿ.ಆರ್. ಹಾಗೂ ಉಳಿದ ಶೇ ೧೧ ರಾಜ್ಯ ಯೋಜನೆಗೆ ಕೇಂದ್ರ ಸರ್ಕಾರದ ಅನುದಾನ. ಹನ್ನೆರಡನೆಯ ಪಂಚವಾರ್ಷಿಕ ಯೋಜನೆಯ ಮೊದಲ ನಾಲ್ಕು ವರ್ಷಗಳಲ್ಲಿ ನಿರೀಕ್ಷಿತ ವೆಚ್ಚಗಳು ರೂ. ೨೨೬,೩೦೩ ಕೋಟಿಗಳಷ್ಟಿರುತ್ತದೆ (ಶೇ ೮೮.೬೬). ಶೇಕಡಾವಾರು ಪ್ರಗತಿಯಲ್ಲಿ ರಾಜ್ಯ ಒಡೆತನದ ಸಂಪನ್ಮೂಲ ಶೇ ೧೧೪.೦೧, ಕೇಂದ್ರ ಸರ್ಕಾರದ ಸಹಾಯ ಶೇ ೯೫.೫೩, ಐ.ಇ.ಬಿ.ಆರ್. ಶೇ ೮೫.೯೬ ಹಾಗೂ ರಾಜ್ಯ ಸಾಲ (ನಿವ್ವಳ) ಶೇ ೬೪.೬೯ ರಷ್ಟಿದೆ. ವಿವರಗಳನ್ನು ಕೋಷ್ಟಕ ೮.೧ ರಲ್ಲಿ ಕೊಡಲಾಗಿದೆ.

**ಕೋಷ್ಟಕ ೮.೧ ಕರ್ನಾಟಕದ ಹನ್ನೆರಡನೆಯ ಪಂಚವಾರ್ಷಿಕ ಯೋಜನೆಯ ಹಣಕಾಸು ಸಂಪನ್ಮೂಲಗಳು (ರೂ. ಕೋಟಿಗಳಲ್ಲಿ)**

| ಕ್ರ. ಸಂ. | ವಿವರ | ಹನ್ನೆರಡನೆಯ ಪಂಚವಾರ್ಷಿಕ ಯೋಜನೆಯ ಗುರಿ (ಪ್ರಸ್ತುತ ಬೆಲೆಗಳಲ್ಲಿ) | ನಿರೀಕ್ಷಿತ ಪ್ರಗತಿ ೨೦೧೨-೧೩ ರಿಂದ ೨೦೧೫-೧೬ | ಶೇಕಡಾವಾರು ಬಳಕೆ |
|---|---|---|---|---|
| ೧ | ರಾಜ್ಯ ಸಾಲ (ನಿವ್ವಳ) | ೧೦೧೬೫೪ (೩೯.೮೩) | ೬೫೭೬೦ (೨೯.೦೬) | ೬೪.೬೯ |
| ೨ | ರಾಜ್ಯ ಒಡೆತನದ ಸಂಪನ್ಮೂಲಗಳು | ೯೨೦೯೫ (೩೬.೦೮) | ೧೦೪೯೯೭ (೪೬.೪೦) | ೧೧೪.೦೧ |
| ೩ | ಐ.ಇ.ಬಿ.ಆರ್ | ೩೩೪೮೬ (೧೩.೧೨) | ೨೮೭೮೪ (೧೨.೭೨) | ೮೫.೯೬ |
| ೪ | ಕೇಂದ್ರ ಸರ್ಕಾರದ ಸಹಾಯ | ೨೮೦೧೫ (೧೦.೯೭) | ೨೬೭೬೨ (೧೧.೮೩) | ೯೫.೫೩ |
| | **ಒಟ್ಟು** | **೨೫೫೨೫೦** | **೨೨೬೩೦೩** | **೮೮.೬೬** |

ಮೂಲ: ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ*ಆವರಣದಲ್ಲಿರುವ ಅಂಕಿಗಳು ಒಟ್ಟು ಮೊತ್ತದ ಶೇಕಡಾವಾರು ಪ್ರಮಾಣವನ್ನು ಸೂಚಿಸುತ್ತದೆ.

### ೧೨ನೇ ಪಂಚವಾರ್ಷಿಕ ಯೋಜನೆಯ ಅಂತರ್ ವಲಯಗಳ ಅನುದಾನಗಳು

ಹನ್ನೆರಡನೆಯ ಪಂಚವಾರ್ಷಿಕ ಯೋಜನೆಯ ಮೊದಲ ನಾಲ್ಕು ವರ್ಷಗಳಲ್ಲಿ ಉತ್ತಮ ಪ್ರಗತಿ ಸಾಧಿಸಿದ ವಲಯಗಳೆಂದರೆ ಶಿಕ್ಷಣ (ಶೇ.೧೦೯.೨೮), ಕೃಷಿ ಮತ್ತು ಸಂಬಂಧಿಸಿದ ಸೇವೆಗಳು (ಶೇ.೧೦೮.೫೮), ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ಕಲ್ಯಾಣ (ಶೇ.೧೦೭.೦೫), ವೈದ್ಯಕೀಯ ಮತ್ತು ಸಾರ್ವಜನಿಕ ಆರೋಗ್ಯ (ಶೇ.೧೦೬.೭೪), ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ (ಶೇ.೧೦೫.೯೬), ಗ್ರಾಮೀಣಾಭಿವೃದ್ಧಿ (ಶೇ.೧೦೪.೬೫), ಸಾರಿಗೆ (ಶೇ.೭೬.೯೨), ನೀರು ಸರಬರಾಜು ಮತ್ತು ನೈರ್ಮಲ್ಯ (ಶೇ.೭೧.೬೧), ಕೈಗಾರಿಕೆ ಮತ್ತು ಖನಿಜಗಳು (ಶೇ.೬೯.೫೧), ಇಂಧನ (ಶೇ.೬೬.೮೧). ಹನ್ನೆರಡನೆಯ ಪಂಚವಾರ್ಷಿಕ ಯೋಜನೆಯ ಮೊದಲ ನಾಲ್ಕು ವರ್ಷಗಳ ಹಂಚಿಕೆ ಮತ್ತು ವೆಚ್ಚಗಳ ವಿವರಗಳನ್ನು ಕೋಷ್ಟಕ ೮.೨ರಲ್ಲಿ ಕೊಡಲಾಗಿದೆ.

**ಕೋಷ್ಟಕ ೮.೨ ಕರ್ನಾಟಕದ ಹನ್ನೆರಡನೆಯ ಪಂಚವಾರ್ಷಿಕ ಯೋಜನೆಯ ಹಂಚಿಕೆ ಮತ್ತು ವೆಚ್ಚ (ರೂ. ಕೋಟಿಗಳಲ್ಲಿ)**

| ವಲಯಗಳು | ಹನ್ನೆರಡನೆಯ ಪಂಚವಾರ್ಷಿಕ ಯೋಜನೆಯ (೨೦೧೨–೧೭) ಯೋಜಿತ ಹಂಚಿಕೆ | ಹನ್ನೆರಡನೆಯ ಪಂಚವಾರ್ಷಿಕ ಯೋಜನೆಯ ಮೊದಲ ನಾಲ್ಕು ವರ್ಷಗಳ (೨೦೧೨–೧೬) ನಿರೀಕ್ಷಿತ ವೆಚ್ಚ | ನಿರೀಕ್ಷಿತ ವೆಚ್ಚ ಹಾಗೂ ಹನ್ನೆರಡನೆಯ ಪಂಚವಾರ್ಷಿಕ ಯೋಜನೆಯ ಶೇಕಡಾವಾರು ವ್ಯತ್ಯಾಸ |
|---|---|---|---|
| **ಅ. ಆರ್ಥಿಕ ಸೇವೆಗಳು** | | | |
| ೧. ಕೃಷಿ ಮತ್ತು ಸಂಬಂಧಿತ ವಲಯಗಳು (ಸಹಕಾರ ಸೇರಿ) | ೨೦೯೩೯.೧೧ | ೨೨೭೩೪.೯೦ | ೧೦೮.೫೮ |
| ೨. ಗ್ರಾಮೀಣಾಭಿವೃದ್ಧಿ | ೮೩೯೬.೩೫ | ೮೭೮೬.೯೯ | ೧೦೪.೬೫ |
| ೩. ವಿಶೇಷ ಪ್ರದೇಶಾಭಿವೃದ್ಧಿ ಕಾರ್ಯಕ್ರಮಗಳು | ೪೦೮೬.೧೧ | ೪೫೦೫.೫೬ | ೧೧೦.೨೭ |
| ೪. ನೀರಾವರಿ ಮತ್ತು ನೆರೆಹಾವಳಿ ನಿಯಂತ್ರಣ | ೪೧೧೫೭.೨೨ | ೩೩೭೬೫.೬೮ | ೮೨.೦೪ |
| ೫. ಇಂಧನ | ೨೬೭೭೯.೩೮ | ೧೭೮೯೨.೩೮ | ೬೬.೮೧ |
| ೬. ಕೈಗಾರಿಕೆ ಮತ್ತು ಖನಿಜಗಳು | ೪೭೭೭.೨೫ | ೩೩೨೦.೪೫ | ೬೯.೫೧ |
| ೭. ಸಾರಿಗೆ ವಲಯ | ೩೩೨೨೪.೩೮ | ೨೫೫೫೭.೩೧ | ೭೬.೯೨ |
| ೮. ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಪರಿಸರ | ೨೯೪೫.೯೭ | ೨೨೬೪.೮೧ | ೭೬.೮೦ |
| ೯. ಸಾಮಾನ್ಯ ಆರ್ಥಿಕ ಸೇವೆಗಳು | ೬೭೩೯.೪೬ | ೪೩೩೧೩೭ | ೬೪.೨೭ |
| **ಒಟ್ಟು ಆರ್ಥಿಕ ಸೇವೆಗಳು** | **೧೪೯೦೪೫.೨೪** | **೧೨೩೧೫೯.೪೫** | **೮೨.೬೩** |
| **ಆ. ಸಾಮಾಜಿಕ ಸೇವೆಗಳು** | | | |
| ೧. ಶಿಕ್ಷಣ (ಕ್ರೀಡೆ, ಕಲೆ ಮತ್ತು ಸಂಸ್ಕೃತಿ ಸೇರಿ) | ೨೧೩೪೮.೬೬ | ೨೩೩೨೮.೭೮ | ೧೦೯.೨೮ |
| ೨. ಆರೋಗ್ಯ | ೮೯೮೩.೦೫ | ೯೫೮೮.೩೪ | ೧೦೬.೭೪ |
| ೩. ನೀರು ಸರಬರಾಜು | ೧೩೦೦೯.೩೯ | ೯೩೧೫.೮೧ | ೭೧.೬೧ |
| ೪. ವಸತಿ | ೯೧೦೨.೫೭ | ೮೫೭೪.೦೫ | ೯೪.೧೯ |
| ೫. ನಗರಾಭಿವೃದ್ಧಿ | ೨೦೯೬೪.೩೬ | ೧೮೦೬೫.೭೬ | ೮೬.೧೭ |
| ೬. ವಾರ್ತಾ ಮತ್ತು ಪ್ರಚಾರ | ೨೦೬.೦೦ | ೧೩೬.೮೬ | ೬೬.೪೪ |
| ೭. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆಹಿಂದುಳಿದ ವರ್ಗಗಳ ಕಲ್ಯಾಣ | ೧೨೮೯೩.೭೫ | ೧೭೬೭೧.೪೨ | ೧೦೭.೦೫ |
| ೮. ಕಾರ್ಮಿಕ ಮತ್ತು ಕಾರ್ಮಿಕರ ಕಲ್ಯಾಣ | ೧೫೪೦.೭೪ | ೧೩೩೮.೫೦ | ೮೬.೮೭ |
| ೯. ಸಮಾಜ ಕಲ್ಯಾಣ ಮತ್ತು ಪೌಷ್ಠಿಕತೆ | ೫೮೭೫.೦೩ | ೪೭೭೫.೭೬ | ೮೧.೨೯ |
| ೧೦. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | ೬೫೬೪.೮೬ | ೬೯೫೬.೩೭ | ೧೦೫.೯೬ |
| **ಒಟ್ಟು ಸಾಮಾಜಿಕ ಸೇವೆಗಳು** | ೧೦೦೪೮೮.೭೧ | ೯೯೭೫೧.೯೫ | ೯೯.೨೭ |
| **ಇ. ಸಾಮಾನ್ಯ ಸೇವೆಗಳು** | ೫೭೧೬.೦೪ | ೩೩೯೧.೩೩ | ೫೯.೩೩ |
| **ಒಟ್ಟು ಮೊತ್ತ: ರಾಜ್ಯ ಯೋಜನೆ (ಅ+ಆ+ಇ)** | ೨೫೫೨೫೦.೦೦ | ೨೨೬೩೦೨.೭೩ | ೮೮.೬೬ |

ಮೂಲ: ಆರ್ಥಿಕ ಸಮೀಕ್ಷೆ ೨೦೧೪–೧೫ ಮತ್ತು ೨೦೧೫–೧೬ನೇ ಸಾಲಿನ ವಾರ್ಷಿಕ ಯೋಜನೆಯ ದಸ್ತಾವೇಜುಗಳು, ಯೋಜನಾ ಇಲಾಖೆ, ಕರ್ನಾಟಕ ಸರ್ಕಾರ

## ಜಿಲ್ಲಾ ವಲಯ ಯೋಜನೆಗೆ ೨೦೧೫-೧೬ನೇ ಸಾಲಿನಲ್ಲಿ ನಿಗದಿಗೊಳಿಸಲಾಗಿರುವ ಅನುದಾನ

ಜಿಲ್ಲಾ ವಲಯ ಯೋಜನಾ ಕಾರ್ಯಕ್ರಮಗಳಿಗೆ ೨೦೧೫-೧೬ನೇ ಸಾಲಿನಲ್ಲಿ ರೂ.೧೧೩೨೭.೭೧ ಕೋಟಿಗಳ ಅನುದಾನವನ್ನು ನಿಗದಿಗೊಳಿಸಲಾಗಿದೆ.ಈ ಪೈಕಿ ರಾಜ್ಯದ ಪಾಲು ರೂ.೧೦೭೭೫.೬೧ ಕೋಟಿಗಳು ಹಾಗೂ ಕೇಂದ್ರದ ಪಾಲು ರೂ.೫೫೨.೧೦ ಕೋಟಿಗಳು. ಇದು ಒಟ್ಟು ಯೋಜನಾ ಗಾತ್ರದ ಪ್ರತಿಶತ ೧೫ ಆಗಿರುತ್ತದೆ. ಅನುಕ್ರಮವಾಗಿ ಜಿಲ್ಲಾ ವಲಯದ ಅನುದಾನದಲ್ಲಿ ರಾಜ್ಯ ಪಾಲು ಶೇ.೯೫ ಮತ್ತು ಕೇಂದ್ರ ಪಾಲು ಶೇ.೫ ಆಗಿರುತ್ತದೆ. ಜಿಲ್ಲಾ ವಲಯದ ಅನುದಾನವನ್ನು ಕೋಷ್ಟಕ ೮.೩ರಲ್ಲಿ ಕೊಡಲಾಗಿದೆ.

**ಕೋಷ್ಟಕ ೮.೩ ೨೦೧೫-೧೬ನೇ ಸಾಲಿನ ಜಿಲ್ಲಾ ವಲಯದ ಅನುದಾನ (ಲಕ್ಷ ರೂ.ಗಳಲ್ಲಿ)**

| ಸಂಖ್ಯೆ | ಜಿಲ್ಲೆ | ರಾಜ್ಯ | % | ಕೇಂದ್ರ | % | ಒಟ್ಟು | % |
|---|---|---|---|---|---|---|---|
| ೧ | ಬೆಂಗಳೂರು ನಗರ | ೨೯೮೯೨.೮೩ | ೨.೬೪ | ೨೪೪೦.೩೫ | ೦.೨೨ | ೩೨೩೩೩.೧೮ | ೨.೮೫ |
| ೨ | ಬೆಂಗಳೂರು ಗ್ರಾಮೀಣ | ೧೨೪೨೦.೪೫ | ೧.೧೦ | ೧೧೨೫.೬೦ | ೦.೧೦ | ೧೩೫೪೬.೦೫ | ೧.೨೦ |
| ೩ | ಬಾಗಲಕೋಟೆ | ೩೦೧೩೬.೩೫ | ೨.೬೬ | ೧೨೯೦.೮೫ | ೦.೧೧ | ೩೧೪೨೭.೨೦ | ೨.೭೭ |
| ೪ | ಬೆಳಗಾವಿ | ೬೩೭೬೦.೨೬ | ೫.೬೩ | ೬೦೨೨.೧೪ | ೦.೫೩ | ೬೯೭೮೨.೪೦ | ೬.೧೬ |
| ೫ | ಬಳ್ಳಾರಿ | ೩೨೮೯೨.೪೬ | ೨.೯೦ | ೧೫೮೨.೫೪ | ೦.೧೪ | ೩೪೪೭೫.೦೦ | ೩.೦೪ |
| ೬ | ಬೀದರ್ | ೨೩೬೭೧.೯೮ | ೨.೦೯ | ೧೭೭೮.೦೨ | ೦.೧೬ | ೨೫೪೫೦.೦೦ | ೨.೨೫ |
| ೭ | ವಿಜಯಪುರ | ೩೩೧೦೫.೭೪ | ೨.೯೨ | ೧೮೦೪.೦೧ | ೦.೧೬ | ೩೪೯೦೯.೭೫ | ೩.೦೮ |
| ೮ | ಚಾಮರಾಜನಗರ | ೧೪೧೨೩.೪೧ | ೧.೨೫ | ೧೩೦೫.೧೯ | ೦.೧೨ | ೧೫೪೨೮.೬೦ | ೧.೩೬ |
| ೯ | ಚಿಕ್ಕಬಳ್ಳಾಪುರ | ೧೬೮೩೬.೭೯ | ೧.೪೯ | ೭೭೮.೨೧ | ೦.೦೭ | ೧೭೬೧೫.೦೦ | ೧.೫೬ |
| ೧೦ | ಚಿಕ್ಕಮಗಳೂರು | ೧೮೦೫೧.೩೧ | ೧.೫೯ | ೨೦೨೭.೫೪ | ೦.೧೮ | ೨೦೦೭೮.೮೫ | ೧.೭೭ |
| ೧೧ | ಚಿತ್ರದುರ್ಗ | ೨೪೨೭೯.೧೯ | ೨.೧೪ | ೧೯೨೫.೮೧ | ೦.೧೭ | ೨೬೨೦೫.೦೦ | ೨.೩೧ |
| ೧೨ | ದಕ್ಷಿಣ ಕನ್ನಡ | ೨೦೪೦೮.೯೫ | ೧.೮೦ | ೨೧೧೫.೪೩ | ೦.೧೯ | ೨೨೫೨೪.೩೮ | ೧.೯೯ |
| ೧೩ | ದಾವಣಗೆರೆ | ೨೩೮೩೪.೧೫ | ೨.೧೦ | ೨೩೯೩.೩೦ | ೦.೨೧ | ೨೬೨೨೭.೪೫ | ೨.೩೨ |
| ೧೪ | ಧಾರವಾಡ | ೨೧೦೪೮.೯೦ | ೧.೮೬ | ೧೪೭೮.೩೭ | ೦.೧೩ | ೨೨೫೨೭.೨೭ | ೧.೯೯ |
| ೧೫ | ಗದಗ | ೧೪೭೪೧.೪೫ | ೧.೩೦ | ೧೦೬೯.೨೫ | ೦.೦೯ | ೧೫೮೧೦.೭೦ | ೧.೪೦ |
| ೧೬ | ಕಲಬುರಗಿ | ೪೦೦೩೭.೪೧ | ೩.೫೩ | ೧೬೫೫.೫೯ | ೦.೧೫ | ೪೧೬೯೩.೦೦ | ೩.೬೮ |
| ೧೭ | ಹಾಸನ | ೨೩೦೮೬.೦೩ | ೨.೦೪ | ೩೦೫೯.೯೭ | ೦.೨೭ | ೨೬೧೪೬.೦೦ | ೨.೩೧ |
| ೧೮ | ಹಾವೇರಿ | ೨೧೮೮೮.೧೯ | ೧.೯೩ | ೧೨೯೩.೩೧ | ೦.೧೧ | ೨೩೧೮೧.೫೦ | ೨.೦೫ |
| ೧೯ | ಕೊಡಗು | ೭೬೬೪.೮೯ | ೦.೬೮ | ೧೧೬೯.೬೦ | ೦.೧೦ | ೮೮೩೪.೪೯ | ೦.೭೮ |
| ೨೦ | ಕೋಲಾರ | ೧೭೬೬೪.೨೧ | ೧.೫೬ | ೯೧೯.೨೮ | ೦.೦೮ | ೧೮೫೮೩.೪೯ | ೧.೬೪ |
| ೨೧ | ಕೊಪ್ಪಳ | ೨೨೧೪೬.೮೪ | ೧.೯೬ | ೯೮೦.೪೩ | ೦.೦೯ | ೨೩೧೨೭.೨೭ | ೨.೦೪ |
| ೨೨ | ಮಂಡ್ಯ | ೨೨೪೬೬.೧೪ | ೧.೯೮ | ೧೯೪೫.೫೫ | ೦.೧೭ | ೨೪೪೧೧.೬೯ | ೨.೧೬ |
| ೨೩ | ಮೈಸೂರು | ೩೨೦೧೫.೦೯ | ೨.೮೩ | ೨೮೭೧.೯೧ | ೦.೨೫ | ೩೪೮೮೭.೦೦ | ೩.೦೮ |
| ೨೪ | ರಾಯಚೂರು | ೩೧೮೪೦.೮೯ | ೨.೮೧ | ೧೫೧೦.೭೪ | ೦.೧೩ | ೩೩೩೫೧.೬೩ | ೨.೯೪ |
| ೨೫ | ರಾಮನಗರ | ೧೩೮೬೨.೨೨ | ೧.೨೨ | ೧೩೩೧.೨೭ | ೦.೧೨ | ೧೫೧೯೩.೪೯ | ೧.೩೪ |
| ೨೬ | ಶಿವಮೊಗ್ಗ | ೨೫೬೭೨.೮೮ | ೨.೨೭ | ೧೬೫೭.೬೨ | ೦.೧೫ | ೨೭೩೩೦.೫೦ | ೨.೪೧ |
| ೨೭ | ತುಮಕೂರು | ೩೪೨೧೨.೧೨ | ೩.೦೨ | ೨೮೮೨.೮೮ | ೦.೨೫ | ೩೭೦೯೫.೦೦ | ೩.೨೭ |
| ೨೮ | ಉಡುಪಿ | ೧೦೬೭೩.೫೨ | ೦.೯೪ | ೧೬೯೧.೪೮ | ೦.೧೫ | ೧೨೩೬೫.೦೦ | ೧.೦೯ |
| ೨೯ | ಉತ್ತರ ಕನ್ನಡ | ೨೩೪೭೧.೭೭ | ೨.೦೭ | ೨೧೭೮.೨೩ | ೦.೧೯ | ೨೫೬೫೦.೦೦ | ೨.೨೬ |
| ೩೦ | ಯಾದಗಿರಿ | ೧೬೧೨೨.೪೭ | ೧.೪೨ | ೭೪೯.೫೩ | ೦.೦೭ | ೧೬೮೭೨.೦೦ | ೧.೪೯ |
| ೩೧ | ಒಟ್ಟು ಜಿಲ್ಲಾ ಪಂಚಾಯತ್ | ೩೫೫೫೩೨.೧೧ | ೩೧.೩೯ | ೧೭೧.೦೦ | ೦.೦೨ | ೩೫೫೭೦೩.೧೧ | ೩೧.೪೦ |
|  | **ಒಟ್ಟು ಮೊತ್ತ** | **೧೦೭೭೫೬೧.೦೦** | **೯೫.೧೩** | **೫೫೨೧೦.೦೦** | **೪.೮೭** | **೧೧೩೨೭೭೧.೦೦** | **೧೦೦.೦೦** |

ಮೂಲ: ೨೦೧೫-೧೬ ನೇ ಸಾಲಿನ ಜಿಲ್ಲಾ ಪಂಚಾಯತ್‌ಗಳ ಆಯವ್ಯಯದ ದಸ್ತಾವೇಜುಗಳು

### ೧೪ನೇ ಹಣಕಾಸು ಆಯೋಗ

೧೪ನೇ ಹಣಕಾಸು ಆಯೋಗವು ರಾಜ್ಯಗಳಿಗೆ ಕೇಂದ್ರದ ಪಾಲಿನ ಹಂಚಿಕೆ ಪ್ರಮಾಣವನ್ನು ಶೇ.೩೨ ರಿಂದ ಶೇ.೪೨ಕ್ಕೆ ಹೆಚ್ಚಿಸಲು ಶಿಫಾರಸ್ಸು ಮಾಡಿದೆ.ವಿಭಜಿತ ಮೊತ್ತದಲ್ಲಿ ರಾಜ್ಯಗಳಿಗೆ ಹೆಚ್ಚಿನ ಪಾಲು ಪಡೆಯಲು, ಅದರಲ್ಲೂ ಕರ್ನಾಟಕಕ್ಕೆ ಹೆಚ್ಚಿನ ಪಾಲನ್ನು ಪಡೆಯಲು ರಾಜ್ಯ ಸರ್ಕಾರವು ಅವಿರತ ಪ್ರಯತ್ನವನ್ನು ಮಾಡಿದೆ.

### ಪ್ರಮುಖ ಶಿಫಾರಸ್ಸುಗಳು

ಎಲ್ಲಾ ರಾಜ್ಯಗಳ ವಿತ್ತೀಯ ಕೊರತೆಯನ್ನು ರಾಜ್ಯಾದಾಯದ (GSDP) ಶೇ.೩ರ ವಾರ್ಷಿಕ ಮಿತಿಗೆ ನಿಗದಿಪಡಿಸುವುದು. **i**) ಹಿಂದಿನ ವರ್ಷದಲ್ಲಿ ರಾಜ್ಯಗಳ ಸಾಲ - GSDP ಪ್ರಮಾಣವು ೨೫% ಗಿಂತ ಕಡಿಮೆಯಿದ್ದರೆ ಅಥವಾ ಸಮವಾಗಿದ್ದರೆ, ಸಾಲದ ಮಿತಿಗಳನ್ನು ನಿಗದಿಪಡಿಸಬೇಕಾದ ಪ್ರಮಾಣ ಯಾವುದೋ ಅದಕ್ಕಿಂತ ೦.೨೫% ರಷ್ಟು ಹೆಚ್ಚಿನ ಹೊಂದಾಣಿಕೆಗೆ ರಾಜ್ಯಗಳು ಅರ್ಹವಾಗಿರುತ್ತವೆ. **ii**)ಬಡ್ಡಿ ಸಂದಾಯಗಳು ಹಿಂದಿನ ವರ್ಷದಲ್ಲಿನ ರಾಜಸ್ವ ಜಮೆಗಳ ಶೇ.೧೦ ಕ್ಕಿಂತ ಕಡಿಮೆ ಅಥವಾ ಅದಕ್ಕೆ ಸಮವಾಗಿದ್ದರೆ ಸಾಲ ಪಡೆಯುವ ಮಿತಿಗಳನ್ನು ನಿಗದಿಪಡಿಸುವುದಕ್ಕಾಗಿ ರಾಜ್ಯಗಳು ನಿಗದಿತ ವರ್ಷದಲ್ಲಿ ಜಿ.ಎಸ್.ಡಿ.ಪಿ. ಯ ಶೇ.೦.೨೫ ರಷ್ಟು ಹೆಚ್ಚುವರಿ ಸಾಲ ಪಡೆಯುವ ಮಿತಿಗೆ ಅರ್ಹವಾಗುವುವು.ರಾಜ್ಯಕ್ಕೆ ಈ ಪ್ರಕಾರವಾಗಿ ಎರಡು ಆಯ್ಕೆಗಳು (**i** ಮತ್ತು ii) ಲಭ್ಯವಿದ್ದು, ಮೇಲಿನ ಯಾವುದೇ ಮಾನದಂಡಗಳನ್ನು ಪೂರೈಸಿದ್ದಲ್ಲಿ ಪ್ರತ್ಯೇಕವಾಗಿ ಅಥವಾ ಮೇಲಿನ ಎರಡೂ ಮಾನದಂಡಗಳನ್ನು ಪೂರೈಸಿದರೆ ಏಕಕಾಲದಲ್ಲಿ ಈ ಆಯ್ಕೆಗಳನ್ನು ಉಪಯೋಗಿಸಿಕೊಳ್ಳಬಹುದು. ಹೀಗಾಗಿ ರಾಜ್ಯವು ನಿರ್ದಿಷ್ಟ ವರ್ಷದಲ್ಲಿ ಶೇ.೩.೫ರಷ್ಟು ಗರಿಷ್ಠ ವಿತ್ತೀಯ ಕೊರತೆ ಜಿ.ಎಸ್.ಡಿ.ಪಿ. ಮಿತಿಯನ್ನು ಹೊಂದಬಹುದಾಗಿರುತ್ತದೆ.

ಹೆಚ್ಚುವರಿ ಮಿತಿಯ ಎರಡೂ ಆಯ್ಕೆಗಳ ಅಥವಾ ಇವೆರಡರ ಪೈಕಿ ಒಂದರ ಆಯ್ಕೆ, ಸಾಲ ಮಿತಿ ನಿಗದಿಪಡಿಸುವ ವರ್ಷದಲ್ಲಿ ಅಥವಾ ತಕ್ಷಣದ ಹಿಂದಿನ ವರ್ಷದಲ್ಲಿ ಯಾವುದೇ ರಾಜಸ್ವ ಕೊರತೆಯುಂಟಾಗಿಲ್ಲದಿದ್ದರೆ ಮಾತ್ರವೇ ರಾಜ್ಯಕ್ಕೆ ಲಭ್ಯವಾಗುತ್ತದೆ. ಒಂದು ವೇಳೆ ಯಾವುದೇ ರಾಜ್ಯವು ಪ್ರಥಮ ನಾಲ್ಕು ವರ್ಷಗಳ ಅವಾರ್ಡ್ ಅವಧಿ (೨೦೧೫-೧೬ ರಿಂದ ೨೦೧೮-೧೯) ಯಲ್ಲಿ ಯಾವುದೇ ನಿರ್ದಿಷ್ಟ ವರ್ಷದಲ್ಲಿ ಜಿ.ಎಸ್.ಡಿ.ಪಿ.ಯ ಶೇ.೩ ರಷ್ಟು ಮಂಜೂರಾದ ಸಾಲ ಪಡೆಯುವ ಮಿತಿಯನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ಸಾಧ್ಯವಾಗದಿದ್ದರೆ, ಮುಂಬರುವ ವರ್ಷದಲ್ಲಿ ಆದರೆ ಅವಾರ್ಡ್ ಅವಧಿಯೊಳಗೆ ಮಾತ್ರವೇ ಬಳಸದೇ ಉಳಿದ ಸಾಲದ ಮೊತ್ತವನ್ನು ಪಡೆಯುವ ಅವಕಾಶವನ್ನು ಹೊಂದಿರುತ್ತದೆ.

### ರಾಜ್ಯ ಆದಾಯ

ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಅಂದಾಜುಗಳ ಆಧಾರ ವರ್ಷವನ್ನು ೨೦೦೪-೦೫ ರ ಬದಲಾಗಿ ೨೦೧೧-೧೨ ಅನ್ನು ಹೊಸ ಆಧಾರ ವರ್ಷವಾಗಿ ಬದಲಾವಣೆ ಮಾಡಿ ರಾಜ್ಯ ಆಂತರಿಕ ಉತ್ಪನ್ನದ ಅಂದಾಜುಗಳನ್ನು ತಯಾರಿಸಲಾಗಿದೆ. ೨೦೦೪-೦೫ರ ಆಧಾರ ವರ್ಷದ ಸರಣಿಯಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಅಂದಾಜುಗಳನ್ನು ಫ್ಯಾಕ್ಟರ್ ಕಾಸ್ಟ್‌ನಲ್ಲಿ ತಯಾರಿಸಲಾಗುತ್ತಿದ್ದು, ೨೦೧೧-೧೨ರ ಆಧಾರ ವರ್ಷದ ಸರಣಿಯಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಅಂದಾಜುಗಳನ್ನು ಮಾರುಕಟ್ಟೆ ಬೆಲೆಗಳಲ್ಲಿ ತಯಾರಿಸಲಾಗುತ್ತದೆ.ಆದ್ದರಿಂದ ಹಳೆ ಆಧಾರ ವರ್ಷ ೨೦೦೪-೦೫ರ ಮೇರೆಗೆ ತಯಾರಿಸಲಾದ ಅಂದಾಜುಗಳನ್ನು ಹೊಸ ಆಧಾರ ವರ್ಷ ೨೦೧೧-೧೨ರ ಮೇರೆಗೆ ತಯಾರಿಸಲಾದ ಅಂದಾಜುಗಳೊಂದಿಗೆ ಹೋಲಿಕೆ ಮಾಡಲು ಸಾಧ್ಯವಾಗುವುದಿಲ್ಲ.

೨೦೧೫-೧೬ನೇ ಸಾಲಿನಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಬೆಳವಣಿಗೆಯು (ವರ್ಷದಿಂದ ವರ್ಷಕ್ಕೆ) ಸ್ಥಿರ (೨೦೧೧-೧೨) ಬೆಲೆಗಳಲ್ಲಿ ಶೇ.೬.೨ ಆಗಿದ್ದು, ಇದು ೨೦೧೪-೧೫ ಸಾಲಿನ ಶೇ.೭.೮ಕ್ಕಿಂತಲೂ ಕಡಿಮೆಯಾಗಿರುತ್ತದೆ. ೨೦೧೪-೧೫ನೇ ಸಾಲಿನಲ್ಲಿ ಕೃಷಿ ವಲಯದ ಬೆಳವಣಿಗೆ ಶೇ.೧.೬ ಇದ್ದದ್ದು, ೨೦೧೫-೧೬ನೇ ಸಾಲಿನಲ್ಲಿ ಶೇ.-೪.೭ಕ್ಕೆ ಇಳಿಕೆಯಾಗಿರುತ್ತದೆ. ೨೦೧೪-೧೫ನೇ ಸಾಲಿನಲ್ಲಿ ಕೈಗಾರಿಕಾ ಹಾಗೂ ಸೇವಾ ವಲಯದ ಬೆಳವಣಿಗೆ ಕ್ರಮವಾಗಿ ಶೇ.೪.೭ ಹಾಗೂ ಶೇ.೧೦.೩ ಇದ್ದದ್ದು, ೨೦೧೫-೧೬ನೇ ಸಾಲಿನಲ್ಲಿ ಶೇ.೪.೫ ಮತ್ತು ಶೇ.೯.೧ಕ್ಕೆ ಇಳಿಕೆಯಾಗಿರುತ್ತದೆ.

೨೦೧೧-೧೨ನೇ ಆಧಾರ ವರ್ಷದ ಮಾರ್ಗಸೂಚಿ ಮತ್ತು ಮಾಹಿತಿಗಳಲ್ಲಿನ ಪ್ರಮುಖ ಬದಲಾವಣೆಗಳು:

೧) ೨೦೦೪-೦೫ ಶ್ರೇಣಿಯವರೆಗೆ ಆಂತರಿಕ ಉತ್ಪನ್ನವನ್ನು ಫ್ಯಾಕ್ಟರ್ ಕಾಸ್ಟ್‌ನಲ್ಲಿ ತಯಾರಿಸಲಾಗುತ್ತಿದ್ದು, ೨೦೧೧-೧೨ನೇ ಸಾಲಿನಿಂದ ಆಂತರಿಕ ಉತ್ಪನ್ನವನ್ನು ಮಾರುಕಟ್ಟೆ ದರಗಳಲ್ಲಿ ತಯಾರಿಸಲಾಗುತ್ತದೆ.

೨) ವಾರ್ಷಿಕ ಕೈಗಾರಿಕಾ ಸಮೀಕ್ಷೆಯನ್ನು ೨೦೧೨-೧೩ರಿಂದ ಘಟಕವಾರು (Establishment approach)ಮಾಹಿತಿ ಸಂಗ್ರಹಣೆಯನ್ನು ಕೈಬಿಟ್ಟು ಸಂಸ್ಥೆ ವಾರು (Enterprise approach)ಮಾಹಿತಿ ಸಂಗ್ರಹಣೆಯನ್ನು ಅನುಸರಿಸಲಾಗಿರುತ್ತದೆ. ಇದರಿಂದಾಗಿ ತಯಾರಿಕೆಯ ನಂತರದ ಚಟುವಟಿಕೆಗಳಿಂದ (Post Manufacturing Activities) ಉತ್ಪಾದನೆಯಾಗುವ ಆಂತರಿಕ ಉತ್ಪನ್ನವನ್ನು ಸಹ ಅಂದಾಜಿಸಲಾಗಿರುತ್ತದೆ.

೩) ಖಾಸಗಿ ವಲಯದಲ್ಲಿನ ಕಾರ್ಪೊರೇಟ್ ವಲಯದ ಆದಾಯ ಅಂದಾಜುಗಳನ್ನು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯದ (Ministry of Corporate Affairs form - 21)ಮಾಹಿತಿಯನ್ನು ಆಧರಿಸಿ ಪ್ರಥಮ ಬಾರಿಗೆ ಅಂದಾಜಿಸಲಾಗಿದೆ.

೪) ರಾಷ್ಟ್ರಮಟ್ಟದ ತಯಾರಿಕೆ ವಲಯದ ಕಾರ್ಪೋರೇಟ್ ಆದಾಯ ಅಂದಾಜುಗಳನ್ನು ರಾಜ್ಯದ ವಾರ್ಷಿಕ ಕೈಗಾರಿಕಾ ಸಮೀಕ್ಷೆಯ ಮಾಹಿತಿಯ ಅನುಪಾತದಲ್ಲಿ ಹಂಚಿಕೆ ಮಾಡಲಾಗಿರುತ್ತದೆ.

೫) ರಾಷ್ಟ್ರಮಟ್ಟದ ಗಣಕಯಂತ್ರದ ಸೇವೆಗಳ ಆದಾಯ ಅಂದಾಜುಗಳನ್ನು ೨೦೦೪-೦೫ರ ಶ್ರೇಣಿಯಲ್ಲಿ ಕಾರ್ಮಿಕ ಬಲದ ಅನುಪಾತದಲ್ಲಿ ರಾಜ್ಯಕ್ಕೆ ಹಂಚಿಕೆ ಮಾಡಲಾಗುತ್ತಿತ್ತು. ಆದರೆ ಹೊಸ ಆಧಾರ ವರ್ಷದಲ್ಲಿ ರಾಜ್ಯದ ಸಾಫ್ಟ್‌ವೇರ್ ರಫ್ತಿನ ಅನುಪಾತದಲ್ಲಿ ರಾಜ್ಯಕ್ಕೆ ಹಂಚಿಕೆ ಮಾಡಲಾಗಿರುತ್ತದೆ.

೬) ಈ ಆಧಾರ ವರ್ಷದ ಅನುಷ್ಠಾನದಿಂದಾಗಿ ಕೃಷಿ ಮತ್ತು ಜಾನುವಾರು, ವ್ಯಾಪಾರ, ಹೋಟೆಲ್ ಮತ್ತು ಉಪಹಾರ ಗೃಹಗಳ ವಲಯಗಳನ್ನು ಪ್ರತ್ಯೇಕವಾಗಿ ಒದಗಿಸಲಾಗಿದೆ. ಅಲ್ಲದೆ ಇತರ ರೀತಿಯ ಸಾರಿಗೆ ವಲಯವನ್ನು ಸಹ ರಸ್ತೆ, ಜಲ, ವಾಯು ಸಾರಿಗೆ ಮತ್ತು ಸಾರಿಗೆ ಪೂರಕ ಸೇವೆಗಳೆಂದು ಪ್ರತ್ಯೇಕವಾಗಿ ಒದಗಿಸಲಾಗಿರುತ್ತದೆ.

## ೨೦೧೫-೧೬ನೇ ಸಾಲಿನ ರಾಜ್ಯ ಆಂತರಿಕ ಉತ್ಪನ್ನದ ಮುನ್ನೂಚನಾ ಅಂದಾಜುಗಳು

೨೦೧೫-೧೬ನೇ ಸಾಲಿನ ಸ್ಥಿರ (೨೦೧೧-೧೨) ಬೆಲೆಗಳಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನವು ಶೇ.೬.೨ರ ಬೆಳವಣಿಗೆಯೊಂದಿಗೆ ೭,೮೦,೮೦೫ ಕೋಟಿ ರೂಪಾಯಿಗಳಷ್ಟು ಆಗುವ ನಿರೀಕ್ಷೆ ಇದೆ. ೨೦೧೫-೧೬ರ ಒಟ್ಟಾರೆ ಆಂತರಿಕ ಉತ್ಪನ್ನದ ಶೇ.೬.೨ರ ಬೆಳವಣಿಗೆಗೆ ಸೇವಾ ವಲಯಗಳಾದ ರೈಲ್ವೆ, ದಾಸ್ತಾನು, ವ್ಯಾಪಾರ ಮತ್ತು ದುರಸ್ತಿ, ವಸತಿ ಮತ್ತು ಉಪಹಾರ ಗೃಹಗಳು, ರಸ್ತೆ ಸಾರಿಗೆ, ಜಲ ಸಾರಿಗೆ, ವಾಯು ಸಾರಿಗೆ, ಸಾರಿಗೆ ಪೂರಕ ಸೇವೆಗಳು, ಸ್ಥಿರಾಸ್ತಿ, ವೃತ್ತಿಪರ ಸೇವೆಗಳು ಮತ್ತು ವಾಸಗೃಹಗಳ ಒಡೆತನ, ಸಂಪರ್ಕ, ಹಣಕಾಸು ಸೇವೆಗಳು, ಸಾರ್ವಜನಿಕ ಆಡಳಿತ ಮತ್ತು ಇತರ ಸೇವೆಗಳ ಬೆಳವಣಿಗೆಯು (ಶೇ.೯.೧) ಪ್ರಮುಖ ಕಾರಣವೆನ್ನಬಹುದು. ತಯಾರಿಕಾ ವಲಯದ ಬೆಳವಣಿಗೆ ದರ ಶೇ.೫ ಆಗುವ ನಿರೀಕ್ಷೆಯಿದೆ. ವಿದ್ಯುಚ್ಛಕ್ತಿ, ಅನಿಲ ಮತ್ತು ನೀರು ಸರಬರಾಜು ವಲಯದಲ್ಲಿನ ಬೆಳವಣಿಗೆಯು ಸುಮಾರು ಶೇ.೨.೫ ಆಗಬಹುದೆಂದು ನಿರೀಕ್ಷಿಸಲಾಗಿದೆ. ಕೃಷಿ ವಲಯದ ಬೆಳವಣಿಗೆ ದರವು ಶೇ.(-) ೭.೭ಕ್ಕೆ ಇಳಿಕೆಯಾಗಲಿದೆ ಎಂದು ನಿರೀಕ್ಷಿಸಲಾಗಿದೆ. ಕರ್ನಾಟಕ ರಾಜ್ಯದಲ್ಲಿ ಈ ವರೆವಿಗೂ ಮುಂಗಾರು ಋತುವಿನಲ್ಲಿ ೬೨ ತಾಲ್ಲೂಕುಗಳು ಬರ ಪೀಡಿತ ಪ್ರದೇಶವಾಗಿರುವ ಹಿನ್ನೆಲೆಯಲ್ಲಿ ೨೦೧೪-೧೫ನೇ ಸಾಲಿನಲ್ಲಿದ್ದ ೧೨೨.೬೦ ಲಕ್ಷ ಟನ್ ಗಳ ಆಹಾರ ಪದಾರ್ಥಗಳ ಉತ್ಪಾದನೆಯು ೨೦೧೫-೧೬ನೇ ಸಾಲಿನಲ್ಲಿ ೧೧೦.೦೦ ಲಕ್ಷ ಟನ್ ಗಳಿಗೆ ಇಳಿಕೆಯಾಗಬಹುದೆಂದು ಅಂದಾಜಿಸಲಾಗಿದೆ. ಕೃಷಿ ವಲಯದ ಋಣಾತ್ಮಕ ಬೆಳವಣಿಗೆಗೆ ಇದು ಪ್ರಮುಖ ಕಾರಣವಾಗಿರುತ್ತದೆ.

## ರಾಷ್ಟ್ರೀಯ ಹಾಗೂ ರಾಜ್ಯದ ಆಂತರಿಕ ಉತ್ಪನ್ನಗಳ ಹೋಲಿಕೆಗಳು

ಸ್ಥಿರ (೨೦೧೧-೧೨) ಬೆಲೆಗಳಲ್ಲಿ ೨೦೧೪-೧೫ನೇ ಸಾಲಿಗೆ ಹೋಲಿಸಿದಾಗ ೨೦೧೫-೧೬ನೇ ಸಾಲಿನ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಬೆಳವಣಿಗೆ ಶೇ.೬.೨ರಷ್ಟು ಬೆಳವಣಿಗೆಯೊಂದಿಗೆ ೭,೮೦,೮೦೫ ಕೋಟಿ ರೂಪಾಯಿಗಳಷ್ಟು ಆಗುವ ನಿರೀಕ್ಷೆಯಿದೆ. ಇದಕ್ಕನುಗುಣವಾಗಿ ಶೇ.೭.೬ರಷ್ಟು ಬೆಳವಣಿಗೆಯೊಂದಿಗೆ ರಾಷ್ಟ್ರೀಯ ಆಂತರಿಕ ಉತ್ಪನ್ನವು ೧,೧೩,೫೦,೬೩೨ ಕೋಟಿ ರೂಪಾಯಿಗಳಷ್ಟಾಗುವುದೆಂದು ನಿರೀಕ್ಷಿಸಲಾಗಿದೆ. ಸ್ಥಿರ (೨೦೧೧-೧೨) ಬೆಲೆಗಳಲ್ಲಿ ರಾಷ್ಟ್ರೀಯ ಹಾಗೂ ರಾಜ್ಯದ ಆಂತರಿಕ ಉತ್ಪನ್ನಗಳ ಬೆಳವಣಿಗೆ ದರಗಳನ್ನು ಕೋಷ್ಟಕ ೮.೪ರಲ್ಲಿ ನೀಡಲಾಗಿದೆ. ಪ್ರಸಕ್ತ ಬೆಲೆಗಳಲ್ಲಿ ರಾಷ್ಟ್ರೀಯ ಹಾಗೂ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ವಾರ್ಷಿಕ ಬೆಳವಣಿಗೆ ದರಗಳನ್ನು ಕೋಷ್ಟಕ ೮.೫ರಲ್ಲಿ ಕೊಡಲಾಗಿದೆ.

**ಕೋಷ್ಟಕ ೮.೪: ಸ್ಥಿರ (೨೦೧೧-೧೨) ಬೆಲೆಗಳಲ್ಲಿ ರಾಷ್ಟ್ರೀಯ ಹಾಗೂ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ವಾರ್ಷಿಕ ಬೆಳವಣಿಗೆ ದರಗಳು.**

| ವರ್ಷ | ರಾಜ್ಯದ ಒಟ್ಟು ಆಂತರಿಕ ಉತ್ಪನ್ನ (ಕೋಟಿ ರೂ. ಗಳಲ್ಲಿ) | ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಬೆಳವಣಿಗೆ ದರ (ಶೇಕಡಾವಾರು) | ರಾಷ್ಟ್ರೀಯ ಆಂತರಿಕ ಉತ್ಪನ್ನ (ಕೋಟಿ ರೂ.ಗಳಲ್ಲಿ) | ರಾಷ್ಟ್ರೀಯ ಆಂತರಿಕ ಉತ್ಪನ್ನದ ಬೆಳವಣಿಗೆ ದರ (ಶೇಕಡಾವಾರು) |
|---|---|---|---|---|
| ೨೦೧೧-೧೨ | ೬೦೨೬೫೫ | - | ೮೭೩೬೦೩೯ | - |
| ೨೦೧೨-೧೩ | ೬೩೭೮೯೩ | ೫.೮ | ೯೨೨೬೮೭೯ | ೫.೬ |
| ೨೦೧೩-೧೪ | ೬೮೧೮೮೯ | ೬.೯ | ೯೮೩೯೪೩೪ | ೬.೬ |
| ೨೦೧೪-೧೫ | ೭೩೪೯೮೮ | ೭.೮ | ೧೦೫೫೨೧೫೧ | ೭.೨ |
| ೨೦೧೫-೧೬ | ೭೮೦೮೦೫ | ೬.೨ | ೧೧೩೫೦೬೩೨ | ೭.೬ |

ಆಧಾರ: ೧. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು ೨. ಕೇಂದ್ರ ಸಾಂಖ್ಯಿಕ ಕಚೇರಿ, ಭಾರತ ಸರ್ಕಾರ.

**ಕೋಷ್ಟಕ ೮.೫: ಪ್ರಸಕ್ತ ಬೆಲೆಗಳಲ್ಲಿ ರಾಷ್ಟ್ರೀಯ ಹಾಗೂ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ವಾರ್ಷಿಕ ಬೆಳವಣಿಗೆ ದರಗಳು.**

| ವರ್ಷ | ರಾಜ್ಯದ ಒಟ್ಟು ಆಂತರಿಕ ಉತ್ಪನ್ನ (ಕೋಟಿ ರೂಪಾಯಿಗಳಲ್ಲಿ) | ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಬೆಳವಣಿಗೆ ದರ (ಶೇಕಡಾವಾರು) | ರಾಷ್ಟ್ರೀಯ ಆಂತರಿಕ ಉತ್ಪನ್ನ (ಕೋಟಿ ರೂಪಾಯಿಗಳಲ್ಲಿ) | ರಾಷ್ಟ್ರೀಯ ಆಂತರಿಕ ಉತ್ಪನ್ನದ ಬೆಳವಣಿಗೆ ದರ (ಶೇಕಡಾವಾರು) |
|---|---|---|---|---|
| ೨೦೧೧-೧೨ | ೬೦೨೬೫೫ | - | ೮೭೩೬೦೩೯ | - |
| ೨೦೧೨-೧೩ | ೬೯೦೦೧೫ | ೧೪.೫ | ೯೯೫೧೩೪೪ | ೧೩.೯ |
| ೨೦೧೩-೧೪ | ೭೯೭೭೫೦ | ೧೫.೬ | ೧೧೨೭೨೭೬೪ | ೧೩.೩ |
| ೨೦೧೪-೧೫ | ೯೦೭೮೩೯ | ೧೩.೮ | ೧೨೪೮೮೨೦೫ | ೧೦.೮ |
| ೨೦೧೫-೧೬ | ೧೦೨೨೭೨೯ | ೧೨.೭ | ೧೩೫೬೭೧೯೨ | ೮.೬ |

ಆಧಾರ: ೧. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು ೨. ಕೇಂದ್ರ ಸಾಂಖ್ಯಿಕ ಕಚೇರಿ, ಭಾರತ ಸರ್ಕಾರ.

### ೨೦೧೫-೧೬ನೇ ಮುನ್ಸೂಚನಾ ಅಂದಾಜು ಹಾಗೂ ೨೦೧೪-೧೫ನೇ ಸಾಲಿನ ಪರಿಷ್ಕೃತ ಅಂದಾಜುಗಳ ಹೋಲಿಕೆ

೨೦೧೪-೧೫ ಮತ್ತು ೨೦೧೫-೧೬ನೇ ಸಾಲಿನ ಆಂತರಿಕ ಉತ್ಪನ್ನದ ಅಂದಾಜುಗಳ ವಾರ್ಷಿಕ ಬೆಳವಣಿಗೆ ದರಗಳ ಹೋಲಿಕೆಯನ್ನು ಕೋಷ್ಟಕ ೮.೬ರಲ್ಲಿ ನೀಡಲಾಗಿದೆ. ೨೦೧೪-೧೫ನೇ ಸಾಲಿನ ಸ್ಥಿರ (೨೦೧೧-೧೨) ಬೆಲೆಗಳಲ್ಲಿ ಕೃಷಿ ಮತ್ತು ಅವಲಂಬಿತ ವಲಯದ ಬೆಳವಣಿಗೆ ದರ ಶೇ.೧.೬ರಷ್ಟಿದ್ದು, ೨೦೧೫-೧೬ನೇ ಸಾಲಿನಲ್ಲಿ ಶೇ.-೪.೭ಕ್ಕೆ ಇಳಿಕೆಯಾಗಬಹುದೆಂದು ಅಂದಾಜಿಸಲಾಗಿದೆ. ಕರ್ನಾಟಕ ರಾಜ್ಯದಲ್ಲಿ ಈವರೆವಿಗೂ ಮುಂಗಾರು ಋತುವಿನಲ್ಲಿ ೧೩೬ ತಾಲ್ಲೂಕುಗಳು ಮತ್ತು ಹಿಂಗಾರು ಋತುವಿನಲ್ಲಿ ೬೨ ತಾಲ್ಲೂಕುಗಳು ಬರಪೀಡಿತ ಪ್ರದೇಶವೆಂದು ಘೋಷಿಸಿರುವ ಹಿನ್ನೆಲೆಯಲ್ಲಿ ೨೦೧೪-೧೫ನೇ ಸಾಲಿನಲ್ಲಿದ್ದ ೧೨೨.೬೦ ಲಕ್ಷ ಟನ್ ಗಳ ಆಹಾರ ಪದಾರ್ಥಗಳ ಉತ್ಪಾದನೆಯು ೨೦೧೫-೧೬ನೇ ಸಾಲಿನಲ್ಲಿ ೧೧೦.೦೦ ಲಕ್ಷ ಟನ್ ಗಳಿಗೆ ಇಳಿಕೆಯಾಗಬಹುದೆಂದು ಅಂದಾಜಿಸಲಾಗಿದೆ.

ಕೃಷಿ ವಲಯದ ಋಣಾತ್ಮಕ ಬೆಳವಣಿಗೆಗೆ ಇದು ಪ್ರಮುಖ ಕಾರಣವಾಗಿರುತ್ತದೆ.ಕೈಗಾರಿಕಾ (ಗಣಿ ಮತ್ತು ಕಲ್ಲು ಅಗೆತ, ತಯಾರಿಕೆ, ನಿರ್ಮಾಣ ಕಾರ್ಯ, ವಿದ್ಯುಚ್ಛಕ್ತಿ, ಅನಿಲ ಹಾಗೂ ನೀರು ಸರಬರಾಜು) ವಲಯದ ಬೆಳವಣಿಗೆ ದರವು ೨೦೧೪-೧೫ರಲ್ಲಿ ಶೇ.೪.೭ ಇದ್ದು, ೨೦೧೫-೧೬ನೇ ಸಾಲಿನಲ್ಲಿ ಶೇ.೪.೫ರಷ್ಟು ಆಗುವುದೆಂದು ಅಂದಾಜಿಸಲಾಗಿದೆ. ೨೦೧೪-೧೫ರಲ್ಲಿ ಸೇವಾ ವಲಯದ ಶೇ.೧೦.೩ ಬೆಳವಣಿಗೆ ದರಕ್ಕೆ ಹೋಲಿಸಿದರೆ, ೨೦೧೫-೧೬ನೇ ಸಾಲಿನಲ್ಲಿ ಶೇ.೯.೧ಕ್ಕೆ ಇಳಿಕೆಯಾಗುವ ನಿರೀಕ್ಷೆಯಿದೆ (ಸ್ಥಿರಾಸ್ತಿ, ವೃತ್ತಿಪರ ಸೇವೆಗಳು ಮತ್ತು ವಾಸಗೃಹಗಳ ಒಡೆತನ ಹಾಗೂ ಸಂಪರ್ಕ ವಲಯಗಳು ಶೇ.೧೨.೦ ಕ್ಕಿಂತ ಹೆಚ್ಚಿನ ಬೆಳವಣಿಗೆಯನ್ನು ಕಂಡಿವೆ).

ಈ ಬೆಳವಣಿಗೆಯು ೨೦೧೫-೧೬ರ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇ.೬.೨ರ ಬೆಳವಣಿಗೆಗೆ ಪ್ರಮುಖ ಕಾರಣವಾಗಿರುತ್ತದೆ. ಅದರಂತೆ ೨೦೧೫-೧೬ರಲ್ಲಿ ರಾಷ್ಟ್ರೀಯ ಆಂತರಿಕ ಉತ್ಪನ್ನವು ಶೇ.೭.೬ರಷ್ಟು ಬೆಳವಣಿಗೆಯಾಗುವ ನಿರೀಕ್ಷೆ ಇದೆ. ರಾಷ್ಟ್ರದ ಆಂತರಿಕ ಉತ್ಪನ್ನದಲ್ಲಿ ಕೃಷಿ, ಕೈಗಾರಿಕೆ ಮತ್ತು ಸೇವಾ ವಲಯಗಳ ಬೆಳವಣಿಗೆ ಕ್ರಮವಾಗಿ ಶೇ.೧.೧, ಶೇ.೭.೩ ಮತ್ತು ಶೇ.೯.೨ ಆಗುವ ನಿರೀಕ್ಷೆಯಿದೆ.

**ಕೋಷ್ಟಕ ೮.೬: ಸ್ಥಿರ (೨೦೧೧-೧೨) ಬೆಲೆಗಳಲ್ಲಿ ಕರ್ನಾಟಕ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ವಲಯವಾರು ಬೆಳವಣಿಗೆ ದರಗಳು (ಶೇಕಡಾವಾರು)**

| ಕ್ರ. ಸಂ. | ವಲಯಗಳು | ೨೦೧೪-೧೫ ಪ್ರ.ದ.ಅಂ. | ೨೦೧೫-೧೬ ಮು.ಅಂ. |
|---|---|---|---|
| ೧ | ಕೃಷಿ | ೦.೬ | -೭.೭ |
| ೨ | ಜಾನುವಾರು | ೪.೮ | ೩.೬ |
| ೩ | ಅರಣ್ಯ ಮತ್ತು ಮರಗೆಲಸ | -೧.೬ | -೧.೪ |
| ೪ | ಮೀನುಗಾರಿಕೆ | ೧೧.೯ | ೫.೧ |
| | **ಕೃಷಿ ಅವಲಂಬಿತ ವಲಯ** | **೧.೬** | **-೪.೭** |
| ೫ | ಗಣಿ ಮತ್ತು ಕಲ್ಲು ಅಗೆತ | ೩.೭ | ೨.೧ |
| ೬ | ತಯಾರಿಕೆ | ೫.೧ | ೫.೦ |
| ೭ | ವಿದ್ಯುಚ್ಛಕ್ತಿ, ಅನಿಲ ಹಾಗೂ ನೀರು ಸರಬರಾಜು | ೬.೫ | ೨.೫ |
| ೮ | ನಿರ್ಮಾಣ ಕಾರ್ಯ | ೩.೨ | ೪.೦ |
| | **ಕೈಗಾರಿಕಾ ವಲಯ** | **೪.೭** | **೪.೫** |
| ೯ | ವ್ಯಾಪಾರ ಮತ್ತು ದುರಸ್ತಿ ಸೇವೆಗಳು | ೭.೬ | ೪.೮ |
| ೧೦ | ವಸತಿ ಮತ್ತು ಉಪಹಾರ ಗೃಹಗಳು | ೪.೩ | ೧.೯ |
| ೧೧ | ರೈಲ್ವೆ | ೪.೩ | ೬.೩ |
| ೧೨ | ರಸ್ತೆ ಸಾರಿಗೆ | ೮.೬ | ೭.೧ |
| ೧೩ | ಜಲ ಸಾರಿಗೆ | ೦.೩ | ೩.೧ |
| ೧೪ | ವಾಯು ಸಾರಿಗೆ | ೨೪೭ | -೧.೬ |
| ೧೫ | ಸಾರಿಗೆ ಪೂರಕ ಸೇವೆಗಳು | ೧೦.೨ | ೦.೬ |
| ೧೬ | ದಾಸ್ತಾನು | ೭.೨ | ೪.೮ |
| ೧೭ | ಸಂಪರ್ಕ | ೧೭.೬ | ೧೪.೦ |
| ೧೮ | ಹಣಕಾಸು ಸೇವೆಗಳು | ೮.೮ | ೮.೮ |
| ೧೯ | ಸ್ಥಿರಾಸ್ತಿ, ವೃತ್ತಿಪರ ಸೇವೆಗಳು ಮತ್ತು ವಾಸಗೃಹಗಳ ಒಡೆತನ | ೧೨.೮ | ೧೨.೦ |
| ೨೦ | ಸಾರ್ವಜನಿಕ ಆಡಳಿತ | ೫.೬ | ೫.೪ |
| ೨೧ | ಇತರ ಸೇವೆಗಳು | ೭.೯ | ೬.೫ |
| | **ಸೇವಾ ವಲಯ** | **೧೦.೩** | **೯.೧** |
| | **ರಾಜ್ಯದ ಒಟ್ಟು ಆಂತರಿಕ ಉತ್ಪನ್ನ (ಮೂಲ ಬೆಲೆಗಳಲ್ಲಿ)** | **೭.೬** | **೬.೨** |
| | **ಉತ್ಪನ್ನ ತೆರಿಗೆಗಳು** | **೧೦.೮** | **೭.೯** |
| | **ಉತ್ಪನ್ನ ಸಬ್ಸಿಡಿಗಳು** | **೧೪.೨** | **೧೧.೬** |
| | **ರಾಜ್ಯದ ಒಟ್ಟು ಆಂತರಿಕ ಉತ್ಪನ್ನ (ಮಾರುಕಟ್ಟೆ ಬೆಲೆಗಳಲ್ಲಿ)** | **೭.೮** | **೬.೨** |

ಆಧಾರ: ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರುಮು.ಅಂ.: ಮುನ್ಸೂಚನಾ ಅಂದಾಜುಗಳು. ಪ್ರ.ಪ.ಅಂ.: ಪ್ರಥಮ ಪರಿಷ್ಕೃತ ಅಂದಾಜುಗಳು

### ರಾಜ್ಯ ನಿವ್ವಳ ಆಂತರಿಕ ಉತ್ಪನ್ನ (ರಾಜ್ಯಾದಾಯ)

ರಾಜ್ಯದ ಒಟ್ಟು ಆಂತರಿಕ ಉತ್ಪನ್ನದಲ್ಲಿ ಸ್ಥಿರ ಬಂಡವಾಳ ಬಳಕೆ ಅಥವಾ ಸವಕಳಿಯನ್ನು ಕಳೆದರೆ ನಿವ್ವಳ ಆಂತರಿಕ ಉತ್ಪನ್ನವು ಲಭ್ಯವಾಗುತ್ತದೆ. ೨೦೧೪-೧೫ನೇ ಸಾಲಿನಲ್ಲಿ ರಾಜ್ಯದ ನಿವ್ವಳ ಆಂತರಿಕ ಉತ್ಪನ್ನವು ಸ್ಥಿರ (೨೦೧೧-೧೨) ಬೆಲೆಗಳಲ್ಲಿ ೬೬೯೦೭೮ ಕೋಟಿ ರೂಪಾಯಿಗಳಷ್ಟಿದ್ದು, ಇದು ೨೦೧೫-೧೬ನೇ ಸಾಲಿಗೆ ೭೧೦೨೧೫ ಕೋಟಿ ರೂಪಾಯಿಗಳಷ್ಟಾಗುವುದೆಂದು ಅಂದಾಜಿಸಲಾಗಿದೆ. ಅಂದರೆ ಕಳೆದ ಸಾಲಿನ ಶೇ.೭.೮ರ ಬೆಳವಣಿಗೆಗೆ ಹೋಲಿಸಿದಾಗ ಪ್ರಸಕ್ತ ಸಾಲಿನಲ್ಲಿ ಬೆಳವಣಿಗೆ ಶೇ.೬.೧ಕ್ಕೆ ಇಳಿಕೆಯಾಗಿದೆ. ೨೦೧೫-೧೬ನೇ ಸಾಲಿನಲ್ಲಿ ಕೃಷಿ, ಕೈಗಾರಿಕೆ ಹಾಗೂ ಸೇವಾ ವಲಯಗಳ ಬೆಳವಣಿಗೆ ದರ ಕ್ರಮವಾಗಿ ಶೇ.೫.೬, ಶೇ.೪.೫, ಶೇ.೯.೧ರಷ್ಟು ಆಗಲಿದೆ. ಪ್ರಸಕ್ತ ಬೆಲೆಗಳಲ್ಲಿ ೨೦೧೫-೧೬ನೇ ಸಾಲಿನ ನಿವ್ವಳ ಆಂತರಿಕ ಉತ್ಪನ್ನವನ್ನು

೯೩೬೦೪೫ ಕೋಟಿ ರೂಪಾಯಿಗಳೆಂದು ಅಂದಾಜಿಸಲಾಗಿದ್ದು, ಇದು ೨೦೧೪-೧೫ನೇ ಸಾಲಿಗಿಂತ ಶೇ.೧೨.೬ರಷ್ಟು ಹೆಚ್ಚಳವಾಗಿರುತ್ತದೆಅನ್ನು ನೋಡಿಕೃಷಿ, ಕೈಗಾರಿಕೆ ಮತ್ತು ಸೇವಾ ವಲಯಗಳು ಕ್ರಮವಾಗಿ ಶೇ.೨.೪, ಶೇ.೭.೩ ಮತ್ತು ಶೇ.೧೬.೫ ಬೆಳವಣಿಗೆಯಾಗುವ ನಿರೀಕ್ಷೆ ಇದೆ. ವಿವರಗಳಿಗೆ ಕೋಷ್ಟಕ ೮.೭ಅನ್ನು ನೋಡಿ.

**ಕೋಷ್ಟಕ ೮.೭: ಪ್ರಸಕ್ತ ಮತ್ತು ಸ್ಥಿರ (೨೦೧೧-೧೨) ಬೆಲೆಗಳಲ್ಲಿ ರಾಜ್ಯ ನಿವ್ವಳ ಆಂತರಿಕ ಉತ್ಪನ್ನ, (ರೂ. ಕೋಟಿಗಳಲ್ಲಿ)**

| ವಲಯಗಳು | ಪ್ರಸಕ್ತ ಬೆಲೆಗಳಲ್ಲಿ | | ಸ್ಥಿರ (೨೦೧೧-೧೨) ಬೆಲೆಗಳಲ್ಲಿ | |
|---|---|---|---|---|
| | ೨೦೧೪-೧೫ ಪ್ರ.ಪ.ಅಂ. | ೨೦೧೫-೧೬ ಮುಂ.ಅಂ. | ೨೦೧೪-೧೫ ಪ್ರ.ಪ.ಅಂ. | ೨೦೧೫-೧೬ ಮು.ಅಂ. |
| ಕೃಷಿ | ೧೦೨೪೩೪ | ೧೦೪೮೬೮ | ೭೩೫೨೫ | ೬೯೪೨೯ |
| ಕೈಗಾರಿಕೆ | ೧೭೮೯೪೭ | ೧೯೨೦೯೯ | ೧೫೭೪೪೧ | ೧೬೪೫೧೩ |
| ಸೇವಾ | ೪೭೩೦೨೩ | ೫೫೧೨೧೯ | ೩೭೫೮೧೧ | ೪೦೯೯೮೩ |
| **ನಿವ್ವಳ ಆಂತರಿಕ ಉತ್ಪನ್ನ ಮೂಲ ಬೆಲೆಯಲ್ಲಿ** | **೭೫೪೪೦೪** | **೮೪೮೧೮೬** | **೬೦೬೭೭೭** | **೬೪೩೯೨೫** |
| ಉತ್ಪನ್ನ ತೆರಿಗೆಗಳು | ೧೦೭೭೬೧ | ೧೨೪೨೧೮ | ೮೮೪೪೨ | ೯೫೪೭೨ |
| ಉತ್ಪನ್ನ ಸಬ್ಸಿಡಿಗಳು | ೩೦೮೩೭ | ೩೬೩೬೦ | ೨೬೧೪೨ | ೨೯೧೮೩ |
| **ನಿವ್ವಳ ಆಂತರಿಕ ಉತ್ಪನ್ನ ಮಾರುಕಟ್ಟೆ ಬೆಲೆಯಲ್ಲಿ** | **೮೩೧೩೭೮** | **೯೩೬೦೪೫** | **೬೬೯೦೭೮** | **೭೧೦೨೧೫** |

ಮು.ಅಂ.: ಮುನ್ನೋಟನಾ ಅಂದಾಜುಗಳು. ಪ್ರ.ಪ.ಅಂ.: ಪ್ರಥಮ ಪರಿಷ್ಕೃತ ಅಂದಾಜುಗಳು ಆಧಾರ: ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು

### ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ವಲಯವಾರು ಕೊಡುಗೆ

೨೦೧೪-೧೫ನೇ ಸಾಲಿನ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದಲ್ಲಿ ಕೃಷಿ ಹಾಗೂ ಕೈಗಾರಿಕೆ ವಲಯಗಳ ಕೊಡುಗೆ ಕ್ರಮವಾಗಿ ಶೇ.೧೩.೪೦, ಶೇ.೨೪.೭೯ರಷ್ಟಿದ್ದು, ಇದು ೨೦೧೫-೧೬ನೇ ಸಾಲಿಗೆ ಕ್ರಮವಾಗಿ ಶೇ.೧೨.೩೦, ಶೇ.೨೩.೬೫ಕ್ಕೆ ಇಳಿಕೆಯಾಗಿರುವುದು ಹಾಗೂ ಸೇವಾ ವಲಯದಲ್ಲಿ ಶೇ.೬೧.೮೨ ರಿಂದ ಶೇ.೬೪.೦೫ಗೆ ಏರಿಕೆಯಾಗಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಒಟ್ಟು ಆಂತರಿಕ ಉತ್ಪನ್ನದಲ್ಲಿ ಸೇವಾ ವಲಯದ ಕೊಡುಗೆ ಅಧಿಕವಾಗಿದೆ. ೨೦೧೫-೧೬ನೇ ಸಾಲಿನಲ್ಲಿ 'ಸ್ಥಿರಾಸ್ತಿ, ವೃತ್ತಿಪರ ಸೇವೆಗಳು ಮತ್ತು ವಾಸಗೃಹಗಳ ಒಡೆತನ' ವಲಯದ ಕೊಡುಗೆಯು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದಲ್ಲಿ ಅತಿ ಹೆಚ್ಚು, ಅಂದರೆ ಶೇ.೩೨.೮೨ರಷ್ಟಿದ್ದು, ನಂತರದ ಸ್ಥಾನಗಳಲ್ಲಿ 'ತಯಾರಿಕಾ ವಲಯ (ಶೇ.೧೪.೫೯)', ವ್ಯಾಪಾರ ಮತ್ತು ದುರಸ್ತಿ ಸೇವೆಗಳು (ಶೇ.೯.೨೩)', ಹಾಗೂ 'ಕೃಷಿ (ಶೇ.೮.೬೬)' ವಲಯಗಳಲ್ಲಿ ಹೆಚ್ಚಾಗುವ ಸಂಭವವಿರುತ್ತದೆ.

### ತಲಾದಾಯ

ಪ್ರಸಕ್ತ ಬೆಲೆಗಳಲ್ಲಿನ ರಾಜ್ಯದ ನಿವ್ವಳ ಆಂತರಿಕ ಉತ್ಪನ್ನವನ್ನು ವಿತ್ತೀಯ ವರ್ಷದ ನಟ್ಟನಡುವಿನ ಅಂದಾಜು ಜನಸಂಖ್ಯೆಯಿಂದ ಅಂದರೆ ಪ್ರತಿ ವರ್ಷದ ಅಕ್ಟೋಬರ್ ಒಂದರಂದು ಇರಬಹುದಾದ ಜನಸಂಖ್ಯೆಯಿಂದ ಭಾಗಿಸಿ ತಲಾದಾಯವನ್ನು ಲೆಕ್ಕ ಹಾಕಲಾಗುತ್ತದೆ. ಪ್ರಸಕ್ತ ಬೆಲೆಗಳಲ್ಲಿ ೨೦೧೪-೧೫ನೇ ಸಾಲಿನಲ್ಲಿ ರಾಜ್ಯದ ನಿವ್ವಳ ತಲಾದಾಯವು ೧೩೦೮೯೭ ರೂಪಾಯಿಗಳಷ್ಟಿದ್ದು, ಇದು ೨೦೧೫-೧೬ನೇ ಸಾಲಿಗೆ ಶೇ.೧೧.೪ರಷ್ಟು ಹೆಚ್ಚಳದೊಂದಿಗೆ ೧೪೫೭೯೯ ರೂಪಾಯಿಗಳಷ್ಟಾಗುವುದೆಂದು ಅಂದಾಜಿಸಲಾಗಿದೆ.

೨೦೧೪-೧೫ನೇ ಸಾಲಿನಲ್ಲಿ ನಿವ್ವಳ ತಲಾದಾಯವು ಸ್ಥಿರ (೨೦೧೧-೧೨) ಬೆಲೆಗಳಲ್ಲಿ ೧೦೫೩೫೦ ರೂಪಾಯಿಗಳಷ್ಟಿದ್ದು, ಇದು ೨೦೧೫-೧೬ನೇ ಸಾಲಿಗೆ ಶೇ.೫.೦ ರಷ್ಟು ಹೆಚ್ಚಳದೊಂದಿಗೆ ೧೧೦೬೨೪ ರೂಪಾಯಿಗಳಷ್ಟಾಗುವುದೆಂದು ಅಂದಾಜಿಸಲಾಗಿದೆ.

### ರಾಜ್ಯ ನಿವ್ವಳ ಆಂತರಿಕ ಉತ್ಪನ್ನ ಹಾಗೂ ತಲಾದಾಯ ಬೆಳವಣಿಗೆ

ಕೋಷ್ಟಕ ೮.೮ರಲ್ಲಿ ವರ್ಷವಾರು ರಾಜ್ಯ ನಿವ್ವಳ ಆಂತರಿಕ ಉತ್ಪನ್ನ ಹಾಗೂ ತಲಾದಾಯ ಬೆಳವಣಿಗೆ ದರದ ಮಾಹಿತಿಯನ್ನು ನೀಡಲಾಗಿದೆ.

**ಕೋಷ್ಟಕ ೮.೮ರಾಜ್ಯ ನಿವ್ವಳ ಆಂತರಿಕ ಉತ್ಪನ್ನ ಹಾಗೂ ತಲಾದಾಯದ ಬೆಳವಣಿಗೆ**

| ವರ್ಷ | ರಾಜ್ಯ ನಿವ್ವಳ ಆಂತರಿಕ ಉತ್ಪನ್ನ (ಕೋಟಿಗಳಲ್ಲಿ) | ತಲಾದಾಯ (ರೂಗಳಲ್ಲಿ) |
|---|---|---|
| ೧೯೬೦-೬೧ | ೬೯೨ | ೨೯೬ |
| ೧೯೭೦-೭೧ | ೧೮೫೮ | ೬೪೧ |
| ೧೯೮೦-೮೧ | ೫೫೮೭ | ೧೫೨೦ |
| ೧೯೯೦-೯೧ | ೨೦೫೫೧ | ೪೫೯೮ |
| ೨೦೦೦-೦೧ | ೯೬೩೪೮ | ೧೮೩೪೪ |
| ೨೦೧೦-೧೧ | ೩೬೮೩೩೮ | ೬೨೨೫೧ |
| ೨೦೧೧-೧೨ | ೫೫೧೫೯೭ | ೮೯೭೧೭ |
| ೨೦೧೨-೧೩ | ೬೩೦೫೭೬ | ೧೦೧೪೫೧ |
| ೨೦೧೩-೧೪ (ದ್ವಿ.ಪ.ಅಂ.) | ೭೩೦೭೮೬ | ೧೧೬೭೩೮ |
| ೨೦೧೪-೧೫ (ಪ್ರ.ಪ.ಅಂ.) | ೮೩೧೩೭೮ | ೧೩೦೮೯೭ |
| ೨೦೧೫-೧೬ (ಮು.ಅಂ.) | ೯೩೬೦೪೫ | ೧೪೫೭೯೯ |

ಆಧಾರ: ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು

### ಆಂತರಿಕ ಉತ್ಪನ್ನದ ಅಂತರ-ರಾಜ್ಯಗಳ ಹೋಲಿಕೆ

೨೦೧೪-೧೫ನೇ ಸಾಲಿನ ಕರ್ನಾಟಕ ರಾಜ್ಯ ಆಂತರಿಕ ಉತ್ಪನ್ನ ಅಥವಾ ಆಂತರಿಕ ಆದಾಯ ಹಾಗೂ ತಲಾದಾಯವನ್ನು ಕೆಲವು ಪ್ರಮುಖ ರಾಜ್ಯಗಳೊಂದಿಗೆ ಮತ್ತು ಅಖಿಲ ಭಾರತಕ್ಕೆ ಹೋಲಿಕೆಯನ್ನು ಕೋಷ್ಟಕ ೮.೯ ರಲ್ಲಿ ನೀಡಲಾಗಿದೆ.ಕರ್ನಾಟಕ ರಾಜ್ಯವು ಆದಾಯದಲ್ಲಿ ೪ನೇ ಸ್ಥಾನವನ್ನು ಮತ್ತು ತಲಾದಾಯದಲ್ಲಿ ೬ನೇ ಸ್ಥಾನವನ್ನು ಪಡೆದಿರುವುದು ಗೋಚರಿಸುತ್ತದೆ.

**ಕೋಷ್ಟಕ ೮.೯ ಅಂತರ ರಾಜ್ಯಗಳ ರಾಜ್ಯ ಆದಾಯ ಮತ್ತು ತಲಾದಾಯಗಳ ಹೋಲಿಕೆ**

| ಕ್ರ. ಸಂ. | ರಾಜ್ಯ | ರಾಜ್ಯ ಆದಾಯ (ಕೋಟಿಗಳಲ್ಲಿ) | ಸ್ಥಾನ | ತಲಾದಾಯ (ರೂ.ಗಳಲ್ಲಿ) | ಸ್ಥಾನ |
|---|---|---|---|---|---|
| ೧ | ಆಂಧ್ರ ಪ್ರದೇಶ | ೫೩೨೯೨೨ | ೭ | ೯೫೩೮೯ | ೧೦ |
| ೨ | ಬಿಹಾರ | ೪೧೦೮೬೨ | ೧೩ | ೩೪೮೫೬ | ೧೬ |
| ೩ | ಗುಜರಾತ್ | ೮೯೫೨೦೨ | ೫ | ೧೨೪೩೫೮ | ೮ |
| ೪ | ಹರಿಯಾಣ | ೪೪೧೮೬೪ | ೧೨ | ೧೫೦೨೬೦ | ೨ |
| **೫** | **ಕರ್ನಾಟಕ** | **೯೦೭೮೩೯** | **೪** | **೧೩೦೮೯೭** | **೬** |
| ೬ | ಕೇರಳ | ೫೧೯೮೯೬ | ೯ | ೧೩೮೩೯೦ | ೩ |
| ೭ | ಮಧ್ಯ ಪ್ರದೇಶ | ೪೫೧೩೪೮ | ೧೧ | ೫೧೩೭೧ | ೧೪ |
| ೮ | ಮಹಾರಾಷ್ಟ್ರ | ೧೭೯೨೧೨೨ | ೧ | ೧೩೪೦೮೧ | ೫ |
| ೯ | ಒಡಿಶಾ | ೩೦೯೮೦೭ | ೧೫ | ೬೩೧೦೮ | ೧೩ |
| ೧೦ | ಪಂಜಾಬ್ | ೩೬೮೦೧೧ | ೧೪ | ೧೧೪೫೬೧ | ೯ |
| ೧೧ | ರಾಜಸ್ತಾನ | ೬೧೨೧೯೪ | ೬ | ೭೬೮೮೧ | ೧೨ |
| ೧೨ | ತಮಿಳುನಾಡು | ೧೧೨೦೬೨೦ | ೨ | ೧೩೫೮೦೬ | ೪ |
| ೧೩ | ತೆಲಂಗಾಣ | ೫೨೨೦೦೧ | ೮ | ೧೨೯೧೮೨ | ೭ |
| ೧೪ | ಉತ್ತರ ಪ್ರದೇಶ | ೧೦೪೧೯೯೭ | ೩ | ೪೪೧೯೭ | ೧೫ |
| ೧೫ | ದೆಹಲಿ | ೪೯೪೪೬೦ | ೧೦ | ೨೫೨೦೧೧ | ೧ |
| **ಅಖಿಲ ಭಾರತ** | | **೧೨೪೮೮೨೦೫** | | **೮೬೮೭೯** | |

ಮೂಲ: ೧. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು. ೨. ಕೇಂದ್ರ ಸಾಂಖ್ಯಿಕ ಸಂಸ್ಥೆ, ಭಾರತ ಸರ್ಕಾರ.

### ಜಿಲ್ಲಾ ಆದಾಯ

೨೦೧೩-೧೪ರಲ್ಲಿದ್ದ ವಲಯವಾರು, ಜಿಲ್ಲಾವಾರು ಆದಾಯ-ತಲಾದಾಯಗಳ (ಚಾಲ್ತಿ ಬೆಲೆಗಳಲ್ಲಿ) ವಿವರವನ್ನು ಕೋಷ್ಟಕ ೮.೧೦ ರಲ್ಲೂ ಮತ್ತು ಸ್ಥಿರ (೨೦೧೧-೧೨)ಬೆಲೆಗಳನ್ನು ೮.೧೧ರಲ್ಲಿ ನೀಡಲಾಗಿದೆ.

**ಕೋಷ್ಟಕ ೮.೧೦ ೨೦೧೩-೧೪ರಲ್ಲಿದ್ದ ವಲಯವಾರು, ಜಿಲ್ಲಾವಾರು ನಿವ್ವಳ ಆದಾಯ, ತಲಾದಾಯಗಳ ವಿವರ (ಚಾಲ್ತಿ ಬೆಲೆಗಳಲ್ಲಿ)**

(ಲಕ್ಷ ರೂ.ಗಳಲ್ಲಿ)

| ಕ್ರ.ಸಂ. | ಜಿಲ್ಲೆ | ಕೃಷಿ | ಜಾನುವಾರು | ಅರಣ್ಯ ಮತ್ತು ಮರಗೆಲಸ | ಮೀನುಗಾರಿಕೆ | ಗಣಿ ಮತ್ತು ಕಲ್ಲು ಆಗೆತ | ತಯಾರಿಕೆ |
|---|---|---|---|---|---|---|---|
| ೧ | ೨ | ೩ | ೪ | ೫ | ೬ | ೭ | ೮ |
| ೧ | ಬಾಗಲಕೋಟೆ | ೨೯೫೯೪೬ | ೫೨೦೦೦ | ೧೫೦೭೯ | ೫೧೦ | ೧೦೧೩೯ | ೩೨೧೪೬೮ |
| ೨ | ಬೆಂಗಳೂರು ನಗರ | ೫೦೮೪೬ | ೧೦೭೭೨೪ | ೩೩೫೯೫ | ೧೬೩೮ | ೨೫೬೪೮ | ೨೮೭೪೧೭೧ |
| ೩ | ಬೆಂಗಳೂರು (ಗ್ರಾ) | ೮೩೨೭೮ | ೪೫೨೧೮ | ೧೬೦೭೪ | ೬೯೬ | ೧೦೪೧೩ | ೨೮೬೩೪೩ |
| ೪ | ಬೆಳಗಾವಿ | ೫೧೯೦೮೩ | ೧೧೫೫೪೦ | ೪೨೮೩೭ | ೨೭೭೭ | ೧೧೭೯೯ | ೪೪೪೭೨೬ |
| ೫ | ಬಳ್ಳಾರಿ | ೨೫೮೨೧೭ | ೬೦೯೬೪ | ೧೯೬೧೭ | ೮೧೨೨ | ೧೯೭೫೧೭ | ೨೨೦೮೩೩ |
| ೬ | ಬೀದರ್ | ೧೬೪೯೫೯ | ೨೯೫೬೩ | ೨೧೨೯ | ೧೭೭೧ | ೩೭೬೬ | ೧೧೭೯೫೫ |
| ೭ | ವಿಜಯಪುರ | ೨೯೭೬೬೧ | ೨೨೩೮೫ | ೧೭೬೭೬ | ೪೪೧೫ | ೫೨೦೦ | ೧೩೯೯೫೯ |
| ೮ | ಚಾಮರಾಜನಗರ | ೧೨೯೨೪೬ | ೩೨೫೫೧ | ೧೩೨೨೨ | ೧೨೪೨ | ೩೮೪೮ | ೧೨೨೯೦೫ |
| ೯ | ಚಿಕ್ಕಬಳ್ಳಾಪುರ | ೧೨೯೪೦೯ | ೮೬೨೬೭ | ೧೮೨೧೧ | ೧೦೪೭ | ೬೭೦೯ | ೧೪೬೯೯೭ |
| ೧೦ | ಚಿಕ್ಕಮಗಳೂರು | ೨೮೭೦೪೫ | ೨೯೦೦೫ | ೨೮೦೩೯ | ೩೧೬೭ | ೪೩೭೬ | ೩೮೦೦೨೭ |
| ೧೧ | ಚಿತ್ರದುರ್ಗ | ೨೪೬೯೩೦ | ೩೪೨೩೪ | ೨೬೪೧೩ | ೨೩೬೮ | ೨೪೫೬ | ೧೦೮೦೩೧ |
| ೧೨ | ದಕ್ಷಿಣ ಕನ್ನಡ | ೧೬೬೧೩೯ | ೪೬೫೧೮ | ೩೩೩೦೯ | ೯೪೬೪೩ | ೫೮೫೮ | ೧೨೭೧೫೬೦ |
| ೧೩ | ದಾವಣಗೆರೆ | ೩೧೫೫೦೮ | ೬೮೦೯೧ | ೧೮೮೯೦ | ೮೦೭೯ | ೩೩೦೬ | ೧೮೦೮೫೧ |
| ೧೪ | ಧಾರವಾಡ | ೧೩೭೬೫೩ | ೩೦೫೪೯ | ೧೦೦೩೩ | ೧೨೫೭ | ೯೭೪೧ | ೨೧೫೨೨೦ |
| ೧೫ | ಗದಗ | ೧೨೩೮೪೧ | ೧೬೩೧೫ | ೭೬೬೯ | ೪೯೫ | ೪೧೯೮ | ೧೦೯೧೬೫ |
| ೧೬ | ಕಲಬುರಗಿ | ೩೬೩೫೫೭ | ೩೭೧೩೨ | ೧೭೪೨೩ | ೨೨೬೧ | ೬೨೯೯೯ | ೧೫೬೦೩೫ |
| ೧೭ | ಹಾಸನ | ೨೩೨೮೭೨ | ೬೫೫೦೯ | ೨೧೫೨೨ | ೬೪೭೮ | ೬೭೦೨ | ೧೩೭೮೧೦ |
| ೧೮ | ಹಾವೇರಿ | ೨೪೬೭೬೦ | ೪೦೪೪೦ | ೧೪೭೭೪ | ೨೪೨೧ | ೨೦೧೦ | ೧೧೩೨೪೭ |
| ೧೯ | ಕೊಡಗು | ೨೪೭೧೮೯ | ೧೨೬೨೬ | ೧೯೭೨೫ | ೧೭೫೫ | ೧೦೩ | ೫೦೮೭೮ |
| ೨೦ | ಕೋಲಾರ | ೧೮೨೦೭೫ | ೧೦೨೮೭೨ | ೧೮೬೦೦ | ೧೨೬೪ | ೧೬೬೧೪ | ೨೩೦೨೫೫ |
| ೨೧ | ಕೊಪ್ಪಳ | ೧೯೧೭೧೮ | ೭೧೯೫೨ | ೧೩೩೯೩ | ೨೪೯೮ | ೫೯೬೮ | ೯೭೪೫೧ |
| ೨೨ | ಮಂಡ್ಯ | ೧೯೨೮೮೨ | ೧೧೨೬೫೨ | ೨೦೩೫೮ | ೨೧೦೯ | ೭೮೫೪ | ೨೪೩೩೫೧ |
| ೨೩ | ಮೈಸೂರು | ೨೭೦೬೨೦ | ೭೩೦೬೮ | ೨೭೫೪೩ | ೩೬೧೪ | ೧೯೩೪ | ೩೨೭೦೨೪ |
| ೨೪ | ರಾಯಚೂರು | ೨೬೨೦೭೬ | ೨೯೪೧೭ | ೨೪೧೨೬ | ೮೦೬೪ | ೩೨೦೮೩ | ೯೧೯೮೧ |
| ೨೫ | ರಾಮನಗರ | ೯೫೮೦೨ | ೭೬೨೩೭ | ೧೨೮೩೮ | ೨೦೪೪ | ೭೫೧೧ | ೨೮೩೫೯೯ |
| ೨೬ | ಶಿವಮೊಗ್ಗ | ೨೭೯೭೧೬ | ೪೪೧೬೮ | ೩೯೩೫೧ | ೧೫೯೦೭ | ೬೫೩೭ | ೨೧೬೩೩೫ |
| ೨೭ | ತುಮಕೂರು | ೨೭೨೯೬೯ | ೭೧೪೧೩ | ೩೯೭೮೭ | ೫೪೮೫ | ೧೫೪೬೯ | ೫೬೮೩೯೩ |
| ೨೮ | ಉಡುಪಿ | ೭೬೧೯೪ | ೨೯೦೭೦ | ೩೬೪೯೮ | ೯೦೪೨೮ | ೮೭೦೫ | ೪೦೦೬೮೭ |
| ೨೯ | ಉತ್ತರ ಕನ್ನಡ | ೯೭೯೯೩ | ೨೩೦೭೧ | ೧೯೮೭೯ | ೪೬೯೯೨ | ೪೬೩೦ | ೧೪೦೯೦೧ |
| ೩೦ | ಯಾದಗಿರಿ | ೧೬೪೬೫೬ | ೧೦೮೫೪ | ೯೮೦೭ | ೧೬೦೪ | ೧೦೫೬ | ೭೪೦೪೭ |
| ರಾಜ್ಯ | | ೬೩೮೨೮೩೯ | ೧೫೭೭೭೦೪ | ೬೫೭೪೯೯ | ೩೪೪೦೯೪ | ೪೮೫೧೫೦ | ೧೦೦೭೨೨೦೫ |

| ವಿದ್ಯುಚ್ಛಕ್ತಿ, ಅನಿಲ, ನೀರು ಸರಬರಾಜು ಮತ್ತು ಪರಿಹಾರ ಸೇವೆಗಳು | ನಿರ್ಮಾಣ ಕಾರ್ಯ | ವ್ಯಾಪಾರ ಮತ್ತು ದುರಸ್ಥಿ ಸೇವೆಗಳು | ವಸತಿ ಮತ್ತು ಉಪಹಾರ ಗೃಹಗಳು | ರೈಲ್ವೆ | ಇತರ ರೀತಿಯ ಸಾರಿಗೆ | ದಾಸ್ತಾನು | ಸಂಪರ್ಕ | ಹಣಕಾಸು ಸೇವೆಗಳು |
|---|---|---|---|---|---|---|---|---|
| ೯ | ೧೦ | ೧೧ | ೧೨ | ೧೩ | ೧೪ | ೧೫ | ೧೬ | ೧೭ |
| ೩೧೫೧೭ | ೧೫೭೯೨೬ | ೧೭೦೯೮೯ | ೩೭೩೩೨ | ೨೦೯೧ | ೮೬೭೧೦ | ೮೯೯ | ೮೬೨೧ | ೧೩೨೩೯೭ |
| ೨೬೧೫೧೩ | ೧೬೪೮೧೬೨ | ೧೯೦೦೭೦೫ | ೩೨೩೭೫೭ | ೭೯೧೬ | ೫೭೩೩೦೪ | ೫೯೪೧ | ೬೨೪೧೧೫ | ೭೨೯೬೬೮ |
| ೩೭೮೯೫ | ೫೧೨೧೬ | ೧೩೭೪೪೮ | ೧೬೩೮೧ | ೭೭೨೩ | ೩೩೪೧೧ | ೩೪೬ | ೫೭೩೧ | ೩೦೬೧೦ |
| ೬೭೩೭೫ | ೨೧೧೨೨೩ | ೩೨೭೮೪೯ | ೭೧೨೩೬ | ೧೦೫೩೭ | ೮೨೨೪೩ | ೮೫೨ | ೧೫೪೦೨ | ೨೬೦೭೨೯ |
| ೨೮೩೨೬ | ೨೩೫೫೦೧ | ೨೩೭೩೮೮ | ೪೬೭೭೩ | ೧೬೫೮೦ | ೧೩೪೭೮೭ | ೧೩೯೭ | ೧೨೧೨೭ | ೧೦೩೦೨೪ |
| ೧೫೩೮೭ | ೫೨೩೧೪ | ೧೨೯೪೯೯ | ೨೭೬೯೯ | ೪೨೨೫ | ೪೬೫೭೭ | ೪೮೩ | ೫೩೮೪ | ೯೬೨೮೨ |
| ೨೩೪೮೬ | ೧೧೬೮೨೬ | ೧೩೨೯೦೪ | ೨೭೯೩೫ | ೬೯೫೩ | ೧೦೭೯೨೧ | ೧೧೧೮ | ೬೩೧೯ | ೭೮೮೨೫ |
| ೧೦೪೫೭ | ೪೪೪೫೩ | ೯೨೭೪೩ | ೧೪೫೨೭ | ೭೫೯ | ೪೯೬೧೦ | ೫೧೪ | ೪೩೫೪ | ೯೪೦೬೫ |
| ೨೩೬೪೯ | ೫೫೬೬೭ | ೧೨೧೮೪೬ | ೧೬೯೧೩ | ೨೬೭೪ | ೪೯೯೩೩ | ೫೧೭ | ೫೨೯೮ | ೨೯೮೭೧ |
| ೧೦೯೭೧ | ೧೩೯೭೭೫ | ೧೧೯೧೭೪ | ೨೩೬೧೩ | ೫೦೮೧ | ೮೨೩೯೯ | ೮೫೪ | ೯೩೮೨ | ೧೫೫೪೮೮ |
| ೨೧೭೮೧ | ೬೮೯೦೫ | ೧೧೩೯೩೬ | ೨೪೬೬೭ | ೯೧೪೬ | ೪೪೭೪೪ | ೪೬೪ | ೭೮೧೨ | ೪೫೭೦೨ |
| ೨೯೮೨೩ | ೩೯೭೧೨೭ | ೨೫೯೬೫೫ | ೬೭೦೦೮ | ೬೩೪೫ | ೧೯೨೯೦೯ | ೧೯೯೯ | ೩೭೭೩೯ | ೨೧೮೭೦೩ |
| ೧೯೯೧೬ | ೧೨೭೯೨೪ | ೧೫೯೮೪೪ | ೩೦೭೬೦ | ೨೫೧೪ | ೪೫೫೮೮ | ೪೭೨ | ೭೭೯೨ | ೪೪೬೩೧ |
| ೧೬೬೮೮ | ೩೬೭೨೧ | ೨೦೩೪೬೭ | ೩೭೮೮೬ | ೬೯೦೦ | ೭೭೪೨೧ | ೮೦೨ | ೧೮೬೭೭ | ೧೧೯೪೪೭ |
| ೬೪೭೫ | ೪೦೨೩೩ | ೧೧೦೯೭೯ | ೨೦೯೪೯ | ೫೧೩೫ | ೪೯೪೪೪ | ೫೧೨ | ೪೫೯೫ | ೪೯೩೬೦ |
| ೨೦೭೬೧ | ೫೧೦೪೩ | ೧೬೪೪೬೪ | ೩೩೯೦೭ | ೮೯೩೨ | ೬೦೨೪೪ | ೬೨೪ | ೮೨೧೬ | ೮೯೪೬೫ |
| ೧೯೫೪೩ | ೧೪೦೪೬೮ | ೧೬೮೩೩೬ | ೨೯೭೮೯ | ೧೩೧೫೭ | ೧೫೪೧೬೫ | ೧೫೯೮ | ೧೦೯೪೨ | ೧೩೬೯೪೧ |
| ೧೩೪೩೭ | ೬೫೮೪೧ | ೧೩೭೫೯೬ | ೨೨೩೯೩ | ೫೨೯೫ | ೫೧೯೪೪ | ೫೩೮ | ೭೩೦೧ | ೬೯೪೯೬ |
| ೪೦೯೦ | ೨೭೦೫೩ | ೬೩೪೩೮ | ೧೪೨೪೦ | ೦ | ೧೧೪೭೮ | ೧೧೯ | ೩೬೬೦ | ೨೧೦೭೮ |
| ೨೩೮೮೨ | ೪೩೩೫೪ | ೧೪೭೭೨೪ | ೨೦೭೨೪ | ೬೫೪೯ | ೬೨೭೬೬ | ೬೫೦ | ೭೦೦೩ | ೩೫೩೭೬ |
| ೨೧೫೧೫ | ೪೯೪೮೨ | ೧೦೬೨೪೫ | ೨೪೬೨೬ | ೨೭೮೧ | ೩೩೪೭೭ | ೩೪೭ | ೪೭೦೦ | ೪೩೫೯೬ |
| ೨೮೭೬೬ | ೧೪೪೮೬೨ | ೧೬೨೫೪೩ | ೩೨೯೦೯ | ೫೧೮೮ | ೧೨೦೦೭೬ | ೧೨೪೪ | ೧೦೮೬೫ | ೨೩೪೧೨೮ |
| ೩೬೩೪೫ | ೧೦೮೫೫೯ | ೩೦೫೪೦೮ | ೫೪೫೧೫ | ೬೪೧೮ | ೧೦೩೦೧೦ | ೧೦೬೮ | ೩೯೯೯೩ | ೧೧೭೩೯೬ |
| ೧೮೦೪೮ | ೮೭೩೪೫ | ೧೪೦೬೨೫ | ೩೪೨೮೩ | ೨೭೨೮ | ೮೫೮೧೦ | ೮೮೯ | ೫೯೪೩ | ೫೧೬೧೪ |
| ೧೮೯೧೧ | ೫೮೭೮೯ | ೯೫೭೦೦ | ೧೬೩೩೯ | ೩೨೦೯ | ೪೭೮೬೬ | ೪೯೬ | ೭೩೬೯ | ೩೩೬೯೫ |
| ೨೨೭೬೭ | ೨೮೮೬೮೩ | ೨೦೨೧೭೩ | ೩೪೫೯೭ | ೧೫೭೮ | ೧೦೧೮೫೪ | ೧೦೫೬ | ೨೩೪೭೪ | ೧೦೦೮೪೫ |
| ೪೯೦೭೭ | ೨೩೮೫೬೫ | ೨೫೮೯೪೫ | ೪೩೧೮೮ | ೫೧೮೮ | ೧೫೫೭೫೪ | ೧೬೧೪ | ೧೬೯೯೧ | ೧೧೨೯೦೭ |
| ೧೨೮೮೭ | ೧೫೯೪೨೯ | ೧೨೭೯೭೩ | ೩೬೪೮೮ | ೫೩೬೪ | ೯೮೫೮೮ | ೧೦೨೨ | ೧೫೫೯೪ | ೧೪೨೦೦೯ |
| ೯೪೨೦ | ೧೩೨೩೭೬ | ೧೧೯೩೫೩ | ೩೨೦೩೦ | ೯೪೧೩ | ೬೨೪೪೪ | ೬೪೨ | ೯೫೦೨ | ೧೨೨೮೪೬ |
| ೮೯೦೨ | ೫೦೬೩೮ | ೨೩೬೫೩ | ೧೮೦೫೩ | ೩೧೦೨ | ೬೮೮೮೮ | ೨೧೪ | ೩೦೨೩ | ೨೭೭೮೪ |
| ೯೧೩೬೬೫ | ೫೨೩೩೪೫೭ | ೬೪೯೨೫೯೯ | ೧೨೩೫೫೧೮ | ೧೭೩೫೧೨ | ೨೮೭೫೩೬೪ | ೨೯೭೯೮ | ೯೪೭೯೭೭ | ೩೫೩೨೯೭೬ |

ಮುಂದುವರೆದಿದೆ..

| ಕ್ರ. ಸಂ. | ಜಿಲ್ಲೆ | ಸ್ಥಿರಾಸ್ತಿ, ವೃತ್ತಿ ಪರ ಸೇವೆಗಳು ಮತ್ತು ವಾಸ ಗೃಹಗಳ ಒಡೆತನ | ಸಾರ್ವಜನಿಕ ಆಡಳಿತ | ಇತರ ಸೇವೆಗಳು | ನಿವ್ವಳ ಜಿಲ್ಲಾ ಆಂತರಿಕ ಉತ್ಪನ್ನ | ಉತ್ಪನ್ನ ತೆರಿಗೆಗಳು | ಉತ್ಪನ್ನ ಸಬ್ಸಿಡಿಗಳು |
|---|---|---|---|---|---|---|---|
| ೧ | ೨ | ೧೮ | ೧೯ | ೨೦ | ೨೧ | ೨೨ | ೨೩ |
| ೧ | ಬಾಗಲಕೋಟೆ | ೨೮೨೯೨೫ | ೧೪೧೮೬ | ೧೦೯೫೯೨ | ೧೬೩೦೩೨೪ | ೨೪೩೯೯೬ | ೬೮೨೫೯ |
| ೨ | ಬೆಂಗಳೂರು ನಗರ | ೧೧೪೬೫೪೪೩ | ೭೬೬೬೭೦ | ೯೧೩೪೮೪ | ೨೨೩೧೪೩೨೯ | ೩೧೪೬೫೭೬ | ೮೮೦೨೬೫ |
| ೩ | ಬೆಂಗಳೂರು (ಗ್ರಾ) | ೨೩೩೪೦೪ | ೧೬೧೨೯ | ೪೯೮೨೪ | ೧೦೬೨೧೩೯ | ೧೪೯೭೭೪ | ೪೧೯೦೦ |
| ೪ | ಬೆಳಗಾವಿ | ೫೩೨೧೦೦ | ೨೯೭೯೨ | ೨೧೬೪೭೭ | ೨೯೬೨೫೭೭ | ೪೧೭೭೫೭ | ೧೧೬೮೬೯ |
| ೫ | ಬಳ್ಳಾರಿ | ೩೬೩೫೮೬ | ೧೭೩೧೫೪ | ೧೩೪೪೨೨ | ೨೨೫೨೩೩೮ | ೩೧೭೬೦೫ | ೮೮೮೫೧ |
| ೬ | ಬೀದರ್ | ೧೯೯೧೮೨ | ೨೦೭೧೦ | ೯೫೨೬೪ | ೧೦೩೨೨೩೦ | ೧೪೫೫೫೬ | ೪೦೭೨೦ |
| ೭ | ವಿಜಯಪುರ | ೨೨೫೬೫೬ | ೧೬೩೯೬ | ೧೦೦೧೮೭ | ೧೩೩೨೧೨೨ | ೧೮೭೮೪೪ | ೫೨೫೫೦ |
| ೮ | ಚಾಮರಾಜನಗರ | ೧೪೪೦೬೪ | ೧೦೬೩೬ | ೪೮೭೩೪ | ೮೧೭೯೩೧ | ೧೧೫೩೮ | ೩೨೨೩೬ |
| ೯ | ಚಿಕ್ಕಬಳ್ಳಾಪುರ | ೧೮೮೪೦೨ | ೧೨೩೭೮ | ೭೭೨೨೦ | ೯೭೩೦೦೮ | ೧೩೭೨೦೫ | ೩೮೩೮೪ |
| ೧೦ | ಚಿಕ್ಕಮಗಳೂರು | ೨೩೬೬೨೨ | ೧೩೬೬೪ | ೧೦೯೬೪೩ | ೧೬೩೮೩೨೫ | ೨೩೧೦೨೩ | ೬೪೩೨೯ |
| ೧೧ | ಚಿತ್ರದುರ್ಗ | ೨೩೪೩೩೧ | ೧೩೧೫೫ | ೯೭೭೮೮ | ೧೧೦೨೮೬೧ | ೧೫೫೫೧೬ | ೪೩೫೦೬ |
| ೧೨ | ದಕ್ಷಿಣ ಕನ್ನಡ | ೬೭೨೧೨೩ | ೧೧೩೪೮೯ | ೨೪೬೩೯೨ | ೩೮೬೧೩೪೨ | ೫೪೪೪೯೩ | ೧೫೨೩೨೪ |
| ೧೩ | ದಾವಣಗೆರೆ | ೨೪೮೩೧೭ | ೨೦೧೨೧ | ೭೩೦೪೭ | ೧೩೭೫೬೫೩ | ೧೯೩೯೮೩ | ೫೪೨೬೭ |
| ೧೪ | ಧಾರವಾಡ | ೩೯೦೯೦೬ | ೩೯೭೦೫ | ೧೨೨೮೬೧ | ೧೬೭೮೯೩೬ | ೨೩೬೭೪೯ | ೬೬೨೩೧ |
| ೧೫ | ಗದಗ | ೧೩೭೫೯೧ | ೧೨೨೯೭ | ೬೬೦೦೩ | ೭೬೫೨೫೬ | ೧೦೭೯೧೦ | ೩೦೧೮೮ |
| ೧೬ | ಕಲಬುರಗಿ | ೨೬೬೨೦೪ | ೨೪೦೩೨ | ೧೦೯೬೯೪ | ೧೪೮೬೯೯೩ | ೨೦೯೬೮೩ | ೫೮೬೬೦ |
| ೧೭ | ಹಾಸನ | ೩೨೫೬೬೩ | ೧೮೮೭೫ | ೧೨೩೯೦೭ | ೧೬೧೪೨೭೬ | ೨೨೭೬೩೧ | ೬೩೬೮೧ |
| ೧೮ | ಹಾವೇರಿ | ೨೦೧೯೮೯ | ೧೨೫೧೨ | ೯೫೨೨೭ | ೧೧೦೩೨೨೧ | ೧೫೫೫೬೭ | ೪೩೫೨೦ |
| ೧೯ | ಕೊಡಗು | ೯೦೦೩೪ | ೫೫೯೯ | ೨೦೯೨೮ | ೫೯೩೯೯೩ | ೮೩೭೬೦ | ೨೩೪೩೨ |
| ೨೦ | ಕೋಲಾರ | ೨೧೩೬೫೧ | ೨೧೭೫೫ | ೯೫೩೪೯ | ೧೨೩೦೪೬೩ | ೧೭೩೫೦೯ | ೪೮೫೪೦ |
| ೨೧ | ಕೊಪ್ಪಳ | ೧೫೧೮೯೫ | ೮೯೩೫ | ೫೦೬೦೭ | ೮೮೧೧೮೬ | ೧೨೪೨೫೭ | ೩೪೭೬೧ |
| ೨೨ | ಮಂಡ್ಯ | ೨೯೩೧೧೫ | ೨೮೨೧೨ | ೧೧೮೮೬೭ | ೧೭೭೮೮೯೦ | ೨೫೦೮೪೪ | ೭೦೧೭೪ |
| ೨೩ | ಮೈಸೂರು | ೬೦೯೮೨೮ | ೬೮೦೭೮ | ೧೬೯೨೫೫ | ೨೩೨೩೬೭೫ | ೩೨೭೬೬೫ | ೯೧೬೬೫ |
| ೨೪ | ರಾಯಚೂರು | ೨೧೨೫೯೮ | ೨೧೨೦೬ | ೧೧೧೯೯೮ | ೧೨೨೦೮೩೩ | ೧೭೨೧೫೧ | ೪೮೧೬೦ |
| ೨೫ | ರಾಮನಗರ | ೨೨೨೩೦೩ | ೧೩೦೨೧ | ೬೫೬೨೫ | ೧೦೬೧೩೫೩ | ೧೪೯೬೬೩ | ೪೧೮೬೯ |
| ೨೬ | ಶಿವಮೊಗ್ಗ | ೩೩೫೪೧೬ | ೪೦೪೫೫ | ೧೬೭೬೨೫ | ೧೯೨೨೫೩೬ | ೨೭೧೧೦೦ | ೭೫೮೪೧ |
| ರಾಜ್ಯ ತೆರಿಗೆಗಳು | ೮.೯೯ | ೮.೮೭ | ೧೦.೧೦ | ೧೦.೭೦ | ೧೦.೨೮ | ೧೦.೧೯ | ೯.೭೬ | ೧೦.೩೮ |
| ಕೇಂದ್ರ ತೆರಿಗೆಗಳ ಪಾಲು | ೨.೩೩ | ೨.೧೪ | ೨.೫೦ | ೨.೫೫ | ೨.೪೨ | ೨.೨೫ | ೨.೧೯ | ೩.೩೭ |
| ಕೇಂದ್ರದಿಂದ ಅನುದಾನಗಳು | ೧.೭೩ | ೨.೨೯ | ೧.೮೦ | ೧.೮೮ | ೧.೪೯ | ೧.೪೮ | ೨.೯೨ | ೧.೩೫ |
| ತೆರಿಗೆಯೇತರ ಜಮೆ | ೧.೦೩ | ೦.೯೭ | ೦.೮೮ | ೦.೯೪ | ೦.೭೬ | ೦.೬೬ | ೦.೬೪ | ೦.೭೧ |

**ಮೂಲ: ೧. ಆರ್ಥಿಕ ಸಮೀಕ್ಷೆ ೨೦೧೪-೧೫, ಯೋಜನಾ ಇಲಾಖೆ, ಕರ್ನಾಟಕ ಸರ್ಕಾರ**
**೨. ಮಧ್ಯಮಾವಧಿ ವಿತ್ತೀಯ ಯೋಜನೆ ೨೦೧೫-೧೯, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ**

## ಸಾಲಗಳು

ಸರ್ಕಾರದ ಸಂಚಿತ ಸಾಲಗಳು ೨೦೦೯-೧೦ರಲ್ಲಿ ರೂ.೮೬೭೩೧ ಕೋಟಿಗಳಿದ್ದದ್ದು ೨೦೧೫-೧೬ರಲ್ಲಿ ರೂ.೧೮೦೮೧೫ ಕೋಟಿಗಳಿಗೆ ಹೆಚ್ಚಾಗಿದೆ.ಇದು ಶೇ.೧೩.೦೩ರಷ್ಟು ಸಂಯುಕ್ತ ವಾರ್ಷಿಕ ಬೆಳವಣಿಗೆಯ ದರವನ್ನು ಹೊಂದಿದೆ.ಆದರೂ ೧೩ನೇ ಹಣಕಾಸು ಆಯೋಗವು ನಿಗದಿಪಡಿಸಿರುವ ಶೇ.೨೫ರ ಪರಿಮಿತಿಯಲ್ಲಿಯೇ ರಾಜ್ಯದ ಸಂಚಿತ ಸಾಲಗಳಿವೆ.

ವಿಶಾಲ ಅರ್ಥ ವ್ಯವಸ್ಥೆಯಲ್ಲಿನ ಚೇತರಿಕೆಯಿಂದ ರಾಜ್ಯವು ವರಮಾನವನ್ನು ವಿಸ್ತರಿಸಿಕೊಳ್ಳುವ ಸ್ಥಿತಿಯಲ್ಲಿದೆ. ೨೦೧೫-೧೬ನೇ ಸಾಲಿನಲ್ಲಿ (ಆ.ಅಂ.) ರೂ.೧೧೬೩೬೦.೩೨ ಕೋಟಿ ರಾಜಸ್ವ ಜಮೆ (೮೩.೭೯%) ಮತ್ತು ರೂ.೨೨೫೦೯.೮೮ ಕೋಟಿಗಳ ಬಂಡವಾಳ ಜಮೆ (೧೬.೨೧%)ಗಳು ಸೇರಿ ರೂ.೧೩೮೮೭೦.೨೦ ಕೋಟಿಗಳ ಜಮೆಯನ್ನು ನಿರೀಕ್ಷಿಸಲಾಗಿದೆ. ೨೦೧೪-೧೫ (ಪ. ಅಂ.)ಕ್ಕೆ ಹೋಲಿಸಿದಲ್ಲಿ ಒಟ್ಟು ಜಮೆಯಲ್ಲಾಗುವ ನಿರೀಕ್ಷಿತ ಹೆಚ್ಚಳ ಶೇ.೬.೩೩ರಷ್ಟು ಇರುತ್ತದೆ. ಅದರಲ್ಲಿ ರಾಜಸ್ವ ಜಮೆಯು ಶೇ.೬.೮೪ರಷ್ಟು ಮತ್ತು ಬಂಡವಾಳ ಜಮೆಯು ಶೇ.೩.೭೮ರಷ್ಟು ಎಂದು ನಿರೀಕ್ಷಿಸಲಾಗಿದೆ. ೨೦೧೫-೧೬ನೇ ಸಾಲಿನ ರಾಜ್ಯದ ಆಯವ್ಯಯವು ರೂ.೧೧೫೪೪೯.೬೮ ಕೋಟಿ ರಾಜಸ್ವ ವೆಚ್ಚ (೮೨.೯೦%) ಮತ್ತು ರೂ.೨೩೮೧೧.೨೯ (೧೭.೧೦%) ಬಂಡವಾಳ ವೆಚ್ಚಗಳೊಂದಿಗೆ ರೂ.೧೩೯೨೬೦.೯೭ ಕೋಟಿಗಳ ಒಟ್ಟಾರೆ ವೆಚ್ಚವನ್ನು ಅಂದಾಜಿಸಲಾಗಿದೆ. ೨೦೧೫-೧೬ರ ವೆಚ್ಚವು ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇ.೬.೭೭ ಪ್ರತಿಶತ ಹೆಚ್ಚಾಗಬಹುದೆಂದು ನಿರೀಕ್ಷಿಸಲಾಗಿದೆ. ಬಂಡವಾಳ ವೆಚ್ಚವು ರಾಜಸ್ವ ವೆಚ್ಚದ ಬೆಳವಣಿಗೆಯ ದರಕ್ಕಿಂತ ವೇಗವಾಗಿ ಹೆಚ್ಚುತ್ತಿದ್ದಾಗ್ಯೂ, ರಾಜ್ಯವು ತನ್ನ ಸಮಗ್ರ ರಾಜಸ್ವ ಹೆಚ್ಚುವರಿಯನ್ನು ಸಮರ್ಪಕವಾಗಿ ನಿರ್ವಹಿಸಿಕೊಂಡು ಬಂದಿದೆ. ರಾಜ್ಯದ ಸ್ವಂತ ತೆರಿಗೆಗಳ ತಲಾವಾರು ಆದಾಯವು ೨೦೧೪-೧೫ (ಪ.ಅಂ.)ರಲ್ಲಿ ರೂ.೧೩೧೫೩ ಗಳಿದ್ದದ್ದು, ೨೦೧೫-೧೬ (ಆ.ಅಂ.)ರಲ್ಲಿ ರೂ.೧೫೬೨೯ ಗಳಿಗೇರಿದೆ. ೨೦೧೪-೧೫ನೇ ಸಾಲಿಗೆ ಹೋಲಿಕೆ ಮಾಡಿದಲ್ಲಿ ೨೦೧೫-೧೬ರಲ್ಲಿ ಮಾರಾಟ ತೆರಿಗೆ/ ವ್ಯಾಟ್ ತೆರಿಗೆಯಿಂದ ಬರುವ ಆದಾಯ ರೂ.೩೬೯೨೪.೮೦ ಕೋಟಿಗಳಿಂದ ರೂ.೪೧೩೨೯.೦೦ ಕೋಟಿಗಳಿಗೆ, ಅಂದರೆ ಶೇ.೧೧.೯೩ರಷ್ಟು ಬೆಳವಣಿಗೆಯ ದರದೊಂದಿಗೆ ಹೆಚ್ಚುವುದೆಂದು ನಿರೀಕ್ಷಿಸಲಾಗಿದೆ. ೨೦೧೪-೧೫ನೇ ಸಾಲಿನ ಆಯವ್ಯಯ ಪ್ರಮುಖ ಸೂಚಕಗಳನ್ನು ಕೋಷ್ಟಕ ೮.೨೬ರಲ್ಲಿ ತೋರಿಸಲಾಗಿದೆ.

**ಕೋಷ್ಟಕ ೮.೨೬: ಕರ್ನಾಟಕ ಆಯವ್ಯಯ ಸಮಗ್ರ ಸ್ಥಿತಿ (ರೂ.ಕೋಟಿಗಳಲ್ಲಿ)**

| ಜಮೆಗಳು / ಹಂಚಿಕೆಗಳು | ೨೦೧೩-೧೪ (ಲೆಕ್ಕ) | ೨೦೧೪-೧೫ (ಪ.ಅಂ.) | ೨೦೧೫-೧೬ (ಆ.ಅಂ.) | ಶೇಕಡವಾರು ವ್ಯತ್ಯಾಸ ೨೦೧೫-೧೬ರಲ್ಲಿ ೨೦೧೪-೧೫ಕ್ಕಿಂತ |
|---|---|---|---|---|
| **ಎ. ಜಮೆಗಳು** | | | | |
| ೧. ರಾಜಸ್ವ ಜಮೆಗಳು | ೮೯೫೪೨.೫೩ | ೧೦೮೯೦೭.೭೪ | ೧೧೬೩೬೦.೩೨ | ೬.೮೪ |
| ೨. ಬಂಡವಾಳ ಜಮೆಗಳು | ೧೯೫೩೩.೪೨ | ೨೧೬೮೯.೭೧ | ೨೨೫೦೯.೮೮ | ೩.೭೮ |
| **ಒಟ್ಟು ಎ: (೧ + ೨)** | **೧೦೯೦೭೫.೯೫** | **೧೩೦೫೯೭.೪೫** | **೧೩೮೮೭೦.೨೦** | **೬.೩೩** |
| **ಬಿ. ಹಂಚಿಕೆಗಳು** | | | | |
| ೧. ರಾಜಸ್ವ ವೆಚ್ಚ | ೮೯೧೮೯.೫೭ | ೧೦೮೭೪೭.೬೩ | ೧೧೫೪೪೯.೬೮ | ೬.೧೬ |
| ೨. ಬಂಡವಾಳ ವೆಚ್ಚ | ೧೯೮೬೮.೧೨ | ೨೧೬೭೯.೫೧ | ೨೩೮೧೧.೨೯ | ೯.೮೩ |
| **ಒಟ್ಟು: ಬಿ: (೧ + ೨)** | **೧೦೯೦೫೭.೬೯** | **೧೩೦೪೨೭.೧೪** | **೧೩೯೨೬೦.೯೭** | **೬.೭೭** |

ಪ.ಅಂ. : ಪರಿಷ್ಕೃತ ಅಂದಾಜು    ಆ.ಅಂ. : ಆಯವ್ಯಯ ಅಂದಾಜು

ಟಿಪ್ಪಣಿ: ಭಾರತೀಯ ರಿಸರ್ವ್ ಬ್ಯಾಂಕ್‌ನ ಸಾಧನ ಮತ್ತು ಮಾರ್ಗೋಪಾಯ ಮುಂಗಡವನ್ನು ಬಂಡವಾಳ ಜಮೆ ಮತ್ತು ವೆಚ್ಚದಲ್ಲಿ ಸೇರಿಸಿರುವುದಿಲ್ಲ. ಬಂಡವಾಳ ಜಮೆಗಳು ಕಾಂಟಿಂಜೆನ್ಸಿ ಫಂಡ್ (ನಿವ್ವಳ) ಹಾಗೂ ಸಾರ್ವಜನಿಕ ಲೆಕ್ಕ (ನಿವ್ವಳ) ಗಳನ್ನು ಒಳಗೊಂಡಿರುತ್ತದೆ.

ವೆಚ್ಚಕ್ಕೆ ಸಂಬಂಧಿಸಿದಂತೆ ಗಮನಿಸಬೇಕಾದ ಸ್ವಾರಸ್ಯದ ವಿಷಯವೇನೆಂದರೆ, ಅಭಿವೃದ್ಧಿ ವೆಚ್ಚ ಹಾಗೂ ಕೆಲವು ಅಭಿವೃದ್ಧಿ ವೆಚ್ಚದಲ್ಲಿ ಮುಖ್ಯ ವಲಯಗಳಾದ ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ ವಲಯಗಳ ತಲಾವಾರು ಪ್ರಮಾಣದಲ್ಲಿ ಹೆಚ್ಚಳವಾಗಿರುತ್ತದೆ. ಈ ಕ್ಷೇತ್ರಗಳಲ್ಲಿ ಕರ್ನಾಟಕದ ಪ್ರತಿಯೊಬ್ಬ ನಾಗರಿಕನಿಗೆ ಹಣಕಾಸು ಹಂಚಿಕೆ ಹೆಚ್ಚಾಗಿ ಇರುವುದು ಕಂಡುಬರುತ್ತದೆ. ೨೦೧೫-೧೬ರ ಒಟ್ಟು ವೆಚ್ಚದಲ್ಲಿ ಅಭಿವೃದ್ಧಿ ವೆಚ್ಚ ರೂ.೯೮,೨೦೦.೫೬ ಕೋಟಿಗಳು ಅದು ೨೦೧೪-೧೫ರಲ್ಲಿ ರೂ.೯೨,೭೬೧.೮೭ ಕೋಟಿಯಾಗಿತ್ತು. ಅಂದರೆ ಶೇ.೫.೮೬ರಷ್ಟು ಏರಿಕೆಯಾಗಿದೆ.

## ಜಮೆಗಳು

೨೦೧೫-೧೬ನೇ ವರ್ಷವನ್ನು ೨೦೧೪-೧೫ನೇ ವರ್ಷಕ್ಕೆ ಹೋಲಿಸಿದರೆ ಒಟ್ಟು ಜಮೆಗಳ ಹೆಚ್ಚಳ ಸುಮಾರು ರೂ.೮೨೭೨.೭೪ ಕೋಟಿಗಳೆಂದು ಅಂದಾಜಿಸಲಾಗಿದೆ. ಅಂದರೆ ಶೇ.೬.೩೩ರಷ್ಟು ಹೆಚ್ಚಳವಾಗ ಬಹುದೆಂದು ನಿರೀಕ್ಷಿಸಲಾಗಿದೆ. ರಾಜಸ್ವ ಜಮೆ ರೂ.೧೧೬೩೬೦.೩೨ ಕೋಟಿ ಮತ್ತು ಬಂಡವಾಳ ಜಮೆ ರೂ.೨೨೫೦೯.೮೮ ಕೋಟಿಗಳಿಗೆ ಹೆಚ್ಚಾಗುವ ನಿರೀಕ್ಷೆಯಿದೆ. ರಾಜಸ್ವ ಜಮೆಯು ಒಟ್ಟು ಜಮೆಯ ಶೇ.೮೩.೭೯ರಷ್ಟಿದೆ.

## ರಾಜಸ್ವ ಜಮೆಗಳು

ರಾಜಸ್ವ ಜಮೆಗಳು ನಾಲ್ಕು ಪ್ರಮುಖ ಅಂಶಗಳನ್ನು ಹೊಂದಿರುತ್ತದೆ. ಅವುಗಳೆಂದರೆ, ಸ್ವಂತ ತೆರಿಗೆ ರಾಜಸ್ವಗಳು, ತೆರಿಗೆಯೇತರ ರಾಜಸ್ವಗಳು, ಕೇಂದ್ರ ಸರ್ಕಾರದಿಂದ ಹಸ್ತಾಂತರವಾದ ಸಂಪನ್ಮೂಲಗಳು ಮತ್ತು ಸಹಾಯಾನುದಾನ ಹಾಗೂ ವಂತಿಕೆಗಳು. ೨೦೧೫-೧೬ರಲ್ಲಿ ರಾಜ್ಯದ ಸ್ವಂತ ತೆರಿಗೆ ರಾಜಸ್ವವು ಶೇ.೧೧.೫೧ರಷ್ಟು ಮತ್ತು ತೆರಿಗೆಯೇತರ ರಾಜಸ್ವವು ಶೇ.೧೬.೫೯ರಷ್ಟು ಏರಿಕೆಯಾಗಬಹುದೆಂದು ನಿರೀಕ್ಷಿಸಲಾಗಿದೆ. ೨೦೧೫-೧೬ (ಆ.ಅಂ.)ನೇ ಸಾಲಿನಲ್ಲಿ ಒಟ್ಟು ರಾಜಸ್ವ ಜಮೆಯಲ್ಲಿ ತೆರಿಗೆ ಆದಾಯವು ಶೇ.೮೭.೦ರಷ್ಟಿದೆ.

### ಅ) ತೆರಿಗೆ ರಾಜಸ್ವ

ಕರ್ನಾಟಕದ ತೆರಿಗೆಯ ರಾಜ್ಯಾದಾಯದ ಅನುಪಾತವು (ತೆರಿಗೆ ಪ್ರಯತ್ನ) ಉತ್ತಮವಾಗಿದ್ದು ಅದು ಇತರ ರಾಜ್ಯಗಳ ಹೋಲಿಕೆಯೊಂದಿಗೆ ಚೆನ್ನಾಗಿದೆ. ರಾಜ್ಯದ ಸ್ವಂತ ತೆರಿಗೆ ರಾಜಸ್ವವು ೨೦೦೯-೧೦ರಲ್ಲಿ ೩೦೫೭೯ ಕೋಟಿ ರೂಗಳಿಂದ ೨೦೧೫-೧೬ರಲ್ಲಿ ೭೬೪೪೫ ಕೋಟಿ ರೂಗಳಿಗೆ ಏರಿಕೆಯಾಗಿದೆ. ಇದರ ಸಂಯುಕ್ತ ವಾರ್ಷಿಕ ಬೆಳವಣಿಗೆಯ ದರವು ಶೇ.೧೬.೫೦ರಷ್ಟಿದೆ.೨೦೦೯-೧೦ರಲ್ಲಿ ಆರ್ಥಿಕ ಹಿಂಜರಿಕೆಯ ಪ್ರತಿಕೂಲ ಪರಿಣಾಮದಿಂದಾಗಿ ತೆರಿಗೆಯ ಪ್ರಯತ್ನ ಇಳಿಮುಖವಾಯಿತು. ತೆರಿಗೆ ಆಡಳಿತಾತ್ಮಕ ಸುಧಾರಣೆ, ತೆರಿಗೆ ದರಗಳ ಹೆಚ್ಚಳ ಹಾಗೂ ಹಣದುಬ್ಬರದಲ್ಲಿನ ಹೆಚ್ಚಳದಿಂದಾಗಿ ೨೦೧೫-೧೬ನೇ ಸಾಲಿನಲ್ಲಿ ತೆರಿಗೆ ಪ್ರಯತ್ನ ಶೇ.೧೦.೩೮ಕ್ಕೆ ತಲುಪಿ ಸುಧಾರಣೆ ಕಂಡಿತು.

ರಾಜಸ್ವ ಜಮೆಗಳ ಸಂಯೋಜನೆಯಲ್ಲಿ ಈ ಮೊದಲೇ ವಿವರಿಸಿದಂತೆ ರಾಜ್ಯದ ಸ್ವಂತ ತೆರಿಗೆಯು ಉತ್ತಮ ಸಾಧನೆಯನ್ನು

ಮಾಡಿದೆ. ತೆರಿಗೆ ರಾಜಸ್ವದ ಆದಾಯವು ಪ್ರಮುಖವಾಗಿ ಆದಾಯ ಮತ್ತು ವೆಚ್ಚದ ಮೇಲಿನ ಪ್ರವೇಶ ತೆರಿಗೆ, ಆಸ್ತಿ ಮೇಲಿನ ತೆರಿಗೆ, ಬಂಡವಾಳ ವಹಿವಾಟಿನ ತೆರಿಗೆ, ಸರಕು ಮತ್ತು ಸೇವೆಗಳ ಮಾರಾಟ ತೆರಿಗೆ/ವ್ಯಾಟ್, ರಾಜ್ಯ ಅಬಕಾರಿ ತೆರಿಗೆ, ವಾಹನಗಳ ಮೇಲಿನ ತೆರಿಗೆ ಮತ್ತು ಕೇಂದ್ರ ತೆರಿಗೆಗಳಲ್ಲಿನ ರಾಜ್ಯದ ಪಾಲು ಒಳಗೊಂಡಿರುತ್ತದೆ. ಕಳೆದ ಸಾಲಿನಲ್ಲಿನ [೨೦೧೪-೧೫ (ಪ.ಅಂ.)] ತೆರಿಗೆ ರಾಜಸ್ವವು ರೂ.೮೩೬೪.೧೦ ಕೋಟಿಗಳಾಗಿದ್ದು, ೨೦೧೫-೧೬ (ಆ.ಅಂ.) ರ ಆಯವ್ಯಯದಲ್ಲಿ ತೆರಿಗೆ ರಾಜಸ್ವವು ರೂ.೧೦೧೨೩೫.೧೦ ಕೋಟಿಗಳಷ್ಟಾಗುವುದೆಂದು ನಿರೀಕ್ಷೆಯಿದೆ. ರಾಜ್ಯದ ಸ್ವಂತ ತೆರಿಗೆ ಆದಾಯದಲ್ಲಿ ಮಾರಾಟ ತೆರಿಗೆ/ವ್ಯಾಟ್ ಮುಖ್ಯ ಮೂಲವಾಗಿದ್ದು ೨೦೧೫-೧೬ರಲ್ಲಿ ಶೇ.೧೧.೯೩ರ ಬೆಳವಣಿಗೆ ದರದೊಂದಿಗೆ ಇದರ ಪಾಲು ಶೇ.೫೪.೦೬ರಷ್ಟಾಗಿರುತ್ತದೆ ಮತ್ತು ರಾಜ್ಯ ಅಬಕಾರಿ ತೆರಿಗೆಯಿಂದ ಶೇ.೧೦.೫೪ರಷ್ಟು ಆದಾಯ ಹೆಚ್ಚಾಗಬಹುದೆಂದು ನಿರೀಕ್ಷಿಸಲಾಗಿದೆ. ವರಮಾನ ಮತ್ತು ವೆಚ್ಚಗಳ ಮೇಲಿನ ತೆರಿಗೆಗಳು ಶೇ.೧೪.೦೩ಕ್ಕೆ ಏರಿಕೆಯಾಗಲಿದೆ. ಕೇಂದ್ರ ತೆರಿಗೆಗಳಲ್ಲಿನ ರಾಜ್ಯ ಪಾಲು ರೂ.೯೩೭೯.೭೮ ಕೋಟಿಗಳಷ್ಟು, ಅಂದರೆ ಶೇ.೬೦.೮೭ರಷ್ಟು ಹೆಚ್ಚಾಗಬಹುದೆಂದು ನಿರೀಕ್ಷಿಸಲಾಗಿದೆ. ಈ ಹಿಂದೆ ಗಮನಿಸಿದಂತೆ ತೀವ್ರವಾದ ಏರಿಕೆಗೆ ಕಾರಣ ತೆರಿಗೆಯಲ್ಲಿನ ರಾಜ್ಯದ ಪಾಲಿನ ಹೆಚ್ಚಿನ ಪ್ರಮಾಣವಾಗಿರುತ್ತದೆ.

### (ಆ) ತೆರಿಗೆಯೇತರ ರಾಜಸ್ವ

ತೆರಿಗೆಯೇತರ ರಾಜಸ್ವವು, ಸಾಮಾಜಿಕ, ಆರ್ಥಿಕ ಮತ್ತು ಸಾಮಾನ್ಯ ಸೇವೆಗಳ ಬಡ್ಡಿ ಹಾಗೂ ಡಿವಿಡೆಂಡ್‌ಗಳ ಜಮೆಯನ್ನು ಒಳಗೊಂಡಿರುತ್ತದೆ. ಈ ಮೂರು ಸೇವೆಗಳ ರಾಜಸ್ವವು ೨೦೧೪-೧೫ (ಪ.ಅಂ.)ರಲ್ಲಿ ರೂ.೪೪೬೫.೩೩ ಕೋಟಿಗಳಾಗಿತ್ತು, ೨೦೧೫-೧೬ (ಆ.ಅಂ.)ರಲ್ಲಿ ಇವುಗಳ ರಾಜಸ್ವವು ರೂ.೫೨೦೬.೧೭ ಕೋಟಿ ಅಂದರೆ ಶೇ.೧೬.೫೯ರಷ್ಟು ಏರಿಕೆಯಾಗಿದೆಯೆಂದು ಅಂದಾಜುಮಾಡಲಾಗಿದೆ.

ರಾಜ್ಯವು ಎದುರಿಸುತ್ತಿರುವ ಪ್ರಮುಖ ಸವಾಲು ಇದಾಗಿದ್ದು, ನಿರ್ದಿಷ್ಟ ಮಟ್ಟದಲ್ಲಿ ಬಳಕೆದಾರರ ಶುಲ್ಕವನ್ನು ಸಂಗ್ರಹಿಸುವಂತಹ ಅವಶ್ಯಕ ಕ್ರಮಗಳನ್ನು ತೆಗೆದುಕೊಳ್ಳಬೇಕೆನ್ನುವುದನ್ನು ಇದು ಸೂಚಿಸುತ್ತದೆ. ಒಟ್ಟು ಜಮೆಗೆ ತೆರಿಗೆಯೇತರ ಆದಾಯದ ಪ್ರಮಾಣ ವರ್ಷದಿಂದ ವರ್ಷಕ್ಕೆ ಸತತವಾಗಿ ಇಳಿಕೆಯಾಗಿರುವುದು ಕಂಡುಬರುತ್ತಿದೆ. ರಾಜ್ಯದ ತೆರಿಗೆಯೇತರ ವರಮಾನವನ್ನು ರಾಜ್ಯಾದಾಯದ ಪ್ರಮಾಣಕ್ಕೆ ಹೋಲಿಸಿದಾಗ ದೇಶದಲ್ಲಿಯೇ ಇದು ಅತ್ಯಂತ ಕಡಿಮೆಯಾಗಿರುವುದು ಕಂಡುಬರುತ್ತಿದೆ. ಇದು ಕಳೆದ ಐದು ಆರು ವರ್ಷಗಳಿಂದ ಶೇ. ಒಂದರ ಸುತ್ತ ಸುಳಿದಾಡುತ್ತಿದೆ.

ಇದಕ್ಕೆ ವೆಚ್ಚಗಳ ಸಂಗ್ರಹಣೆ ಕಡಿಮೆಯಾಗಿರುವುದೇ ಕಾರಣವಾಗಿದೆ. ಅನೇಕ ಇಲಾಖೆಗಳಲ್ಲಿ ಬಳಕೆದಾರರ ಶುಲ್ಕ, ದಂಡ ಹಾಗೂ ತೆರಿಗೆಯೇತರ ಜಮೆಗಳ ಪರಿಷ್ಕರಣೆಯನ್ನು ಅನೇಕ ವರ್ಷಗಳಿಂದ ಕೈಗೆತ್ತಿಕೊಂಡಿರುವುದಿಲ್ಲ. ಪರಿಷ್ಕೃತ ಶುಲ್ಕಗಳ ಹಾಗೂ ಉತ್ತಮ ಸಂಗ್ರಹದ ತಾಂತ್ರಿಕತೆಗಳನ್ನು ಗಣನೆಗೆ ತೆಗೆದುಕೊಂಡರೂ ಸಹ ತೆರಿಗೆಯೇತರ ಆದಾಯವು ಅಷ್ಟೊಂದು ಹೆಚ್ಚಳವಾಗಿರುವುದಿಲ್ಲ. ಇದಕ್ಕೆ ಈಗಿರುವ ಮೂಲಕ್ಕೆ ಕಡಿಮೆ ನೆಲೆ ಇರುವುದು ಕಾರಣವಾಗಿರುತ್ತದೆ.

ವೆಚ್ಚ ಸುಧಾರಣೆ ಆಯೋಗವು ವರಮಾನ ಹೆಚ್ಚಿಸಲು ಕೆಲವು ಸುಧಾರಣೆಗಳನ್ನು ತರಲು ಸಲಹೆಗಳನ್ನು ಮಾಡಿದೆ. ಕೇಂದ್ರದ ಅನುದಾನವು ೨೦೧೪-೧೫ (ಪ.ಅಂ.)ರಲ್ಲಿರೂ.೨೦,೪೭೮.೩೨ ಕೋಟಿಗಳಿದ್ದು, ಅದು ೨೦೧೫-೧೬ (ಆ.ಅಂ.)ಕ್ಕೆ ರೂ.೯೯೧೮.೯೭ ಕೋಟಿಗಳಿಗೆ (ಶೇ.೫೧.೫೬) ಇಳಿಕೆಯಾಗುವುದೆಂದು ನಿರೀಕ್ಷಿಸಲಾಗಿದೆ. ಈ ಬಾರಿ ಮೊತ್ತದ ಇಳಿಕೆಗೆ ಕಾರಣ ಕೇಂದ್ರ ಪುರಸ್ಕೃತ / ಕೇಂದ್ರ ವಲಯ ಯೋಜನೆಗೆ ಕೇಂದ್ರ ಸಹಾಯಧನವನ್ನು ಕಡಿತಗೊಳಿಸಿರುವುದು. ಕೇಂದ್ರ ಸಹಾಯದಿಂದ ಬೇರ್ಪಡಿಸಲ್ಪಟ್ಟ ಕಾರ್ಯಕ್ರಮಗಳು ಹಾಗೂ ಪರಿಷ್ಕೃತ ಅನುದಾನ ಹಂಚಿಕೆ ನಮೂನೆಯಿಂದಾಗಿ ರಾಜ್ಯದ ಸದರಿ ಕಾರ್ಯಕ್ರಮಗಳಿಗೆ ಸಂಪನ್ಮೂಲಗಳನ್ನು ಹುಡುಕುವುದು ರಾಜ್ಯದ ಆರ್ಥಿಕ ವ್ಯವಸ್ಥೆಗೆ ದೊಡ್ಡ ಸವಾಲಾಗಿದೆ.

### ಬಂಡವಾಳ ಜಮೆಗಳು

ಬಂಡವಾಳ ಜಮೆಗಳು – ಭಾರತ ಸರ್ಕಾರದಿಂದ ಸಾಲಗಳು, ರಾಜ್ಯ ಆಂತರಿಕ ಸಾಲಗಳು-ಮಾರ್ಗೋಪಾಯಗಳು, ಮಾರುಕಟ್ಟೆ ಸಾಲ (ನಿವ್ವಳ), ಸಾರ್ವಜನಿಕ ಖಾತೆಗಳ ಸಾಲ, ಮುಂಗಡಗಳ ವಸೂಲಿ ಮತ್ತು ಆಕಸ್ಮಿಕ ನಿಧಿ ಮುಂತಾದುವುಗಳನ್ನೊಳಗೊಂಡಿರುತ್ತವೆ. ೨೦೧೫-೧೬ (ಆ.ಅಂ.)ನೇ ಸಾಲಿನಲ್ಲಿ ಬಂಡವಾಳ ಜಮೆಯು ರೂ.೨೨೫೦೯.೮೮ ಕೋಟಿಗಳಿದ್ದು, ಕಳೆದ ಸಾಲಿನಮೊತ್ತಕ್ಕೆ ಹೋಲಿಸಿದಾಗ ಶೇ.೩.೭೮ರಷ್ಟು ಹೆಚ್ಚಾಗಿರುತ್ತದೆ. ಕೇಂದ್ರ ಸರ್ಕಾರದಿಂದ ಪಡೆದ ಸಾಲ ರೂ.೧೬೨೪.೯೩ ಕೋಟಿಗಳಾಗಿದ್ದು, ಒಟ್ಟು ಬಂಡವಾಳ ಜಮೆಯ ಶೇ.೭.೬೬ರಷ್ಟು ಆಗಿರುತ್ತದೆ ಮತ್ತು ಕಳೆದ ಸಾಲಿನಲ್ಲಿ ಪಡೆದ ಸಾಲಕ್ಕೆ ಹೋಲಿಸಿದಾಗ ಶೇ.೨೮.೯೬ ರಷ್ಟು ಹೆಚ್ಚಾಗುವ ನಿರೀಕ್ಷೆಯಿದೆ. ಕಳೆದ ಸಾಲಿಗೆ ಹೋಲಿಸಿದಾಗ ಪ್ರಸಕ್ತ ಸಾಲಿನಲ್ಲಿ, ಅಂದರೆ ೨೦೧೫-೧೬ (ಆ.ಅಂ.) ರಲ್ಲಿ ಆಂತರಿಕ ಮಾರುಕಟ್ಟೆ ಸಾಲ (ನಿವ್ವಳ) ಎತ್ತುವಳಿಗಳಲ್ಲಿ ಶೇ.೨.೮೮ರಷ್ಟು ಇಳಿಕೆಯಾಗಿರುತ್ತದೆ. ಇನ್ನೊಂದೆಡೆ ಪ್ರಸಕ್ತ ಸಾಲಿನಲ್ಲಿ ಸಾಲ ಮತ್ತು ಮುಂಗಡಗಳ ವಸೂಲಿಯಲ್ಲಿ ಶೇ.೫೦.೮೯ರಷ್ಟು ಏರಿಕೆಯಾಗಿರುತ್ತದೆ.

### ವೆಚ್ಚಗಳು

ವೆಚ್ಚದ ಸೂಚಕಗಳು ಪ್ರತಿಬಿಂಬಿಸುವುದೇನೆಂದರೆ ಸಂಚಿತ ನಿಧಿಯಡಿಯಲ್ಲಿರುವ ರಾಜ್ಯದ ಒಟ್ಟು ವೆಚ್ಚವು ಅಂದರೆ ರಾಜ್ಯಾದಾಯ ಅನುಪಾತದಲ್ಲಿ ೨೦೦೯-೧೦ನೇ ಸಾಲಿನಲ್ಲಿ ಶೇ.೧೮.೭೫ ರಿಂದ ೨೦೧೫-೧೬ನೇ ಸಾಲಿಗೆ ಶೇ.೧೯.೩೬ರಷ್ಟು ಅಲ್ಪ ಏರಿಕೆಯಾಗಿದೆ. ೨೦೦೯-೧೦ರ ಸಾಮಾಜಿಕ ವಲಯದ ಪಾಲು ರಾಜ್ಯಾದಾಯ(GSDP)ದ ಶೇ.೫.೬೯ ರಿಂದ ೨೦೧೫-೧೬ನೇ ಸಾಲಿಗೆ ಶೇ.೬.೮೭ರಷ್ಟು ಏರಿಕೆಯಾಗಿದೆ ಹಾಗೂ ಇದೇ ಅವಧಿಯಲ್ಲಿ ಬಂಡವಾಳ ವೆಚ್ಚ (ರಾಜಸ್ವ ಖಾತೆಯ ಹೊರಗೆ) ರಾಜ್ಯಾದಾಯ(GSDP)ದ ಪ್ರತಿಶತ ಶೇ.೩.೬೧ ರಿಂದ ಶೇ.೨.೭೯ರಷ್ಟು ಇಳಿಕೆಯಾಗಿರುವುದು ಆತಂಕದ ವಿಷಯವಾಗಿರುತ್ತದೆ. ಅಭಿವೃದ್ಧಿ ವೆಚ್ಚದ ಪಾಲು ಶೇ.೧೩.೩೮ರಿಂದ ಶೇ.೧೩.೩೪ಕ್ಕೆ ಹಾಗೂ ಬಡ್ಡಿ ಮರುಪಾವತಿಯು ಸಹ ಶೇ.೧.೫೫ ರಿಂದ ಶೇ.೧.೪೫ಕ್ಕೆ ಇಳಿಕೆಯಾಗಿರುವುದು ಕಂಡು ಬರುತ್ತದೆ. ವಿವರಗಳಿಗೆ ಕೋಷ್ಟಕ ೮.೨೭ ಅನ್ನು ನೋಡಿ.

**ಕೋಷ್ಟಕ ೮.೨೭: ಕರ್ನಾಟಕದಲ್ಲಿ ವೆಚ್ಚದ ಸೂಚಕಗಳು (ರಾಜ್ಯಾದಾಯದ ಶೇಕಡವಾರು)**

| ವಿವರಗಳು | ೨೦೦೯-೧೦ (ಲೆಕ್ಕ) | ೨೦೧೦-೧೧ (ಲೆಕ್ಕ) | ೨೦೧೧-೧೨ (ಲೆಕ್ಕ) | ೨೦೧೨-೧೩ (ಲೆಕ್ಕ) | ೨೦೧೩-೧೪ (ಲೆಕ್ಕ) | ೨೦೧೪-೧೫ (ಪ.ಅಂ.) | ೨೦೧೫-೧೬ (ಆ.ಅಂ.) |
|---|---|---|---|---|---|---|---|
| ರಾಜಸ್ವ ಜಮೆಗಳು | ೧೪.೬೪ | ೧೫.೨೮ | ೧೬.೦೭ | ೧೪.೯೬ | ೧೪.೫೭ | ೧೫.೫೧ | ೧೫.೮೦ |
| ರಾಜಸ್ವ ವೆಚ್ಚಗಳು | ೧೪.೧೬ | ೧೪.೧೯ | ೧೪.೯೯ | ೧೪.೬೦ | ೧೪.೫೧ | ೧೫.೪೯ | ೧೫.೬೮ |
| ಅಭಿವೃದ್ಧಿ ವೆಚ್ಚಗಳು | ೧೩.೩೮ | ೧೩.೫೫ | ೧೪.೦೩ | ೧೩.೦೨ | ೧೨.೪೨ | ೧೩.೨೧ | ೧೩.೩೪ |
| ಸಾಮಾಜಿಕ ಸೇವೆಗಳು | ೫.೬೯ | ೫.೮೦ | ೬.೭೭ | ೬.೫೩ | ೫.೮೭ | ೬.೮೬ | ೬.೮೭ |
| ಆರ್ಥಿಕ ಸೇವೆಗಳು | ೬.೬೨ | ೬.೨೫ | ೭.೨೬ | ೬.೪೯ | ೬.೫೪ | ೬.೩೫ | ೬.೪೭ |
| ಸಾಮಾನ್ಯ ಸೇವೆಗಳು | ೩.೮೦ | ೩.೬೯ | ೩.೯೩ | ೩.೯೭ | ೪.೯೬ | ೫.೦೩ | ೫.೨೧ |
| ಬಡ್ಡಿ ಮರುಪಾವತಿಗಳು | ೧.೫೫ | ೧.೪೮ | ೧.೪೦ | ೧.೩೧ | ೧.೨೮ | ೧.೩೩ | ೧.೪೫ |
| ಸಂಬಳ ಬಿಲ್ | ೩.೦೭ | ೨.೯೧ | ೨.೬೬ | ೩.೦೦ | ೨.೯೦ | ೩.೧೪ | ೩.೦೭ |
| ವಿಶ್ರಾಂತಿ ವೇತನ | ೧.೦೨ | ೧.೦೭ | ೧.೨೫ | ೧.೩೮ | ೧.೪೯ | ೧.೩೮ | ೧.೪೬ |
| ಬಂಡವಾಳ ವೆಚ್ಚಗಳು | ೩.೬೧ | ೩.೫೧ | ೩.೫೭ | ೨.೯೬ | ೨.೭೬ | ೨.೬೯ | ೨.೭೯ |
| ಒಟ್ಟು ವೆಚ್ಚಗಳು (ರಾಜಸ್ವ ವೆಚ್ಚ + ಬಂಡವಾಳ ವೆಚ್ಚ) | ೧೭.೭೮ | ೧೭.೬೯ | ೧೮.೫೬ | ೧೭.೫೬ | ೧೭.೨೭ | ೧೮.೧೮ | ೧೮.೪೭ |
| ಸಂಚಿತ ಸಾಲ | ೨೪.೮೬ | ೨೪.೧೪ | ೨೩.೭೨ | ೨೨.೩೪ | ೨೨.೦೨ | ೨೨.೦೧ | ೨೩.೬೧ |
| ಒಟ್ಟು ಸಂಚಿತ ನಿಧಿ | ೧೮.೭೫ | ೧೮.೮೯ | ೧೯.೭೫ | ೧೮.೪೮ | ೧೮.೦೦ | ೧೮.೯೨ | ೧೯.೩೬ |

ಟಿಪ್ಪಣಿ: ಸಂಬಂಧಿಸಿದ ವರ್ಷಗಳ GSDP ಮಾಹಿತಿ ಮಧ್ಯಮಾವಧಿ ವಿತ್ತೀಯ ಯೋಜನೆ ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ, ಇದರಲ್ಲಿ ಒದಗಿಸಿರುವಂತೆ ಇರುತ್ತದೆ.

### ವೆಚ್ಚದ ಕಾರ್ಯಕಾರಿ ವರ್ಗೀಕರಣ

ಸರ್ಕಾರವು ಅರ್ಥಪೂರ್ಣವಾಗಿ ಮೂರು ವಿಧವಾದ ಸೇವೆಗಳನ್ನು ಒದಗಿಸುತ್ತದೆ. ಅವುಗಳೆಂದರೆ 'ಸಾಮಾನ್ಯ', 'ಸಾಮಾಜಿಕ ಹಾಗೂ ಸಮುದಾಯಿಕ' ಮತ್ತು 'ಆರ್ಥಿಕಸೇವೆಗಳು'. ರಾಜ್ಯವು ತಾನು ನಿರ್ವಹಿಸುತ್ತಿರುವ ವಿವಿಧ ಕಾರ್ಯಗಳಿಂದ ಸರ್ಕಾರದ ಆದ್ಯತೆಗಳು ತಿಳಿಯಲ್ಪಡುತ್ತವೆ. ೨೦೦೯-೧೦ ರಿಂದ ರಾಜ್ಯದ ವೆಚ್ಚದ ವಿವಿಧ ವರ್ಗಗಳ ಪ್ರವೃತ್ತಿ ಹಾಗೂ ಸಂಯೋಜನೆಯಲ್ಲಿ ಸಾಮಾಜಿಕ ವಲಯವಾದ ಶಿಕ್ಷಣ, ಆರೋಗ್ಯ, ವಸತಿ, ನೀರು ಸರಬರಾಜು ಮುಂತಾದ ವಲಯಗಳಿಗೆ ಒತ್ತು ನೀಡಿರುವುದನ್ನು ತಿಳಿಸುತ್ತದೆ. ಅಲ್ಲದೆ ರಾಜಸ್ವ ಒಟ್ಟು ಆಂತರಿಕ ಉತ್ಪನ್ನದ ಪಾಲಿನಲ್ಲಿ ೨೦೦೯-೧೦ರಲ್ಲಿ ಶೇ.೫.೬೯ ರಿಂದ ೨೦೧೫-೧೬ನೇ ಸಾಲಿಗೆ ಶೇ.೬.೮೭ರಷ್ಟು ಗಮನಾರ್ಹವಾಗಿ ಏರಿಕೆಯಾಗಿರುವುದು ಕಂಡು ಬರುತ್ತಿದೆ. ಅದೇ ಅವಧಿಯಲ್ಲಿ ಆರ್ಥಿಕ ಸೇವೆಗಳ ಮೇಲಿನ ಪಾಲು ಶೇ.೬.೬೨ ರಿಂದ ಶೇ.೬.೪೭ಕ್ಕೆ ಇಳಿಕೆಯಾಗಿದೆ ಹಾಗೂ ಸಾಮಾನ್ಯ ಸೇವೆಗಳು ಸಹ ಶೇ.೩.೮೦ ರಿಂದ ಶೇ.೫.೨೧ರಷ್ಟು ಏರಿಕೆಯಾಗಿರುವುದು ಕಂಡು ಬರುತ್ತಿದೆ. ಮಾನವ ಅಭಿವೃದ್ಧಿ, ಮೂಲ ಸೌಕರ್ಯ ಅಭಿವೃದ್ಧಿಗೆ, ಸಾಮಾಜಿಕ, ಆರ್ಥಿಕ ಮತ್ತು ಸಾಮಾನ್ಯ ಸೇವೆಗಳ ಕ್ಷೇತ್ರಗಳಲ್ಲಿ ಆಗಿರುವ ಹೆಚ್ಚು ವೆಚ್ಚವು ಸ್ವಾಗತಾರ್ಹ ಬೆಳವಣಿಗೆಯಾಗಿದೆ.

### ಅಭಿವೃದ್ಧಿ ವೆಚ್ಚ: ಅಂತರ್ ರಾಜ್ಯ ಹೋಲಿಕೆ

ರಾಜ್ಯದ ತಲಾ ಅಭಿವೃದ್ಧಿ ವೆಚ್ಚವು ಇತರೆ ರಾಜ್ಯಗಳ ಹಾಗೂ ದೇಶದ ಸರಾಸರಿ ತಲಾ ಅಭಿವೃದ್ಧಿ ವೆಚ್ಚಕ್ಕಿಂತ ಹೆಚ್ಚಾಗಿರುವುದು ಸ್ಪಷ್ಟವಾಗಿ ಕಾಣುತ್ತದೆ. ಅಭಿವೃದ್ಧಿ ವೆಚ್ಚದಲ್ಲಿ ಸರ್ಕಾರದ ಕಾರ್ಯಕ್ರಮಗಳಾದ ಸಾಮಾಜಿಕ ಹಾಗೂ ಆರ್ಥಿಕ ಸೇವೆಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳಿಗೆ ವೆಚ್ಚಮಾಡಿರುವುದು ಸೇರಿರುತ್ತದೆ.

ಈ ವೆಚ್ಚವು ರಾಜ್ಯದ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ನೀಡಿರುವ ಕೊಡುಗೆಯಾಗಿರುತ್ತದೆ. ಕರ್ನಾಟಕ ರಾಜ್ಯದಲ್ಲಿ ೨೦೧೨-೧೩, ೨೦೧೩-೧೪ (ಪ.ಅಂ.) ಮತ್ತು ೨೦೧೪-೧೫ (ಆ.ಅಂ.) ನೇ ಸಾಲುಗಳಲ್ಲಿ ತಲಾವಾರು ಅಭಿವೃದ್ಧಿ ವೆಚ್ಚವು ಕ್ರಮವಾಗಿ ರೂ.೧೦೯೭೯, ರೂ.೧೨೯೪೯ ಮತ್ತು ರೂ.೧೪೭೪೭ ಆಗಿರುತ್ತದೆ. ಇದೇ ಸಾಲುಗಳಲ್ಲಿನ ರಾಷ್ಟ್ರದ ಎಲ್ಲಾ ರಾಜ್ಯದ ಸರಾಸರಿ ಅಭಿವೃದ್ಧಿ ವೆಚ್ಚವು ಕ್ರಮವಾಗಿ ರೂ.೭೯೦೫, ರೂ.೯೭೧೬ ಮತ್ತು ರೂ.೧೧೭೬೧ ಆಗಿರುತ್ತದೆ. ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ರಾಜ್ಯವನ್ನು ಇತರೆ ಪ್ರಮುಖ ರಾಜ್ಯಗಳಿಗೆ ಹೋಲಿಸಿದಾಗ ಅತಿ ಹೆಚ್ಚು ತಲಾವಾರು ಅಭಿವೃದ್ಧಿ ವೆಚ್ಚ ಹೊಂದಿರುವ ರಾಜ್ಯವಾಗಿದೆ. ವಿವರಗಳನ್ನು ಕೋಷ್ಟಕ ೮.೨೮ರಲ್ಲಿ ಕೊಡಲಾಗಿದೆ.

**ಕೋಷ್ಟಕ ೮.೨೮: ಆಯ್ದ ರಾಜ್ಯಗಳ ತಲಾವಾರು ಅಭಿವೃದ್ಧಿ ವೆಚ್ಚ. (ರೂ.ಗಳಲ್ಲಿ)**

| ರಾಜ್ಯ | ೨೦೧೨-೧೩ (ಲೆಕ್ಕ) | ೨೦೧೪-೧೫ (ಪ.ಅಂ.) | ೨೦೧೪-೧೫ (ಆ.ಅಂ.) |
|---|---|---|---|
| ಆಂಧ್ರಪ್ರದೇಶ | ೧೦೩೨೫ | ೧೨೯೦೮ | ೮೬೨೫ |
| ಅಸ್ಸಾಂ | ೫೯೭೩ | ೧೧೧೮೨ | ೧೧೯೮೭ |
| ಬಿಹಾರ್ | ೪೪೦೫ | ೬೬೧೧ | ೭೪೬೪ |
| ಗುಜರಾತ್ | ೧೦೮೭೩ | ೧೧೮೯೯ | ೧೪೨೬೫ |
| **ಕರ್ನಾಟಕ** | **೧೦೯೭೯** | **೧೨೯೪೯** | **೧೪೭೪೭** |
| ಕೇರಳ | ೯೬೪೬ | ೧೧೦೨೭ | ೧೨೭೩೬ |
| ಮಧ್ಯಪ್ರದೇಶ | ೭೮೪೬ | ೮೮೭೫ | ೧೧೪೧೭ |
| ಮಹಾರಾಷ್ಟ್ರ | ೯೪೨೯ | ೧೦೯೫೩ | ೧೨೪೫೩ |
| ಒರಿಸ್ಸಾ | ೭೨೧೮ | ೯೫೬೦ | ೧೩೧೩೦ |
| ಪಂಜಾಬ್ | ೭೯೨೮ | ೯೯೨೨ | ೧೧೨೪೬ |
| ರಾಜಸ್ತಾನ | ೭೯೪೨ | ೧೦೦೧೧ | ೧೩೫೭೮ |
| ತಮಿಳು ನಾಡು | ೧೦೨೫೭ | ೧೨೦೬೧ | ೧೨೭೫೯ |
| ಒಟ್ಟು ಎಲ್ಲಾ ರಾಜ್ಯಗಳು | ೭೯೦೫ | ೯೭೧೬ | ೧೧೭೬೧ |

ಟಿಪ್ಪಣಿ: ೧) ತಲಾವಾರು ಅಭಿವೃದ್ಧಿ ವೆಚ್ಚವನ್ನು ೨೦೧೨. ೨೦೧೩ ಮತ್ತು ೨೦೧೪ರ ಪ್ರೊಜೆಕ್ಟೆಡ್ ಜನಸಂಖ್ಯೆ ಆಧಾರದ ಮೇಲೆ ಲೆಕ್ಕ ಹಾಕಲಾಗಿದೆ.

ಮೂಲ: ಆರ್‌ಬಿಐ ಪ್ರಕಟಣೆ – ಎ ಸ್ಟಡಿ ಆಫ್ ಬಡ್ಜೆಟ್ ೨೦೧೪-೧೫, ಸ್ಟೇಟ್‌ಮೆಂಟ್-೧೧.

## ಯೋಜನೆ ಮತ್ತು ಯೋಜನೇತರ ವೆಚ್ಚ

೨೦೧೫-೧೬ನೇ ಸಾಲಿಗೆ ರಾಜ್ಯದ ಒಟ್ಟಾರೆ ವೆಚ್ಚ ರೂ.೧೪೨೫೩೪.೪೩ ಕೋಟಿಗಳಷ್ಟಾಗುವುದೆಂದು ಅಂದಾಜು ಮಾಡಲಾಗಿದೆ. ಇದರಲ್ಲಿ ಒಟ್ಟು ಯೋಜನಾ ವೆಚ್ಚದ ಮೊಬಲಗು ರೂ.೭೩೩೯೨.೪೬ ಕೋಟಿಗಳಷ್ಟಿರುತ್ತದೆ (ಶೇ.೫೧.೧೩). ೨೦೧೪-೧೫ (ಪ.ಅಂ.)ರಲ್ಲಿ ರಾಜ್ಯದ ಯೋಜನಾ ಅನುದಾನವು ರೂ.೬೫೯೦೩.೫೦ ಕೋಟಿಗಳಷ್ಟಿದ್ದು, ಅದು ೨೦೧೫-೧೬ (ಆ.ಅಂ.) ರಲ್ಲಿ ರೂ.೭೨೫೯೬.೮೧ ಕೋಟಿಗಳಿಗೆ ಹೆಚ್ಚಾಗಿದೆ. ಒಟ್ಟಾರೆಯಾಗಿ ಹೆಚ್ಚಳ ರೂ.೬೬೯೩.೩೧ ಕೋಟಿಗಳಷ್ಟಾಗಿದೆ (ಶೇ.೯.೯೩). ಅಂದರೆ, ರಾಜ್ಯದ ಯೋಜನಾ ಅನುದಾನವು ಗಣನೀಯವಾಗಿ ಹೆಚ್ಚಳವಾಗಿರುವುದು ಕಂಡು ಬರುತ್ತದೆ. ಕೇಂದ್ರ ಪುರಸ್ಕೃತ ಹಾಗೂ ಕೇಂದ್ರ ವಲಯದ ಅನುದಾನವು ೨೦೧೪-೧೫ರಲ್ಲಿ ರೂ.೧೫೦೧.೩೬ ಕೋಟಿಗಳಾಗಿದ್ದು ಅದು ೨೦೧೫-೧೬ರಲ್ಲಿ ರೂ.೭೯೫.೬೫ ಕೋಟಿಗಳಿಗೆ ಇಳಿಕೆಯಾಗಿರುತ್ತದೆ. ಅಂದರೆ ಒಟ್ಟಾರೆ ರೂ.೭೦೫.೭೧ ಕೋಟಿಗಳಿಗೆ ಇಳಿಕೆಯಾಗಿರುವುದು ಕಂಡು ಬರುತ್ತಿದೆ. ಇದಕ್ಕೆ ಕಾರಣವೇನೆಂದರೆ ಎಲ್ಲಾ ಕೇಂದ್ರ ಪುರಸ್ಕೃತ ಕಾರ್ಯಕ್ರಮಗಳು ಹಾಗೂ ಕೇಂದ್ರ ವಲಯದ ಕಾರ್ಯಕ್ರಮಗಳು ರಾಜ್ಯ ಯೋಜನೆಗೆ ವರ್ಗಾವಣೆಗೊಂಡಿರುವುದು. ಯೋಜನೇತರ ವೆಚ್ಚವು ೨೦೧೪-೧೫ರಲ್ಲಿ ರೂ.೭೧೧೯೧.೫೩ ಕೋಟಿಗಳಷ್ಟಿದ್ದು, ಅದು ೨೦೧೫-೧೬ನೇ ಸಾಲಿನಲ್ಲಿ ರೂ.೭೫೮೪೦.೩೦ ಕೋಟಿಗಳಿಗೆ ಏರಿಕೆಯಾಗುವ ನಿರೀಕ್ಷೆಯಿದೆ. ಅಂದರೆ, ಯೋಜನೇತರ ವೆಚ್ಚ ಕಳೆದ ಸಾಲಿಗೆ ಹೋಲಿಸಿದರೆ ಶೇ.೬.೫೩ರಷ್ಟು ಏರಿಕೆಯಾಗಿದೆ. ಸರ್ಕಾರವು ಕಾಲ ಕಾಲಕ್ಕೆ ಕಠಿಣ ಕ್ರಮಗಳನ್ನು ತೆಗೆದುಕೊಂಡಲ್ಲಿ, ಅಂದರೆ ಹೊಸ ನೇಮಕಾತಿಯನ್ನು ತಡೆಯುವುದು, ವಾಹನಗಳನ್ನು ಖರೀದಿಸುವುದು, ವಿದೇಶ ಪ್ರಯಾಣ ಮತ್ತು ತರಬೇತಿ, ದೊಡ್ಡ ಸ್ಟಾರ್ ಹೋಟೆಲ್‌ಗಳಲ್ಲಿ ಸರ್ಕಾರದ ಕಾರ್ಯಕ್ರಮ ನಡೆಸುವುದನ್ನು ತಡೆಯುವುದು ಹಾಗೂ ವಾಣಿಜ್ಯ ದರ್ಜೆಯಲ್ಲಿ ವಿಮಾನಯಾನವನ್ನು ನಿಷೇಧಿಸುವುದರಿಂದ ಯೋಜನೇತರ ವೆಚ್ಚವನ್ನು ಕಡಿಮೆ ಮಾಡಬಹುದಾಗಿದೆ. ಕರ್ನಾಟಕದ ಯೋಜನೆ ಮತ್ತು ಯೋಜನೇತರ ವೆಚ್ಚಗಳನ್ನು ಕೋಷ್ಟಕ ೮.೨೯ರಲ್ಲಿ ನೀಡಲಾಗಿದೆ.

**ಕೋಷ್ಟಕ ೮.೨೯: ಕರ್ನಾಟಕದ ಯೋಜನೆ ಮತ್ತು ಯೋಜನೇತರ ವೆಚ್ಚಗಳು (ರೂ.ಕೋಟಿಗಳಲ್ಲಿ)**

| ವಿವರ | ೨೦೧೩-೧೪ (ಲೆಕ್ಕ) | ೨೦೧೪-೧೫ (ಪ.ಅಂ.) | ೨೦೧೪-೧೫ (ಆ.ಅಂ.) |
|---|---|---|---|
| ೧. ಯೋಜನೆ<br>ಅ. ರಾಜ್ಯದ ಯೋಜನೆ | ೪೮೦೩೮.೮೮<br>(೯೧.೯೦) | ೬೫೯೦೩.೫೦<br>(೯೭.೭೭) | ೫೨೭೯೬.೮೧<br>(೯೮.೯೨) |
| ಆ. ಕೇಂದ್ರ ಪುರಸ್ಕೃತ/ ಕೇಂದ್ರ ವಲಯ ಕಾರ್ಯಕ್ರಮಗಳು | ೪೨೩೪.೧೬<br>(೮.೧೦) | ೧೫೦೧.೩೬<br>(೨.೨೩) | ೫೭೫.೬೫<br>(೧.೦೮) |
| ಒಟ್ಟಾರೆ ಯೋಜನಾ ಮೊಬಲಗು | ೫೨೨೭೩.೦೪ | ೬೭೪೦೪.೮೬ | ೫೩೩೭೨.೪೬ |
| ೨. ಯೋಜನೇತರ | ೬೨೫೭೨.೨೨ | ೭೧೧೯೧.೫೩ | ೭೫೮೪೦.೩೦ |

ಪ.ಅಂ. : ಪರಿಷ್ಕೃತ ಅಂದಾಜು ಆ.ಅಂ. : ಆಯವ್ಯಯ ಅಂದಾಜು ಟಿಪ್ಪಣಿ: ಆವರಣದಲ್ಲಿರುವ ಸಂಖ್ಯೆಗಳು ಒಟ್ಟು ಮೊತ್ತದ ಶೇಕಡವಾರು ಪ್ರಮಾಣವನ್ನು ಸೂಚಿಸುತ್ತದೆ.

**ತೆರಿಗೆ ಸಂರಚನೆ:** ಕರ್ನಾಟಕದ ತೆರಿಗೆ ಸಂರಚನೆ ಸರಳವಾಗಿದ್ದು, ರಾಜ್ಯ ತೆರಿಗೆ ಆದಾಯ, ಕೇಂದ್ರ ತೆರಿಗೆಗಳ ಪಾಲು ಮತ್ತು ಒಟ್ಟು ತೆರಿಗೆಯೇತರ ಸ್ವೀಕೃತಿಗಳನ್ನು ಕೋಷ್ಟಕ ೮.೩೦ ರಲ್ಲಿ ಕೊಡಲಾಗಿದೆ.

**ಕೋಷ್ಟಕ ೮.೩೦: ಕರ್ನಾಟಕ ರಾಜ್ಯದ ರಾಜಸ್ವ ಮತ್ತು ಬಂಡವಾಳ ಜಮೆಗಳ ಪ್ರವೃತ್ತಿಗಳು**

**(ರೂ. ಕೋಟಿಗಳಲ್ಲಿ)**

| ವರ್ಷ | ರಾಜ್ಯದ ಸ್ವಂತ ತೆರಿಗೆ ಆದಾಯಗಳು | ಕೇಂದ್ರ ತೆರಿಗೆಯಲ್ಲಿ ರಾಜ್ಯದ ಪಾಲು | ಒಟ್ಟು ತೆರಿಗೆ ಜಮೆಗಳು | ಒಟ್ಟು ತೆರಿಗೆಯೇತರ ಜಮೆಗಳು | ಒಟ್ಟು ರಾಜಸ್ವ ಜಮೆಗಳು | ಒಟ್ಟು ಬಂಡವಾಳ ಜಮೆಗಳು | ಒಟ್ಟಾರೆ ಜಮೆಗಳು |
|---|---|---|---|---|---|---|---|
| ೨೦೦೦-೦೧ | ೯೦೪೨.೬೮ | ೨೫೭೩.೮೩ | ೧೧೬೧೬.೫೧ | ೧೬೫೯.೯೨ | ೧೪೮೨೨.೭೨ | ೪೮೦೭.೬ | ೧೯೬೩೦.೩೨ |
| ೨೦೦೫-೦೬ | ೧೮೬೩೧.೫೫ | ೪೨೧೩.೪೨ | ೨೨೮೪೪.೯೭ | ೩೮೭೪.೭೧ | ೩೦೩೫೨.೦೫ | ೪೪೦೧.೫೪ | ೩೪೭೫೩.೫೯ |
| ೨೦೦೬-೦೭ | ೨೩೩೦೧.೦೩ | ೫೩೭೪.೩೩ | ೨೮೬೭೫.೩೬ | ೪೦೯೮.೪೧ | ೩೭೫೮೬.೯೪ | ೬೪೪೪.೮೫ | ೪೪೦೩೧.೭೯ |
| ೨೦೦೭-೦೮ | ೨೫೯೮೬.೭೬ | ೬೭೭೯.೨೩ | ೩೨೭೬೫.೯೯ | ೩೩೫೨.೬೬ | ೪೧೧೫೧.೧೪ | ೬೩೨೫.೪೭ | ೪೭೪೭೬.೬೧ |
| ೨೦೦೮-೦೯ | ೨೭೬೪೫.೬೬ | ೭೧೫೩.೭೭ | ೩೪೭೯೯.೪೩ | ೩೧೫೮.೯೯ | ೪೩೭೯೦.೬೮ | ೯೪೬೬.೩೨ | ೫೩೨೫೭.೦೦ |
| ೨೦೦೯-೧೦ | ೩೦೫೭೮.೬೧ | ೭೩೫೯.೯೭ | ೩೭೯೩೮.೫೮ | ೩೩೩೩.೮೦ | ೪೯೧೫೫.೭೦ | ೧೩೦೧೨.೪೬ | ೬೨೧೬೮.೧೬ |
| ೨೦೧೦-೧೧ | ೩೮೪೭೩.೧೫ | ೯೫೦೬.೩೦ | ೪೭೯೭೯.೪೫ | ೩೩೫೮.೭೮ | ೫೮೨೦೬.೨೩ | ೧೨೨೧೫.೬೩ | ೭೦೪೨೧.೮೬ |
| ೨೦೧೧-೧೨ | ೪೬೪೭೬.೦೧ | ೧೧೦೭೪.೯೯ | ೫೭೫೫೧.೦೦ | ೪೦೮೬.೮೬ | ೬೯೮೦೬.೨೭ | ೧೫೩೧೭.೫೩ | ೮೫೧೨೩.೮೦ |
| ೨೦೧೨-೧೩ | ೫೩೭೫೩.೫೬ | ೧೨೬೪೭.೧೪ | ೬೬೪೦೦.೭೦ | ೩೯೬೬.೧೧ | ೭೮೧೭೬.೭೨ | ೧೬೮೭೮.೫೧ | ೯೫೦೫೫.೨೩ |
| ೨೦೧೩-೧೪ | ೬೨೬೦೩.೫೪ | ೧೪೮೦೮.೨೭ | ೭೭೪೧೧.೮೧ | ೪೦೫೧.೮೬ | ೮೯೫೪೨.೫೨ | ೧೬೫೩೩.೪೨ | ೧೦೬೦೭೫.೯೪ |
| ೨೦೧೪-೧೫ (ಪ.ಅಂ.) | ೬೯೫೫೪.೦೯ | ೧೫೪೧೦.೦೧ | ೮೪೯೬೪.೧೦ | ೪೪೬೫.೩೩ | ೧೦೮೯೦೨.೭೫ | ೨೧೬೮೯.೭೧ | ೧೩೦೫೯೨.೪೬ |
| ೨೦೧೫-೧೬ (D.CA.) | ೭೬೪೪೮.೪೬ | ೨೪೭೮೬.೭೨ | ೧೦೧೨೩೫.೧೮ | ೫೭೦೬.೧೨ | ೧೧೬೪೬೦.೪೨ | ೨೨೫೦೬.೮೮ | ೧೪೮೮೨೦.೨೦ |

ಪ.ಅಂ. ಪರಿಷ್ಕೃತ ಅಂದಾಜುಗಳು; B.D.CA : ಆಯವ್ಯಯ ಅಂದಾಜುಗಳು. ಆಧಾರ: ಆರ್ಥಿಕ ಸಮೀಕ್ಷೆ ೨೦೧೫-೧೬

## ರಫ್ತುಗಳು

ಕರ್ನಾಟಕದ ಕಡಲ ವ್ಯಾಪಾರದ ಅತ್ಯಂತ ದೀರ್ಘ ಅವಧಿಯ ಪರಂಪರೆಯನ್ನು ಹೊಂದಿದೆ. ಐತಿಹಾಸಿಕವಾಗಿ ಕರ್ನಾಟಕವು ಕಾಫಿ, ಮಸಾಲೆ ಪದಾರ್ಥಗಳು, ರೇಷ್ಮೆ, ಗೋಡಂಬಿ, ಕರಕುಶಲ ವಸ್ತುಗಳು ಮತ್ತು ಅಗರಬತ್ತಿಗಳಂತಹ ಸರಕುಗಳನ್ನು ರಫ್ತು ಮಾಡುತ್ತಿದೆ. ಕಳೆದ ಎರಡು ದಶಕಗಳಿಂದ ರಾಜ್ಯವು ಪ್ರಮುಖವಾಗಿ ಎಲೆಕ್ಟ್ರಾನಿಕ್ಸ್ ಮತು ಕಂಪ್ಯೂಟರ್ ಸಾಫ್ಟ್‌ವೇರ್, ಎಂಜಿನಿಯರಿಂಗ್ ವಸ್ತುಗಳು, ರೆಡಿಮೇಡ್ ಬಟ್ಟೆಗಳು, ಪೆಟ್ರೋಕೆಮಿಲ್ಸ್, ರತ್ನಗಳು ಹಾಗೂ ಆಭರಣಗಳು ಕೃಷಿ ಹಾಗೂ ಆಹಾರ ಸಂಸ್ಕರಣಾ ಉತ್ಪನ್ನಗಳು, ರಾಸಾಯನಿಕಗಳು, ಖನಿಜಗಳು ಮತ್ತು ಅದಿರು, ಕಡಲಿನ ಉತ್ಪನ್ನಗಳು, ಇತ್ಯಾದಿಗಳ ರಫ್ತನ್ನು ಮಾಡುತ್ತಿದೆ. ಕರ್ನಾಟಕವು ದೇಶದ ಜ್ಞಾನ ಮತ್ತು ತಂತ್ರಜ್ಞಾನ ರಾಜಧಾನಿಯಾಗಿ ತನ್ನನ್ನು ರೂಪಿಸಿಕೊಂಡು ಜಾಗತಿಕ ಮಾರುಕಟ್ಟೆಯಲ್ಲಿ ಒಂದು ಪ್ರಮುಖ ಸ್ಥಾನವನ್ನು ಗಳಿಸಿಕೊಂಡಿರುತ್ತದೆ. ರಾಜ್ಯವು ಹೊಸ ಆರ್ಥಿಕತೆಯಲ್ಲಿ ಕ್ಷಿಪ್ರವಾಗಿ ಮತ್ತು ಅದ್ಭುತವಾಗಿ ದಾಪುಗಾಲಿಟ್ಟಿರುತ್ತದೆ. ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗಳು ಕರ್ನಾಟಕದ ಸಾಧನೆಗಳನ್ನು ರಾಷ್ಟ್ರೀಯ ಮತ್ತು ಜಗತಿಕ ಮಟ್ಟದಲ್ಲಿ ಹೆಚ್ಚಿಸುವಂತೆ ಮಾಡಿರುತ್ತದೆ. ಕರ್ನಾಟಕವು ದೇಶದ ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ ರಫ್ತುಗಳ ಮೂರನೆಯ ಒಂದು ಭಾಗವನ್ನು ಆಕ್ರಮಿಸಿಕೊಂಡಿದೆ. ದಕ್ಷಿಣ ವಲಯದ ರೆಡಿಮೇಡ್ ಬಟ್ಟೆಗಳು, ರತ್ನಗಳು ಹಾಗೂ ಆಭರಣಗಳು, ಪೆಟ್ರೋಕೆಮಿಲ್ಸ್, ಎಂಜಿನಿಯರಿಂಗ್ ಸರಕುಗಳ ರಫ್ತುಗಳಲ್ಲಿ ಅದು ನೇತಾರನ ಸ್ಥಾನವನ್ನು ಸಹಾ ಗಳಿಸಿರುತ್ತದೆ.

## ಕರ್ನಾಟಕದ ರಫ್ತಿನ ಕಾರ್ಯ ನಿರ್ವಹಣೆ

ಕರ್ನಾಟಕವು ರಾಷ್ಟ್ರದ ಸಾಫ್ಟ್‌ವೇರ್/ಸೇವಾ ರಫ್ತುಗಳಲ್ಲಿ ಮೊದಲನೇ ಸ್ಥಾನದಲ್ಲಿದ್ದು, ಮಾರಾಟದ ಸರಕು ರಫ್ತುಗಳಲ್ಲಿ ನಾಲ್ಕನೇ ಸ್ಥಾನದಲ್ಲಿರುತ್ತದೆ. ಕರ್ನಾಟಕವು ಭಾರತದ ರಾಜ್ಯಗಳ ರಫ್ತುಗಳ ಮೇಲಿನ ನಿರಂತರವಾದ ಡಾಟಾ ಬೇಸ್‌ನ್ನು ಸ್ಥಾಪಿಸುವ ಪ್ರಕ್ರಿಯೆಗಳಲ್ಲಿದೆ. ಕರ್ನಾಟಕ ಸರ್ಕಾರದ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಆಶ್ರಯದಲ್ಲಿರುವ ವಿಶ್ವೇಶ್ವರಯ್ಯ ವ್ಯಾಪಾರ ಅಭಿವೃದ್ಧಿ ಕೇಂದ್ರವು, ಕಲ್ಕತ್ತಾದ ಡೈರೆಕ್ಟರ್ ಜನರಲ್ ಆಫ್ ಕಮರ್ಷಿಯಲ್ ಇಂಟಲಿಜನ್ಸ್ ಅಂಡ್ ಸ್ಟಾಟಿಸ್ಟಿಕ್, ಎಕ್ಸ್ಪೋರ್ಟ್ ಪ್ರೊಮೋಶನ್ ಕೌನ್ಸಿಲಗಳ, ಕಮಾಡಿಟೀಸ್ ಬೋರ್ಡ್ಸ್ ಹಾಗೂ ಇತರೆ ರಾಜ್ಯ ಸಂಸ್ಥೆಗಳ ೧೯ ಪದಾರ್ಥಗಳ ರಫ್ತುಗಳ ಮಾಹಿತಿಯ ಸಂಕಲನ ಮಾಡಿ ಪ್ರಕಟಿಸುವ ಅಧೀಕೃತ ಸಂಸ್ಥೆಯಾಗಿರುತ್ತದೆ. ವ್ಯಾಪಾರ ಮತ್ತು ಉದ್ಯಮ ಸಂಸ್ಥೆಗಳು ಮಾಹಿತಿಯನ್ನು ಕಲೆಹಾಕಲು ಸಹಾಯ ಮಾಡಿರುತ್ತದೆ.

ಇತರೇ ರಾಜ್ಯಗಳಿಗೆ ಹೋಲಿಸಿದಾಗ, ಕರ್ನಾಟಕವು ೮%ರಷ್ಟು ಅತ್ಯಂತ ಅಧಿಕ ರಫ್ತು ಬೆಳವಣಿಗೆ ದರವನ್ನು ೨೦೧೪-೧೫ರಲ್ಲಿ ತೋರಿಸಿರುತ್ತದೆ. ೨೦೧೨-೧೩, ೨೦೧೩-೧೪, ೨೦೧೪-೧೫ ಮತ್ತು ೨೦೧೫-೧೬ (ಏಪ್ರಿಲ್‌ನಿಂದ ಸೆಪ್ಟೆಂಬರ್‌ವರೆಗೆ) ಮೌಲ್ಯದ ದೃಷ್ಟಿಯಿಂದ ಕರ್ನಾಟಕದ ರಫ್ತುಗಳ ವಿವರವನ್ನು ಕೋಷ್ಟಕ ೮.೩೧ ರಲ್ಲಿ ತೋರಿಸಲಾಗಿರುತ್ತದೆ. ೨೦೧೪-೧೫ ರಲ್ಲಿ ಕರ್ನಾಟಕದ ರಫ್ತುಗಳು ಸುಮಾರು ರೂ ೩,೧೩,೫೭೦ ಕೋಟಿಯಾಗಿದ್ದು, ಇದು ಸದರಿ ವರ್ಷದಲ್ಲಿ ರಾಷ್ಟ್ರದ ಒಟ್ಟು ರಫ್ತುಗಳ ಶೇ.೧೩.೦೧ ರಷ್ಟಾಗಿರುತ್ತದೆ. ತಂತ್ರಾಂಶ/ಸೇವೆಯ ರಫ್ತುಗಳ ಪಾಲು ಸುಮಾರು ಶೇ.೬.೨೧ ರಷ್ಟಾಗಿದ್ದು, ತಂತ್ರಾಂಶ/ಸೇವೆಯ ರಫ್ತುಗಳ ಪಾಲು ಸುಮಾರು ೪೦% ಆಗಿರುತ್ತದೆ. ರಾಜ್ಯದ ಒಟ್ಟು ಆಂತರಿಕ ಉತ್ಪನ್ನಗಳಲ್ಲಿ ಕರ್ನಾಟಕದ ರಫ್ತುಗಳು ಶೇಕಡಾವಾರು ಸಾಕಷ್ಟು ದೊಡ್ಡ ಪಾಲನ್ನು ಹೊಂದಿದ್ದು, ಕಾಲಾವಧಿಯಲ್ಲಿ ಇದು ಗಣನೀಯವಾಗಿ ಏರಿಕೆಯಾಗಿರುತ್ತದೆ. ೧೯೯೩-೯೪ರಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನಗಳಲ್ಲಿ ರಫ್ತುಗಳ ಪಾಲು ಶೇ.೭.೩೬ರಷ್ಟಿದ್ದು, ಇದು ೨೦೧೪-೧೫ ರಲ್ಲಿ ಶೇ.೪೪.೬೮ಕ್ಕೆ ಏರಿಕೆಯಾಗಿರುತ್ತದೆ.

ರಾಜ್ಯದ ರಫ್ತುಗಳಲ್ಲಿ ಎಲೆಕ್ಟ್ರಾನಿಕ್ಸ್ ಮತ್ತು ಸಾಫ್ಟವೇರ್ ರಫ್ತುಗಳು ಬೃಹತ್ ಪಾಲನ್ನು ಹೊಂದಿರುತ್ತದೆ. ೨೦೧೪-೧೫ರಲ್ಲಿ ಇದರ ಪಾಲು ಶೇ.೬೧.೮ ರಷ್ಟು ಆಗಿರುತ್ತದೆ. ಕರ್ನಾಟಕದ ರಫ್ತುಗಳಲ್ಲಿ ಇತರೇ ಸರಕುಗಳು ೨೦೧೪-೧೫ರಲ್ಲಿ ಗಣನೀಯ ಪ್ರಮಾಣದ ಪಾಲನ್ನು ಹೊಂದಿದ್ದು, ಇವುಗಳು ಪೆಟ್ರೋಲಿಯಂ ಮತ್ತು ಪೆಟ್ರೋಲಿಯಂ ಉತ್ಪನ್ನಗಳ(ಶೇ. ೧೩.೦೩) ಹಾಗೂ ರತ್ನ ಮತ್ತು ಆಭರಣಗಳಾಗಿರುತ್ತವೆ. (ಶೇ. ೭) ಕರ್ನಾಟಕದ ರಫ್ತುಗಳಲ್ಲಿ ಈ ಮೂರು ಪದಾರ್ಥಗಳ ರಫ್ತು ಸುಮಾರು ಶೇ. ೮೨ ಆಗಿರುತ್ತದೆ. ರಾಜ್ಯದ ರಫ್ತುಗಳಲ್ಲಿ ಗಣನೀಯ ಪಾಲನ್ನು ಹೊಂದಿರುವ ಇತರೇ ಪದಾರ್ಥಗಳು ಎಂಜಿನೀಯರಿಂಗ್ ಸರಕುಗಳು (ಶೇ. ೬.೬೮) ಹಾಗೂ ಸಿದ್ಧ ಉಡುಪುಗಳು (ಶೇ. ೩.೧೩) ಆಗಿರುತ್ತವೆ.

ಕರ್ನಾಟಕವು ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ ಸಾಫ್ಟ್‌ವೇರ್ ರಫ್ತುಗಳಲ್ಲಿ ಒಂದು ವಿಶಿಷ್ಟವಾದ ಸ್ಥಾನವನ್ನು ಗಳಿಸಿರುತ್ತದೆ. ೨೦೧೪-೧೫ರಲ್ಲಿ ಭಾರತದ ಒಟ್ಟು ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ ಸಾಫ್ಟ್‌ವೇರ್ ರಫ್ತುಗಳಲ್ಲಿ ರಾಜ್ಯದ ಪಾಲು ಸುಮಾರು ೪೦%ರಷ್ಟು ಆಗಿರುತ್ತದೆ. ೨೦೧೩-೧೪ಕ್ಕೆ ಹೋಲಿಸಿದರೆ ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯುಟರ್ ಸಾಫ್ಟ್‌ವೇರ್, ಗೋಡಂಬಿ ಮತ್ತು ಗೋಡಂಬಿ ಬೀಜಗಳು, ಸಿದ್ಧ ಉಡುಪುಗಳು, ಪೆಟ್ರೋಲಿಯಂ ಮತ್ತು ಪೆಟ್ರೋಲಿಯಂ ಉತ್ಪನ್ನಗಳು, ಎಂಜಿನಿಯರಿಂಗ್ ಉತ್ಪನ್ನಗಳು, ಕಡಲಿನ ಉತ್ಪನ್ನಗಳು, ಕಾಫಿ ಉತ್ಪನ್ನಗಳು, ಮಸಾಲೆ ಪದಾರ್ಥಗಳು, ಕೃಷಿ ಮತ್ತು ಸಂಸ್ಕರಿಸಿದ ಆಹಾರ ಪದಾರ್ಥಗಳು, ಕರಕುಶಲ ಮತ್ತು ಚರ್ಮದ ಉತ್ಪನ್ನಗಳ ರಫ್ತುಗಳು ೨೦೧೪-೧೫ರಲ್ಲಿ ಗಮನಾರ್ಹವಾಗಿ ಏರಿಕೆಯಾಗಿರುತ್ತವೆ. ೨೦೧೩-೧೪ಕ್ಕೆ ಹೋಲಿಸಿದರೆ ೨೦೧೪-೧೫ರಲ್ಲಿ ರೇಷ್ಮೆ ಉತ್ಪನ್ನಗಳು, ಮೂಲ ರಾಸಾಯನಿಕಗಳು, ಔಷಧ ಮತ್ತು ಕಾಸ್ಮೆಟಿಕ್ಸ್, ರತ್ನಗಳು ಹಾಗೂ ಆಭರಣಗಳು ಮತ್ತು ಪ್ಲಾಸ್ಟಿಕ್ ಸರಕುಗಳ ರಫ್ತು ಅಲ್ಪ ಕುಸಿತವನ್ನು ಕಂಡಿರುತ್ತದೆ.

ಕರ್ನಾಟಕದ ರಫ್ತುಗಳು ಏಪ್ರಿಲ್‌ನಿಂದ ಸೆಪ್ಟೆಂಬರ್ ೨೦೧೫ರ ಅವಧಿಯಲ್ಲಿ ರೂ.೧೨೮೫೩೫ ಕೋಟಿಗಳಾಗಿತ್ತು. ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯುಟರ್ ಸಾಫ್ಟ್‌ವೇರ್ ರಫ್ತುಗಳು ರಾಜ್ಯದ ರಫ್ತುಗಳಲ್ಲಿ ಬೃಹತ್ ಪಾಲನ್ನು ಹೊಂದಿರುತ್ತದೆ. ೨೦೧೫-೧೬ರಲ್ಲಿ (ಡಿಸೆಂಬರ್ ೨೦೧೫ರವರೆಗೆ) ರಫ್ತುಗಳಲ್ಲಿ ಇತರೇ ಸರಕುಗಳು ಅಂದರೆ ರತ್ನಗಳು ಮತ್ತು ಆಭರಣಗಳ (ಶೇ. ೧೧.೧೨) ಮತ್ತು ಎಂಜಿನಿಯರಿಂಗ್ ಉತ್ಪನ್ನಗಳ (ಶೇ. ೧೩.೪೨) ಪಾಲು ಗಮನಾರ್ಹವಾಗಿರುತ್ತದೆ.

**ಕೋಷ್ಟಕ: ೮.೩೧ ಕರ್ನಾಟಕದ ರಫ್ತುಗಳ ಕಾರ್ಯನಿರ್ವಹಣೆ (ಮೌಲ್ಯ ರೂ.ಕೋಟಿಗಳಲ್ಲಿ)**

| ಕ್ರ. ಸಂ. | ಪದಾರ್ಥಗಳು | ೨೦೧೨-೧೩ | ೨೦೧೩-೧೪ | ೨೦೧೪-೧೫ | ೨೦೧೫-೧೬* |
|---|---|---|---|---|---|
| ೧ | ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ ಸಾಫ್ಟ್‌ವೇರ್ ಮತ್ತು ಜೈವಿಕ ತಂತ್ರಜ್ಞಾನ | ೧೫೬೦೦೦ | ೧೭೮೦೦೦ | ೧೯೪೦೨೦ | ೬೭೯೮೦ |
| ೨ | ಸಿದ್ಧ ಉಡುಪುಗಳು | ೭೬೭೦ | ೮೯೦೦ | ೯೮೨೧ | ೫೭೪೭ |
| ೩ | ಪೆಟ್ರೋಲಿಯಂ ಮತ್ತು ಪೆಟ್ರೋಲಿಯಂ ಉತ್ಪನ್ನಗಳು | ೩೩೯೧೫ | ೩೫೩೯೨ | ೪೦೮೮೨ | ೬೬೧೩ |
| ೪ | ಎಂಜಿನಿಯರಿಂಗ್ ಉತ್ಪನ್ನಗಳು | ೧೨೫೬೮ | ೧೭೯೭೮ | ೨೦೯೫೮ | ೧೭೨೪೫ |
| ೫ | ಕಬ್ಬಿಣದ ಅದಿರುಗಳು ಮತ್ತು ಖನಿಜಗಳು ಮತ್ತು ಶಿಲೆಗಳು | ೧೭೩೫ | ೭೩೯ | ೭೪೯ | ೬೯೫೮ |
| ೬ | ರೇಷ್ಮೆ ಉತ್ಪನ್ನಗಳು | ೬೫೪ | ೬೫೦ | ೫೫೪ | ೨೧೩ |
| ೭ | ಕಾಫಿ ಉತ್ಪನ್ನಗಳು | ೩೫೩೪ | ೩೫೯೮ | ೪೯೭೩ | ೧೬೭೭ |
| ೮ | ಮೂಲ ರಾಸಾಯನಿಕಗಳು, ಔಷಧಗಳು ಮತ್ತು ಕಾಸ್ಮೆಟಿಕ್ಸ್ | ೭೨೩೩ | ೮೦೩೦ | ೫೮೯೬ | ೩೪೧೦ |
| ೯ | ಕೃಷಿ ಮತ್ತು ಸಂಸ್ಕರಿಸಿದ ಆಹಾರ ಪದಾರ್ಥಗಳು | ೧೧೪೯ | ೧೩೦೦ | ೧೩೮೩ | ೨೭೦೩ |
| ೧೦ | ರತ್ನ ಮತ್ತು ಆಭರಣ | ೨೪೪೮೩ | ೨೪೧೭೫ | ೨೧೯೯೮ | ೧೪೨೮೯ |
| ೧೧ | ಗೋಡಂಬಿ ಮತ್ತು ಗೋಡಂಬಿ ಬೀಜಗಳು | ೮೪೭ | ೧೨೦೦ | ೧೫೦೫ | ೨೮೬ |
| ೧೨ | ಕರಕುಶಲ ವಸ್ತುಗಳು | ೩೭೪ | ೫೧೬ | ೫೪೮ | ೯೦ |
| ೧೩ | ಧರ್ಮ ಉತ್ಪನ್ನಗಳು | ೪೫೨ | ೪೫೦ | ೫೪೩ | ೧೪೦ |
| ೧೪ | ರಾಸಾಯನಿಕಗಳು ಮತ್ತು ಶಿಲೆಗಳು | ೪೯೧ | ೫೭೨ | ೯೫೫ | ೭೧೫ |
| ೧೫ | ಕಡಲಿನ ಉತ್ಪನ್ನಗಳು | ೬೩೨ | ೧೦೬೭ | ೧೩೧೩ | ೧೫೦ |
| ೧೬ | ಪ್ಲಾಸ್ಟಿಕ್ ಸರಕುಗಳು | ೭೮೮ | ೭೦೦ | ೩೭೬ | ೫೬ |
| ೧೭ | ಮಸಾಲೆ ಪದಾರ್ಥಗಳು | ೯೦೫ | ೧೧೫೦ | ೧೧೨೬ | ೧೩೩ |
| ೧೮ | ಉಣ್ಣೆ ಮತ್ತು ಉಣ್ಣೆ ಪದಾರ್ಥಗಳು | ೧೫೧ | ೧೭೬ | ೧೯೧ | ೪ |
| ೧೯ | ಸಣ್ಣಪುಟ್ಟ ಮತ್ತು ಇತರೆ | ೪೭೮೯ | ೫೫೭೫ | ೫೭೭೭ | ೧೨೬ |
| | **ಒಟ್ಟು** | **೨೫೮೩೭೦** | **೨೯೦೪೧೮** | **೩೧೩೫೭೦** | **೧೨೮೫೩೫** |

* ಡಿಸೆಂಬರ್ ೨೦೧೫ರವರೆಗಿನ ಮಾಹಿತಿ. ಮೂಲ: ವಿಶ್ವೇಶ್ವರಯ್ಯ ವ್ಯಾಪಾರ ಅಭಿವೃದ್ಧಿ ಕೇಂದ್ರ, ಕರ್ನಾಟಕ ಸರ್ಕಾರ

೧೧ನೇ ಪಂಚವಾರ್ಷಿಕ ಅವಧಿಯಲ್ಲಿ ಭಾರತದ ರಫ್ತುಗಳಿಗೆ ಕರ್ನಾಟಕದ ಕೊಡುಗೆಯು ಶೇ.೧೧ ರಿಂದ ಶೇ.೧೫ ರವರೆಗೆ ಬದಲಾಗಿರುತ್ತದೆ. ಇದಲ್ಲದೇ, ಭಾರತದ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಉತ್ಪನ್ನಗಳ ಒಟ್ಟು ರಫ್ತುಗಳಲ್ಲಿ ಕರ್ನಾಟಕದ ಪಾಲು ೨೦೦೫-೦೬ರಿಂದಲೂ ಶೇ.೨೫ಕ್ಕಿಂತಲೂ ಹೆಚ್ಚಾಗಿಯೇ ಇರುತ್ತದೆ.

೨೦೧೦-೧೧ರಿಂದ ೨೦೧೪-೧೫ ರವರೆಗಿನ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದಲ್ಲಿ ಕರ್ನಾಟಕದ ರಫ್ತುಗಳ ಪಾಲಿನ ವಿವರಗಳನ್ನು ಚಿತ್ರ ೪.೧ರಲ್ಲಿ ಚಿತ್ರಿಸಲಾಗಿದೆ.ಉತ್ಪನ್ನವಾದ ರಫ್ತು ಕಾರ್ಯನಿರ್ವಹಣೆಯು ರಫ್ತು ವ್ಯಾಪಾರಕ್ಕೆ ಮುಕ್ತತೆಯ ಮಟ್ಟವನ್ನು ಹೆಚ್ಚಿಸುವ ಒಂದು ಪ್ರಮುಖ ನಿರ್ಧಾರವಾಗಿದೆ. ಮುಕ್ತತೆಯ ಮಟ್ಟವನ್ನು ರಾಷ್ಟ್ರ ಮಟ್ಟದಲ್ಲಿ ಒಟ್ಟು ಆಂತರಿಕ ಉತ್ಪನ್ನಕ್ಕೆ ರಫ್ತುಗಳ ಮೌಲ್ಯದ ಅನುಪಾತಕ್ಕೆ ಮತ್ತು ರಾಜ್ಯ ಮಟ್ಟದಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ರಫ್ತುಗಳ ಮೌಲ್ಯದ ಅನುಪಾತದಿಂದ ಅಳೆಯಲಾಗುತ್ತದೆ. ರಫ್ತು ವ್ಯಾಪಾರದಲ್ಲಿ ಕರ್ನಾಟಕದ ಮುಕ್ತತೆಯ ಹಂತವು ೨೦೧೦-೧೧ರಲ್ಲಿದ್ದ ಶೇ.೪೧.೯ ರಿಂದ ೨೦೧೪-೧೫ರಲ್ಲಿ ಸುಮಾರು ಶೇ.೪೪.೩೮ಕ್ಕೆ ಹೆಚ್ಚಳವಾಗಿರುತ್ತದೆ. ಇದು ಅಖಿಲ ಭಾರತದ ಸುಮಾರು ಶೇ.೨೩ಕ್ಕಿಂತಲೂ ಗಮನಾರ್ಹವಾಗಿ ಹೆಚ್ಚಾಗಿರುತ್ತದೆ. ವ್ಯಾಪಾರಕ್ಕೆ ಹೆಚ್ಚುತ್ತಿರುವ ಮುಕ್ತತೆಯ ಹಂತವು ಆರ್ಥಿಕ ಜಾಗತೀಕರಣದ ಒಂದು ಸೂಚಕವಾಗಿರುತ್ತದೆ. ಈ ದೃಷ್ಟಿಕೋನದಿಂದ ನೋಡಿದಾಗ ಕರ್ನಾಟಕದ ಆರ್ಥಿಕ ಜಾಗತೀಕರಣದ ಮಟ್ಟಗಳು ಅಖಿಲ ಭಾರತ ಮಟ್ಟಕ್ಕಿಂತಲೂ ಹೆಚ್ಚಾಗಿರುತ್ತದೆ.

## ಇತರೆ ಪ್ರವೃತ್ತಿಗಳು

### ಕೃಷಿ ಮತ್ತು ಕೃಷಿ ಅವಲಂಬಿತ ಚಟುವಟಿಕೆಗಳು

ದೇಶದ ಆರ್ಥಿಕ ಅಭಿವೃದ್ಧಿಗೆ ಕೃಷಿ ಮತ್ತು ಕೃಷಿ ಅವಲಂಬಿತ ಚಟುವಟಿಕೆಗಳು ಮಹತ್ವದ ಪಾತ್ರವನ್ನು ವಹಿಸುತ್ತದೆ. ಶೇ.೪ ಅಥವಾ ಅದಕ್ಕಿಂತ ಹೆಚ್ಚು ಕೃಷಿ ಬೆಳವಣಿಗೆಯು ಕೃಷಿಯ ಅಂತರ್ಗತ ಬೆಳವಣಿಗೆಗೆ ಕಡ್ಡಾಯವಾಗಿರುತ್ತದೆ. ಇದು ಪ್ರಾಮುಖ್ಯವಾಗಿದ್ದು,

ಬಹುತೇಕ ಜನರಿಗೆ ಬೆಲೆಯ ಸ್ಥಿರತೆ, ಆಹಾರ ಭದ್ರತೆ, ಆದಾಯ ಮತ್ತು ಜೀವನೋಪಾಯ ಕಲ್ಪಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಕೃಷಿ ಇಲಾಖೆಯು ರೈತ ಸಮುದಾಯದ ಒಟ್ಟಾರೆ ಕಲ್ಯಾಣಕ್ಕಾಗಿ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುವ ಜೊತೆಗೆ ಅಗತ್ಯ ಕೃಷಿ ಸಾಮಗ್ರಿಗಳಾದ ಬಿತ್ತನೆ ಬೀಜ, ರಾಸಾಯನಿಕ ಗೊಬ್ಬರಗಳು, ಸಸ್ಯ ಸಂರಕ್ಷಣಾ ಔಷಧಿಗಳು, ಕೃಷಿ ಯಂತ್ರೋಪಕರಣಗಳನ್ನು ಸಕಾಲದಲ್ಲಿ ಸಮರ್ಪಕವಾಗಿ ಸರಬರಾಜು ಮಾಡಲು ಹಾಗೂ ನೈಸರ್ಗಿಕ ಸಂಪನ್ಮೂಲಗಳಾದ ಭೂ, ಜಲ ಇತ್ಯಾದಿಗಳಿಂದ ಗರಿಷ್ಠ ಉತ್ಪನ್ನ ಪಡೆಯಲು ರೈತರಿಗೆ ಪ್ರಾತ್ಯಕ್ಷಿಕೆಗಳ ಮೂಲಕ ಪರಿಣಾಮಕಾರಿ ಕೃಷಿ ತಂತ್ರಜ್ಞಾನದ ವರ್ಗಾವಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಇದರಿಂದಾಗಿ ರೈತ ಸಮುದಾಯದ ಆರ್ಥಿಕ ಸ್ಥಿತಿ ಸುಧಾರಣೆ ಹಾಗೂ ಜನತೆಯ ಆಹಾರ ಧಾನ್ಯಗಳ ಅಗತ್ಯಗಳನ್ನು ಪೂರೈಸಲಾಗುತ್ತಿದೆ. ಒಟ್ಟು ರಾಜ್ಯದ ಆಂತರಿಕ ಉತ್ಪನ್ನಕ್ಕೆ ಕೃಷಿ ಕ್ಷೇತ್ರದ ಕೊಡುಗೆ ಕ್ಷೀಣಿಸುತ್ತಿದೆಯಾದರೂ ಕೃಷಿಯು ಅತಿ ದೊಡ್ಡಉದ್ಯೋಗ ಸೃಷ್ಟಿಸುವ ಚಟುವಟಿಕೆಯಾಗಿ ಮುಂದುವರಿದಿದೆ.

## ಕೈಗಾರಿಕೆಗಳು

ಕೈಗಾರಿಕೆಗಳು ರಾಜ್ಯದ ಆರ್ಥಿಕ ಬೆಳವಣಿಗೆಯಲ್ಲಿ ಒಂದು ಮಹತ್ವದ ಪಾತ್ರವನ್ನು ವಹಿಸಿದ್ದು ಮುಖ್ಯವಾಗಿ ಹೆಚ್ಚಿನ ತಂತ್ರಜ್ಞಾನದ ಕೈಗಾರಿಕೆಗಳಾದ ವಿದ್ಯುತ್ ಮತ್ತು ವಿದ್ಯುನ್ಮಾನ, ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ಇತ್ತೀಚೆಗೆ ನ್ಯಾನೋ ತಂತ್ರಜ್ಞಾನದ ಕೈಗಾರಿಕೆಗಳಲ್ಲಿ ರಾಜ್ಯವು ತನ್ನದೇ ಆದ ಕೊಡುಗೆಯನ್ನು ದೇಶಕ್ಕೆ ನೀಡುತ್ತಿದೆ. ಒಟ್ಟಿನಲ್ಲಿ ಕರ್ನಾಟಕದ ಕೈಗಾರಿಕಾ ವಿನ್ಯಾಸವು, ಒಂದು ಕಡೆ ಆಧುನಿಕ ಉನ್ನತಮಟ್ಟದ ತಂತ್ರಜ್ಞಾನ ಬಂಡವಾಳ ವಸ್ತುಗಳು ಹಾಗೂ ತೀವ್ರಜ್ಞಾನದಾಹಿ ಕೈಗಾರಿಕೆಗಳ ಮತ್ತು ಇನ್ನೊಂದೆಡೆ ಸಾಂಪ್ರದಾಯಿಕ ಗ್ರಾಹಕ ವಸ್ತುಗಳ ಕೈಗಾರಿಕೆಗಳ ಸಮ್ಮಿಶ್ರಣವಾಗಿದೆ.

ಕರ್ನಾಟಕದಲ್ಲಿ ಖನಿಜ, ತಯಾರಿಕೆ ಹಾಗೂ ವಿದ್ಯುತ್ ವಲಯ ಒಳಗೊಂಡಂತೆ ಕೈಗಾರಿಕಾ ಉತ್ಪಾದನಾ ಸಾಮಾನ್ಯ ಸೂಚ್ಯಂಕವು ೨೦೧೪-೧೫ರಲ್ಲಿ ೧೮೧.೧೫ ಆಗಿತ್ತು. ಕರ್ನಾಟಕದ ಸಂಘಟಿತ ಕೈಗಾರಿಕಾ ವಲಯದಲ್ಲಿ ಸಾಮಾನ್ಯ ಸೂಚ್ಯಂಕವು ೨೦೧೩-೧೪ಕ್ಕೆ ಹೋಲಿಸಿದಾಗ ೨೦೧೪-೧೫ರಲ್ಲಿ ಶೇ.೨.೦೬ರಷ್ಟು ವಾರ್ಷಿಕ ಬೆಳವಣಿಗೆಯನ್ನು ಸಾಧಿಸಿದೆ. ಈ ಸಂಘಟಿತ ಕೈಗಾರಿಕಾ ವಲಯದಲ್ಲಿ ಉತ್ಪಾದನಾ ವಲಯವು ಹೆಚ್ಚಿನ ಅಂದರೆ ಶೇ.೨.೯೩ರಷ್ಟು ವಾರ್ಷಿಕ ಸೂಚ್ಯಂಕ ಬೆಳವಣಿಗೆಯ ದರವನ್ನು ದಾಖಲಿಸಿದ್ದು, ನಂತರದ ಸ್ಥಾನವನ್ನು ವಿದ್ಯುತ್ ವಲಯವು (ಶೇ.೧.೯೧) ಮತ್ತು ಗಣಿ ವಲಯವು ಋಣಾತ್ಮಕ ಬೆಳವಣಿಗೆ (ಶೇ.-೨೬.೧೬) ಹೊಂದಿರುತ್ತದೆ.ಗಣಿಗಾರಿಕೆ ಚಟುವಟಿಕೆಯಲ್ಲಿ ಕುಗ್ಗುವಿಕೆಯಿಂದ ಮತ್ತು ಉತ್ಪಾದನಾ ವಲಯದಲ್ಲಿನ ಮಧ್ಯಮ ಬೆಳವಣಿಗೆಯಿಂದ ಕೈಗಾರಿಕಾ ವಲಯದಲ್ಲಿ ಮಂದಗತಿಯ ಬೆಳವಣಿಗೆಯನ್ನು ಗಮನಿಸಲಾಗಿದೆ.

೨೦೦೫-೦೬ ರಿಂದ ೨೦೧೪-೧೫ ರವರೆಗಿನ ಅವಧಿಗೆ ಆಧಾರ ವರ್ಷ ೨೦೦೪-೦೫ರಲ್ಲಿ ಸಂಘಟಿತ ಕೈಗಾರಿಕಾ ವಲಯದ ಸಂಯುಕ್ತ ವಾರ್ಷಿಕ ಸೂಚ್ಯಂಕದ ಬೆಳವಣಿಗೆಯ ದರವು ಸಾಮಾನ್ಯ ವಲಯದಲ್ಲಿ ಶೇ.೬.೧ರಷ್ಟು, ಉತ್ಪಾದನಾ ವಲಯದಲ್ಲಿ ಶೇ.೬.೬ರಷ್ಟು ಹಾಗೂ ವಿದ್ಯುತ್ ವಲಯದಲ್ಲಿ ಶೇ.೭.೫ರಷ್ಟಿದೆ. ರಾಜ್ಯದ ಗಣಿ ವಲಯದ ಉತ್ಪಾದನೆಯಲ್ಲಿ ಶೇ.೮.೯ರಷ್ಟು ಇಳಿಕೆ ಕಂಡು ಬಂದಿದೆ. ೨೦೧೪-೧೫ರಲ್ಲಿ ಬಳಕೆಯಾಧಾರಿತ ಕೈಗಾರಿಕಾ ನಾಲ್ಕು ಪ್ರಮುಖ ಗುಂಪುಗಳಲ್ಲಿ ಗ್ರಾಹಕ ವಸ್ತುಗಳು ಶೇ.೫.೮೩ರಷ್ಟು ಹೆಚ್ಚಿನ ಬೆಳವಣಿಗೆ ಹೊಂದಿದ್ದು, ಉಳಿದಂತೆ ಮೂಲ ವಸ್ತುಗಳು ಶೇ.೧.೯೧, ಬಂಡವಾಳ ವಸ್ತುಗಳು, ಶೇ.೧.೭೦ ಮತ್ತು ಮಧ್ಯವರ್ತಿ ವಸ್ತುಗಳು ಹಾಗೂ ಶೇ.೧.೫೪ರಷ್ಟು ಬೆಳವಣಿಗೆ ಹೊಂದಿದೆ.

## ಕೈಗಾರಿಕಾ ವಾರ್ಷಿಕ ಸಮೀಕ್ಷೆ

ಕೈಗಾರಿಕಾ ವಾರ್ಷಿಕ ಸಮೀಕ್ಷೆಯು ಸಂಘಟಿತ ಕೈಗಾರಿಕಾ ಉತ್ಪಾದನಾ ವಲಯದ ಅಂಕಿ-ಅಂಶಗಳ ವಿವರಗಳನ್ನು ನೀಡುತ್ತಿದ್ದು, ೨೦೧೨-೧೩ನೇ ಸಾಲಿಗೆ ಭಾರತದಲ್ಲಿ ಒಟ್ಟು ನೋಂದಣಿಯಾದ ಕೈಗಾರಿಕಾ ಘಟಕಗಳ ಪೈಕಿ ಶೇ.೫.೨೯ರಷ್ಟು ಭಾಗ ಕರ್ನಾಟಕದ್ದಾಗಿದೆ. ಸದರಿ ಸಾಲಿನಲ್ಲಿ ನೋಂದಣಿಯಾದ ಈ ಕೈಗಾರಿಕಾ ಘಟಕಗಳು ಸ್ಥಿರ ಬಂಡವಾಳದಲ್ಲಿ ಶೇ.೬.೬೬ರಷ್ಟು, ಒಟ್ಟು ಹುಟ್ಟುವಳಿಯಲ್ಲಿ ಶೇ.೬.೬೩ರಷ್ಟು ಹಾಗೂ ಶೇ.೬.೩೫ರಷ್ಟು ಒಟ್ಟು ಮೌಲ್ಯವರ್ಧಿತ ಕೊಡುಗೆಯನ್ನು ನೀಡಿರುತ್ತವೆ. ಪ್ರತಿ ಕಾರ್ಮಿಕರ ಮೌಲ್ಯವರ್ಧಿತ ಕೊಡುಗೆಯಲ್ಲಿ ರೂ.೪೯೮೦೧ ಮೌಲ್ಯ ಹೊಂದಿದ್ದು ಕರ್ನಾಟಕವು ರಾಷ್ಟ್ರಮಟ್ಟದ ಸರಾಸರಿಯಾದ ರೂ.೪೪,೩೪೭ಕ್ಕಿಂತ ಉತ್ತಮ ಸ್ಥಿತಿಯಲ್ಲಿದೆ.

## ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು

೨೦೧೪-೧೫ನೇ ಸಾಲಿಗೆ ರೂ.೨೭೯೨೯೧ ಲಕ್ಷಗಳ ಬಂಡವಾಳದಿಂದ ೨೮೭೪೨ ಅತಿಸಣ್ಣ ಮತ್ತು ಮಧ್ಯಮ ಕೈಗಾರಿಕಾ ಘಟಕಗಳ ನೋಂದಣಿಯಾಗಿದ್ದು, ೧೭೫೪೬೯ ಜನರಿಗೆ ಉದ್ಯೋಗಾವಕಾಶಗಳನ್ನು ಒದಗಿಸಿದೆ.೨೦೧೩-೧೪ನೇ ಸಾಲಿಗೆ ಹೋಲಿಸಿದಾಗ, ೨೦೧೪-೧೫ರಲ್ಲಿ ನೋಂದಣಿಯಾದ ಘಟಕಗಳು ಶೇ.೧೦.೬೯ರಷ್ಟು ಹೆಚ್ಚಳವಾಗಿದ್ದು, ಕ್ರಮವಾಗಿ ಬಂಡವಾಳ ಹೂಡಿಕೆ ಮತ್ತು ಉದ್ಯೋಗಾವಕಾಶವು ಶೇ.೨.೦೨ ಹಾಗೂ ಶೇ.೪.೮೫ರಷ್ಟು ಹೆಚ್ಚಾಗಿರುವುದು ಕಂಡುಬಂದಿದೆ.

## ರೇಷ್ಮೆ ಉದ್ಯಮ

ಪ್ರಮುಖ ಉದ್ಯೋಗಜನಕ ಕ್ಷೇತ್ರಗಳಲ್ಲಿ ರೇಷ್ಮೆ ತಯಾರಿಕೆ ಒಂದಾಗಿದ್ದು, ಕರ್ನಾಟಕದ ಗ್ರಾಮಾಂತರ ಪ್ರದೇಶಗಳಲ್ಲಿ ಉದ್ಯೋಗಾವಕಾಶವನ್ನು ಕಲ್ಪಿಸುವುದರಲ್ಲಿ ಇದರ ಬೆಳವಣಿಗೆ ವಿಶೇಷ ಪಾತ್ರವನ್ನು ವಹಿಸುತ್ತಿದೆ. ಡಿಸೆಂಬರ್ ೨೦೧೫ರ ಅಂತ್ಯಕ್ಕೆ ಹಿಪ್ಪುನೇರಳೆ ಬೆಳೆದ ಪ್ರದೇಶವು ರಾಜ್ಯದಲ್ಲಿ ಸುಮಾರು ೮೭.೯೩ ಸಾವಿರ ಹೆಕ್ಟೇರ್‌ಗಳಾಗಿದೆ. ಇದೇ ಅವಧಿಯಲ್ಲಿ ರೇಷ್ಮೆ ಗೂಡಿನ ಉತ್ಪಾದನೆ ೫೩.೦೦ ಮೆಟ್ರಿಕ್ ಟನ್, ರೇಷ್ಮೆ ಗೂಡುಗಳ ಮಾರಾಟ ೪೧.೪೩ ಮೆಟ್ರಿಕ್ ಟನ್, ಉತ್ಪಾದಿಸಲ್ಪಟ್ಟ ಕಚ್ಚಾ ರೇಷ್ಮೆ ೭.೩೮ ಮೆಟ್ರಿಕ್ ಟನ್ ಹಾಗೂ ಕೈಗಾರಿಕಾ ಉದ್ಯೋಗಾವಕಾಶ ೧೧.೪೩ ಲಕ್ಷಗಳಷ್ಟು ಆಗಿದ್ದು, ೨೦೧೪-೧೫ಕ್ಕೆ ಹೋಲಿಸಿದಾಗ ೨೦೧೫-೧೬ರಲ್ಲಿ ಹೆಚ್ಚಾಗಿರುವುದು ಕಂಡು ಬಂದಿದೆ. ೨೦೧೪-೧೫ನೇ ಸಾಲಿನಲ್ಲಿ ಹಿಪ್ಪು ನೇರಳೆ ಉತ್ಪಾದನೆಯು ಭಾರತದಲ್ಲಿ ಸುಮಾರು ೨೧೨೮೦ ಮೆಟ್ರಿಕ್ ಟನ್ ಎಂದು ಅಂದಾಜು ಮಾಡಲಾಗಿದ್ದು ಅದರಲ್ಲಿ ೯೫೪೬ ಮೆಟ್ರಿಕ್ ಟನ್‌ಗಳಷ್ಟು ಕರ್ನಾಟಕ ಪಾಲು

ನೀಡಿದೆ.೨೦೧೪-೧೫ರಲ್ಲಿ ಮಂಡಳಿಯು ರೂ.೨೩೧೦.೦೦ ಲಕ್ಷಗಳ ವಹಿವಾಟು ನಡೆಸಿದ್ದು, ಹಿಂದಿನ ವರ್ಷದಲ್ಲಿ ವಹಿವಾಟು ರೂ.೩೮೬೦.೦೦ ಲಕ್ಷಗಳು ಇದ್ದಿತು.ಪ್ರಸ್ತುತ ವರ್ಷ ಡಿಸೆಂಬರ್ ವರೆಗೆ ರೂ.೮೦೩.೯೮ ಲಕ್ಷಗಳಾಗಿರುತ್ತದೆ.

### ಮೂಲ ಸೌಕರ್ಯಗಳು

ಮೂಲ ಸೌಕರ್ಯ ಅಭಿವೃದ್ಧಿಯು ಆರ್ಥಿಕತೆಯ ಬೆಳವಣಿಗೆಯ ಚಾಲನೆಗೆ ಪೂರ್ವ ಸ್ಥಿತಿಯಾಗಿರುತ್ತದೆ.ಇದು ಪ್ರಮುಖವಾಗಿ ಇಂಧನ, ಸಾರಿಗೆ, ದೂರಸಂಪರ್ಕ, ಬ್ಯಾಂಕಿಂಗ್ ಮತ್ತು ಹಣಕಾಸನ್ನು ಒಳಗೊಂಡಿರುತ್ತದೆ.ಸರ್ಕಾರವು ಹಲವು ಮುಂದುವರಿದ ಹಾಗೂ ಪ್ರಸ್ತಾವಿತ ಯೋಜನೆಗಳ ಮೂಲಕ ಮೂಲ ಸೌಕರ್ಯ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆಯನ್ನು ನೀಡುವುದನ್ನು ಮುಂದುವರಿಸಿದೆ.ಕೆಲವು ವಲಯಗಳ ಸಂಕ್ಷಿಪ್ತ ಸಾರಾಂಶವನ್ನು ಈ ಕೆಳಗೆ ನೀಡಲಾಗಿದೆ.

### ವಿದ್ಯುಚ್ಛಕ್ತಿ ವಲಯ

ತೀವ್ರ ಗತಿಯ ಆರ್ಥಿಕ ಪ್ರಗತಿಯ ಪ್ರಭಾವದಿಂದಾಗಿ ವಿದ್ಯುತ್ತಿನ ನಿರಂತರ ಏರುತ್ತಿರುವ ಬೇಡಿಕೆಯ ಕಾರಣದಿಂದ ಕರ್ನಾಟಕ ರಾಜ್ಯವು ವಿದ್ಯುತ್ ಕೊರತೆಯ ಪರಿಸ್ಥಿತಿಯನ್ನು ಅನುಭವಿಸುತ್ತಿದೆ.ರಾಜ್ಯಸರ್ಕಾರವು ಸಾರ್ವಜನಿಕ ಹಾಗೂ ಖಾಸಗಿ ವಲಯಗಳಲ್ಲಿ ವಿದ್ಯುತ್ ಉತ್ಪಾದನೆಗಾಗಿ ಹೊಸ ಸ್ಥಾಪಿತ ಸಾಮರ್ಥ್ಯ ಸೇರ್ಪಡೆಗಾಗಿ ಯೋಜನೆಗಳನ್ನು ಜಾರಿಗೊಳಿಸಲು ಹಲವಾರು ಉತ್ತೇಜನಗಳನ್ನು ಕೈಗೊಂಡಿದೆ.ದಿನವೊಂದಕ್ಕೆ ಅತ್ಯಧಿಕ ಬೇಡಿಕೆ ಮತ್ತು ಅತ್ಯಧಿಕ ಸರಬರಾಜು ಇವೆರಡರಲ್ಲೂ ೨೦೦೭-೦೮ರಿಂದ ಏರಿಕೆ ಗತಿಯನ್ನು ಕಾಣಬಹುದು. ವಿದ್ಯುತ್ ಕ್ಷೇತ್ರದಲ್ಲಿ ಸುಧಾರಣೆಗಳನ್ನು ಜಾರಿಗೊಳಿಸುತ್ತಿರುವ ಭಾರತದ ಕೆಲವು ರಾಜ್ಯಗಳ ಪೈಕಿ ಕರ್ನಾಟಕವು ಮುಂಚೂಣಿಯಲ್ಲಿದೆ.

ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನಾ ಘಟಕಗಳಲ್ಲಿ ರಾಜ್ಯದ ಪಾಲನ್ನೂ ಒಳಗೊಂಡಂತೆ, ರಾಜ್ಯದಲ್ಲಿ ಸಾರ್ವಜನಿಕ ಕ್ಷೇತ್ರಮತ್ತು ಖಾಸಗಿ ಕ್ಷೇತ್ರಗಳ ಒಟ್ಟು ವಿದ್ಯುತ್ ಸ್ಥಾಪಿತ ಸಾಮರ್ಥ್ಯವು ಡಿಸೆಂಬರ್ ೨೦೧೫ರ ವರೆಗೆ ೧೫೭೨೦.೪೩ ಮೆಗಾ ವ್ಯಾಟ್ಸ್ ಆಗಿದ್ದು, ಕಳೆದ ಸಾಲಿನ ಇದೇ ಅವಧಿಯಲ್ಲಿ ಇರುವುದಕ್ಕಿಂತ ಶೇ.೫.೭ರಷ್ಟು ಹೆಚ್ಚಾಗಿದೆ. ಸಾರ್ವಜನಿಕ ಕ್ಷೇತ್ರದ ಸ್ಥಾಪಿತ ಸಾಮರ್ಥ್ಯವು ೯೨೦೧.೩೫ ಮೆಗಾ ವ್ಯಾಟ್ಸ್ (ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನಾ ಘಟಕಗಳ ಹಂಚಿಕೆಯೂ ಸೇರಿ) ಮತ್ತು ಖಾಸಗಿ ಕ್ಷೇತ್ರದ ಪಾಲು ೬೫೧೯.೦೮ ಮೆಗಾ ವ್ಯಾಟ್ಸ್ ಆಗಿರುತ್ತದೆ.ರಾಜ್ಯದಲ್ಲಿ ೩೧-೧೨-೨೦೧೫ರಂದು ಇದ್ದಂತಹ ವಿದ್ಯುತ್ ಉತ್ಪಾದನೆಯ ಒಟ್ಟು ಸ್ಥಾಪಿತ ಸಾಮರ್ಥ್ಯದಲ್ಲಿ ಶೇ.೨೯.೪೦ರಷ್ಟು ಪಾಲು ಜಲ ವಿದ್ಯುತ್‌ನದಾಗಿದ್ದು, ಇದು ರಾಜ್ಯದಲ್ಲಿ ಜಲವಿದ್ಯುತ್ತಿನ ಮುಂದುವರಿದ ಪ್ರಾಬಲ್ಯವನ್ನು ಸೂಚಿಸುತ್ತದೆ. ೩೧-೧೨-೨೦೧೫ರಂದು ಇದ್ದಂತಹ ಒಟ್ಟು ಸ್ಥಾಪಿತ ಸಾಮರ್ಥ್ಯವಾದ ೧೫೭೨೦.೪೩ ಮೆಗಾ ವ್ಯಾಟ್ಸ್ ಪೈಕಿ ನವೀಕರಿಸಬಹುದಾದ ಇಂಧನವು ೪೩೯೫.೬೨ ಮೆಗಾ ವ್ಯಾಟ್ಸ್ ಆಗಿದ್ದು, ಇದರ ಪಾಲು ಶೇ.೨೭.೯ ಆಗಿರುತ್ತದೆ.

೨೦೧೫-೧೬ರ ಆರ್ಥಿಕ ವರ್ಷದಲ್ಲಿ ನಿರೀಕ್ಷಿತ ಸಾಮರ್ಥ್ಯ ಸೇರ್ಪಡೆಯು ೯೦೩.೪೩ ಮೆಗಾ ವ್ಯಾಟ್ಸ್ ಆಗಿರುತ್ತದೆ (ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನಾ ಘಟಕಗಳ ಹಂಚಿಕೆ ೫೦೩ ಮೆಗಾ ವ್ಯಾಟ್ಸ್ ಸೇರಿ). ಇದರಲ್ಲಿ ನವೀಕರಿಸಬಹುದಾದ ಇಂಧನವು ೩೨೯.೬೨ ಮೆಗಾ ವ್ಯಾಟ್ಸ್ ಆಗಿರುತ್ತದೆ.೨೦೧೪-೧೫ರ ಆರ್ಥಿಕ ವರ್ಷದಲ್ಲಿ ಸಾಮರ್ಥ್ಯ ಸೇರ್ಪಡೆಯು ೪೬೧ ಮೆಗಾ ವ್ಯಾಟ್ಸ್ ಆಗಿರುತ್ತದೆ (ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನಾ ಘಟಕಗಳ ಹಂಚಿಕೆ ೨೪೮ ಮೆಗಾ ವ್ಯಾಟ್ಸ್ ಸೇರಿ). ಇದರಲ್ಲಿ ನವೀಕರಿಸಬಹುದಾದ ಇಂಧನವು ೪೦೩ ಮೆಗಾ ವ್ಯಾಟ್ಸ್ ಆಗಿರುತ್ತದೆ. ೨೦೧೪-೧೫ರಲ್ಲಿ ಇಲ್ಲಿರುವ ಕೆಲವು ಪ್ರಮುಖ ಖಾಸಗಿ ಸ್ವಾಯತ್ತ ವಿದ್ಯುತ್ ಉತ್ಪಾದಕರುಗಳ ಪಾಲು ೬೧೪೯ ಮೆಗಾ ವ್ಯಾಟ್ಸ್ ಆಗಿರುತ್ತದೆ ಮತ್ತು ೨೦೧೫-೧೬ರಲ್ಲಿ ೩೭೦ ಮೆಗಾ ವ್ಯಾಟ್ಸ್ ಸೇರ್ಪಡೆಯನ್ನು ನಿರೀಕ್ಷಿಸಲಾಗಿದೆ. ೨೦೧೪-೧೫ರಲ್ಲಿ ಈಡೇರಿಸಿದ ಅತ್ಯಧಿಕ ಬೇಡಿಕೆಯು ೯೫೦೩ ಮೆಗಾ ವ್ಯಾಟ್ಸ್ ಆಗಿರುತ್ತದೆ ಮತ್ತು ೨೦೧೫-೧೬ರಲ್ಲಿ ಸುಮಾರು ೧೦,೦೦೦ ಮೆಗಾ ವ್ಯಾಟ್ಸ್‌ನಷ್ಟು ಅತ್ಯಧಿಕ ಬೇಡಿಕೆಯು ಬರುವ ನಿರೀಕ್ಷೆ ಇದೆ.ಪ್ರಸ್ತುತ ವರ್ಷ ಡಿಸೆಂಬರ್ ೨೦೧೫ರವರೆಗೆ ವಿದ್ಯುತ್ ಉತ್ಪಾದನೆಯು ೩೬೭೪೭ ಮಿಲಿಯನ್ ಯೂನಿಟ್ಸ್ ಆಗಿರುತ್ತದೆ. ರಾಜ್ಯದ ಸಾರ್ವಜನಿಕ ಕ್ಷೇತ್ರದಲ್ಲಿ ಜಲ ವಿದ್ಯುತ್ : ಶಾಖೋತ್ಪನ್ನ ವಿದ್ಯುತ್ ಉತ್ಪಾದನೆಯ ಪ್ರಮಾಣವು ಸುಮಾರು ೪ : ೩ಅನುಪಾತದಲ್ಲಿದೆ. ಇದೇ ರೀತಿಯಲ್ಲಿ ೨೦೧೪-೧೫ರ ಒಟ್ಟು ವಿದ್ಯುತ್ ಉತ್ಪಾದನೆಯು ೪೬೨೦೪ ಮಿಲಿ ಯುನಿಟ್ಸ್ ಆಗಿದ್ದು, ೨೦೧೩-೧೪ರ ೪೬೧೬೬ ಮಿಲಿ ಯುನಿಟ್ಸ್ ಒಟ್ಟು ವಿದ್ಯುತ್ ಉತ್ಪಾದನೆಗಿಂತ ೩೮ ಮಿಲಿ ಯುನಿಟ್ಸ್ ಏರಿಕೆಯಾಗಿರುತ್ತದೆ.ಕರ್ನಾಟಕವು ಅಸಂಪ್ರದಾಯಿಕ ಅಥವಾ ನವೀಕರಿಸಬಹುದಾದ ಇಂಧನ ಉತ್ಪಾದನಾ ಮೂಲಗಳಲ್ಲಿ ಯಶಸ್ವಿಯಾಗಿ ಖಾಸಗಿ ವಲಯದ ಹೂಡಿಕೆಯನ್ನು ಪ್ರೋತ್ಸಾಹಿಸುತ್ತಿದೆ.

ಕರ್ನಾಟಕದ ವಿದ್ಯುತ್ ಕ್ಷೇತ್ರವು ೨೦೦೫-೦೬ರಲ್ಲಿದ್ದ ಅದರ ಪ್ರಸರಣ ಮತ್ತು ವಿತರಣ ನಷ್ಟವನ್ನು ಶೇ.೨೯.೬ ರಿಂದ ೨೦೧೪-೧೫ಕ್ಕೆ ಶೇ.೧೮.೫೨ರವರೆಗೆ ತಗ್ಗಿಸಲಾಗಿದೆ. ತಾಂತ್ರಿಕ ನಷ್ಟವನ್ನು ಕಡಿಮೆ ಮಾಡುವುದಕ್ಕಾಗಿ ಜಾಲವನ್ನು ಬಲಪಡಿಸಿ ಉನ್ನತೀಕರಿಸಲು ವಲಯದಲ್ಲಿನ ಸಂಸ್ಥೆಗಳು ಯೋಜಿತ ಹೂಡಿಕೆಗಳನ್ನು ಮಾಡುತ್ತಿವೆ. ೨೦೦೫-೦೬ರಲ್ಲಿದ್ದ ಶೇ.೩೮ರಷ್ಟು ಒಟ್ಟಾರೆ ತಾಂತ್ರಿಕ ಮತ್ತು ವಾಣಿಜ್ಯ ನಷ್ಟವನ್ನು ೨೦೧೪-೧೫ರಲ್ಲಿ ಶೇ.೧೭.೦೮ಕ್ಕೆ ಇಳಿಸಲಾಗಿರುತ್ತದೆ.

ವಿದ್ಯುತ್ ವಿತರಣೆಯನ್ನು ಸುಧಾರಿಸಲು ಹೊಸದಾಗಿ ಎರಡು ಕೇಂದ್ರ ಪುರಸ್ಕೃತ ಯೋಜನೆಗಳನ್ನು, ಅಂದರೆ ಏಕೀಕೃತ ವಿದ್ಯುತ್ ಅಭಿವೃದ್ಧಿ ಯೋಜನೆ ಮತ್ತು ದೀನ ದಯಾಳ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆಗಳನ್ನು ಆರಂಭಿಸಲಾಯಿತು. ರಾಜ್ಯದಲ್ಲಿ ೨೦೧೪-೧೫ರಲ್ಲಿ ಕೃಷಿ ಕ್ಷೇತ್ರವು ವಿದ್ಯುತ್ ಬಳಕೆಯಲ್ಲಿ ಅತೀ ಹೆಚ್ಚಿನ ಪಾಲನ್ನು, ಅಂದರೆ ಶೇ.೩೬ ಪಡೆದಿದ್ದು, ಎರಡನೇಯದಾಗಿ ಗೃಹ ಬಳಕೆಯ ಪಾಲು ಶೇ.೨೧ ಪಡೆದಿರುತ್ತದೆ. ಡಿಸೆಂಬರ್ ೨೦೧೫ರವರೆಗೆ ಒಟ್ಟು ೨೩,೪೦,೫೬೩ ಭಾಗ್ಯಜ್ಯೋತಿ/ಕುಟೀರ ಜ್ಯೋತಿ ಸಂಪರ್ಕಗಳು ಮತ್ತು ೨೩,೪೪,೪೮೬ ನೀರಾವರಿ ಪಂಪ್‌ಸೆಟ್‌ಗಳು ಸಂಪರ್ಕಪಡೆದಿರುತ್ತವೆ. ವಿದ್ಯುತ್ ಮಾರ್ಗದ ಅಳವಡಿಕೆ ತೀರಾ ಸಾಧ್ಯವಿರದ ಕೆಲವೇ ಕೆಲವು ಹಳ್ಳಿಗಳನ್ನು

ಹೊರತುಪಡಿಸಿ ರಾಜ್ಯದಲ್ಲಿ ಎಲ್ಲಾ ಹಳ್ಳಿಗಳ ವಿದ್ಯುದೀಕರಣವು ಪೂರ್ಣಗೊಂಡಿದೆ. ಅಂತಹ ಹಳ್ಳಿಗಳಲ್ಲಿ ವಿದ್ಯುದೀಕರಣವನ್ನು ಕೈಗೆತ್ತಿಕೊಳ್ಳಲಾಗಿದ್ದು ಸಂಬಂಧಿಸಿದ ವಿದ್ಯುತ್ ಸರಬರಾಜು ಕಂಪನಿಗಳು ರಾಜೀವ್ ಗಾಂಧಿ ಗ್ರಾಮೀಣ ವಿದ್ಯುತ್ ಯೋಜನೆಯಡಿ ವಿಕೇಂದ್ರಿತ ವಿತರಣಾ ಉತ್ಪಾದನೆಯಿಂದ ಒದಗಿಸಲು ಪ್ರಯತ್ನಿಸುತ್ತಿವೆ.

ಕೃಷಿ ವಲಯಕ್ಕೆ ಉಚಿತ ವಿದ್ಯುತ್ ಪೂರೈಕೆಯ ಸಂಪೂರ್ಣ ವೆಚ್ಚವನ್ನು ಸಹಾಯಧನದ ಮೂಲಕ ರಾಜ್ಯ ಸರ್ಕಾರವು ಭರಿಸುತ್ತಿದೆ.೨೦೧೪-೧೫ರಲ್ಲಿ ರಾಜ್ಯ ಸರ್ಕಾರವು ಒದಗಿಸಿದ ಸಹಾಯಧನವು ರೂ.೬೨೦೦ ಕೋಟಿಗಳಾಗಿತ್ತು ಮತ್ತು ೨೦೧೫-೧೬ರಲ್ಲಿ (ಡಿಸೆಂಬರ್ ೨೦೧೫ರವರೆಗೆ) ಇದು ರೂ.೪೪೩೨.೧೮ ಕೋಟಿಯಾಗಿರುತ್ತದೆ.

ಸೌರ ಶಕ್ತಿಯನ್ನು ವ್ಯಾಪಕವಾಗಿ ದೊಡ್ಡ ಪ್ರಮಾಣದಲ್ಲಿ ಬಳಕೆಯ ಉತ್ತೇಜನಕ್ಕಾಗಿ ಸರ್ಕಾರವು ತನ್ನ ಸೌರ ನೀತಿ ೨೦೧೪-೨೦೨೧ಅನ್ನು ಪ್ರಕಟಿಸಿರುತ್ತದೆ. ನವೀಕರಿಸಬಹುದಾದ ಇಂಧನ ಮೂಲದ ಸ್ಥಾಪಿತ ಸಾಮರ್ಥ್ಯವು ೫೧೯೬ ಮೆಗಾ ವ್ಯಾಟ್ಸ್ ಆಗಿದ್ದು, ೨೦೧೫-೧೬ರಲ್ಲಿ (ಡಿಸೆಂಬರ್ ೨೦೧೫ರವರೆಗೆ) ಸಾಮರ್ಥ್ಯ ಸೇರ್ಪಡೆಯು ೩೫೫.೮೫ ಮೆಗಾ ವ್ಯಾಟ್ಸ್ ಆಗಿರುತ್ತದೆ.

### ನೂತನ ಜವಳಿ ನೀತಿ

ಕರ್ನಾಟಕ ರಾಜ್ಯವು, ರಾಜ್ಯ ಜವಳಿ ನೀತಿಯನ್ನು ಪ್ರಕಟಿಸಿ ದೇಶದಲ್ಲಿಯೇ "ನೂತನ ಜವಳಿನೀತಿ ೨೦೧೩-೧೮"ನ್ನು ಜಾರಿಗೆ ತಂದಪ್ರಥಮ ರಾಜ್ಯವಾಗಿದೆ. ಸುವರ್ಣ ವಸ್ತ್ರನೀತಿ ೨೦೦೮-೧೩ ಪೂರ್ಣಗೊಂಡನಂತರ "ನೂತನ ಜವಳಿನೀತಿ ೨೦೧೩-೧೮" ಜಾರಿಗೊಂಡಿದೆ. ಕರ್ನಾಟಕದಲ್ಲಿ ೨೦೧೫-೧೬ನೇ ಸಾಲಿನ ಡಿಸೆಂಬರ್ ೨೦೧೫ರ ಅಂತ್ಯಕ್ಕೆ ೩೮.೬೮ ಮಿಲಿಯನ್ ಮೀಟರ್‌ಗಳಷ್ಟು ಕೈಮಗ್ಗ ಜವಳಿಗಳನ್ನು ಉತ್ಪಾದಿಸಲಾಗಿದ್ದು, ೧.೦೬ ಲಕ್ಷ ಜನರಿಗೆ ಉದ್ಯೋಗವನ್ನು ಒದಗಿಸಿದೆ. ಆದರೆ ೨೦೧೪-೧೫ರಲ್ಲಿ ಇದು ೪೩.೫೮ ಮಿಲಿಯನ್ ಮೀಟರ್‌ಗಳಷ್ಟು ಕೈಮಗ್ಗ ಜವಳಿಗಳನ್ನು ಉತ್ಪಾದಿಸಿದ್ದು ೦.೮೫ ಲಕ್ಷ ಜನರಿಗೆ ಉದ್ಯೋಗವನ್ನು ಒದಗಿಸಿತ್ತು.

### ಕರ್ನಾಟಕ ಮೊಬೈಲ್ ಒನ್ ಯೋಜನೆ

ಕರ್ನಾಟಕ ಮೊಬೈಲ್ ಒನ್ ಯೋಜನೆಯಿಂದ "ಎಲ್ಲಿಂದಲಾದರೂ, ಯಾವ ಸಮಯದಲ್ಲಾದರೂ ಮತ್ತು ಹೇಗಾದರೂ" ಸರ್ಕಾರದ ಸೇವೆಗಳನ್ನು ಪಡೆಯ ಬಹುದಾಗಿದೆ.ಕರ್ನಾಟಕದ ಮೊಬೈಲ್ ಒನ್ ಯೋಜನೆಯು ೪೦೦೦ಕ್ಕೂ ಹೆಚ್ಚಿನ ಸೇವೆಗಳನ್ನು ಹೊಂದಿದ್ದು ರಾಷ್ಟ್ರದ ಪ್ರಥಮ ಮತ್ತು ವಿಶ್ವದ ಬೃಹತ್ ವಿವಿದೋದ್ದೇಶ ವ್ಯಾಪ್ತಿಯ ಮೊಬೈಲ್ ಆಡಳಿತ ವೇದಿಕೆಯಾಗಿರುವುದು ಒಂದು ವಿಶೇಷವಾದ ವೈಶಿಷ್ಟ್ಯವೆಂದು ಗುರುತಿಸಲ್ಪಟ್ಟಿದೆ. ಸರ್ಕಾರ ಮತ್ತು ಖಾಸಗಿ ವಲಯದ ನಾಗರೀಕ ಸೇವೆಗಳ ಏಕೀಕೃತ ಮೊಬೈಲ್ ವೇದಿಕೆ ಇದಾಗಿಸುತ್ತದೆ. ರಾಷ್ಟ್ರದಲ್ಲಿ ಯಾವುದೇ ಮೊಬೈಲ್ ಉಪಕರಣದಿಂದ "ಎಲ್ಲಿಂದಲಾದರೂ, ಯಾವ ಸಮಯದಲ್ಲಾದರೂ ಮತ್ತು ಹೇಗಾದರೂ"ಸರ್ಕಾರದಸೇವೆಗಳನ್ನು ೨೪x೭ ದಿನಗಳೂ ಪಡೆಯಬಹುದಾಗಿದೆ.

ಕಿಯೋನಿಕ್ಸ್ ಸಂಸ್ಥೆಯು ಮಾಹಿತಿ ತಂತ್ರಜ್ಞಾನ ಹೂಡಿಕೆ ವಲಯದ (ITIR) ಯೋಜನೆ ಕಾರ್ಯಗತಗೊಳಿಸುವುದರಲ್ಲಿ ಪ್ರಮುಖ ಪಾತ್ರವನ್ನು ನಿರ್ವಸುತ್ತಿದ್ದು, ಕರ್ನಾಟಕ ಹಾಗೂ ಭಾರತ ಸರ್ಕಾರದ ವತಿಯಿಂದ ಬೆಂಗಳೂರಿನ ಸಮೀಪವಿರುವ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಹತ್ತಿರ ಅಭಿವೃದ್ಧಿಗೊಳಿಸಲಾಗುತ್ತಿದೆ. ಮೊದಲ ಹಂತದ ಕಾರ್ಯವನ್ನು ರೂ.೧೬೦೦ ಕೋಟಿ ಹೂಡಿಕೆಯೊಂದಿಗೆ ಸುಮಾರು ೨೧೦೦ ಎಕರೆ ವ್ಯಾಪ್ತಿ ಪ್ರದೇಶದಲ್ಲಿ ಕೈಗೊಳ್ಳಲಾಗುತ್ತಿದೆ. ಒಂದು ಸಮಗ್ರ ನಗರದಲ್ಲಿ ಇತರೆ ಉಪ ಕೈಗಾರಿಕೆಗಳೊಂದಿಗೆ ಐಟಿ ಎಸ್.ಇ.ಝೆಡ್, ಎಲೆಕ್ಟ್ರಾನಿಕ್ ಹಾರ್ಡ್‌ವೇರ್ ಪಾರ್ಕ್‌ಗಳನ್ನು ಹೊಂದಲು ವಸತಿ ಯೋಜನೆ ನೀಡುವ ಉದ್ದೇಶವನ್ನು ಹೊಂದಿದೆ. ಉತ್ತಮವಾಗಿ ಕಾರ್ಯ ನಿರ್ವಹಿಸುವ ಮೂರು ಸಾರ್ವಜನಿಕ ಉದ್ದಿಮೆಗಳನ್ನು ಗುರುತಿಸಿ ಅವುಗಳ ಕಾರ್ಯಕ್ಷಮತೆಯನ್ನು ಪ್ರೇರೇಪಿಸಲು ಹಾಗೂ ಪ್ರಶಂಸಿಸಲು "ವಾರ್ಷಿಕ ಮುಖ್ಯಮಂತ್ರಿ ರತ್ನ ಪ್ರಶಸ್ತಿಯನ್ನು" ಪ್ರತಿವರ್ಷವೂ ಮೂರು ಅತ್ಯುತ್ತಮ ಸಾರ್ವಜನಿಕ ಉದ್ದಿಮೆಗಳಿಗೆ ನೀಡಲಾಗುತ್ತಿದೆ.೧) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಬೆಂಗಳೂರು, ೨) ಮಂಗಳೂರು ವಿದ್ಯುತ್ ಸರಬರಾಜು ಕಂಪೆನಿ ನಿಯಮಿತ ಮತ್ತು ೩) ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಇವು ಮೂರು ಪ್ರಸ್ತುತ ೨೦೧೫-೧೬ನೇ ಸಾಲಿನ ಪ್ರಶಸ್ತಿ ವಿಜೇತ ಮೂರು ಕಂಪೆನಿಗಳು.

### ಜಾಗತಿಕ ಬಂಡವಾಳ ಸಮಾವೇಶ - ಫೆಬ್ರುವರಿ ೨೦೧೬

ಯಶಸ್ವಿ ಹೂಡಿಕೆದಾರರ ಸಮಾವೇಶ ಇನ್ವೆಸ್ಟ್ ಕರ್ನಾಟಕ ೨೦೧೬ರ ಫೆಬ್ರುವರಿ ೩ ರಿಂದ ೫ ರವರೆಗೆ ನಡೆದಿರುತ್ತದೆ.ಸರ್ಕಾರವು ರೂ.೩ ಲಕ್ಷ ಕೋಟಿಗಿಂತ ಹೆಚ್ಚು ಹೂಡಿಕೆಯನ್ನು ಆಕರ್ಷಿಸಿದ್ದು ಇದರಲ್ಲಿ ರೂ.೧.೭೭ ಲಕ್ಷ ಕೋಟಿಗಳ ೧೦೮೦ ಯೋಜನೆಗಳಿಗೆ ಅನುಮೋದನೆಯನ್ನು ನೀಡಲಾಗಿರುತ್ತದೆ. ಇದು ೪.೮೨ ಲಕ್ಷ ವ್ಯಕ್ತಿಗಳಿಗೆ ಉದ್ಯೋಗವನ್ನು ಸೃಷ್ಟಿಸುವ ಸಾಮರ್ಥ್ಯವನ್ನು ಹೊಂದಿರುತ್ತದೆ. ವಿವಿಧ ವಲಯಗಳ ರೂ.೧.೨೭ ಲಕ್ಷ ಕೋಟಿಗಳ ಸಾಮರ್ಥ್ಯದ ಹೂಡಿಕೆಗೆ ಮತ್ತು ೧.೭೦ ಲಕ್ಷ ವ್ಯಕ್ತಿಗಳಿಗೆ ಉದ್ಯೋಗ ಸೃಷ್ಠಿಯ ೧೨೨ ತಿಳುವಳಿಕೆ/ಆಸಕ್ತಿ ಅಭಿವ್ಯಕ್ತಿ ಪತ್ರಗಳಿಗೆ ಸಹಿಯಾಗಿರುತ್ತದೆ.

### ಪ್ರವಾಸೋದ್ಯಮ

ರಾಜ್ಯಕ್ಕೆ ಭೇಟಿ ನೀಡುತ್ತಿರುವ ಪ್ರವಾಸಿಗರ ಸಂಖ್ಯೆಯು ಕ್ರಮವಾಗಿ ಏರಿಕೆಯಾಗುತ್ತಿದ್ದು ೨೦೧೧ರಲ್ಲಿ ೮.೪೧ ಕೋಟಿ ಇದ್ದದ್ದು ೨೦೧೪ರಲ್ಲಿ ೧೧.೮೨ ಕೋಟಿ ತಲುಪಿದ್ದು, ಶೇ.೪೦.೫೪ರಷ್ಟು ಏರಿಕೆಯಾಗಿದೆ. ರಾಜ್ಯದಲ್ಲಿ ಗಾಲ್ಫ್ ಟೂರಿಸಮ್‌ನ್ನು ಅಭಿವೃದ್ಧಿ ಪಡಿಸಲು ಇಲಾಖೆಯು ಆಸಕ್ತಿ ಹೊಂದಿದ್ದು ಇದಕ್ಕಾಗಿ ಖಾಸಗಿ ಗಾಲ್ಫ್ ಕ್ಲಬ್‌ಗಳಿಗೆ ಪ್ರವಾಸಿ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವ ಸಲುವಾಗಿ ಇಲಾಖೆಯು ಅನುದಾನ ಒದಗಿಸಿ ಉತ್ತೇಜಿಸುತ್ತಿದೆ. ೨೦೧೫ನೇ ಸಾಲಿನಲ್ಲಿ ಕರ್ನಾಟಕದ ಪ್ರವಾಸೋದ್ಯಮ ತಾಣವಾದ ಕೊಡಗು, ಕಾಂಡೆ ನಾಸ್ಟ್ ಟ್ರಾವೆಲರ್ ಇಂಡಿಯಾ ಸಂಸ್ಥೆಯ ೫ನೇ ಆವೃತ್ತಿಯ ರೀಡರ್ಸ್ ಛಾಯ್ಸ್ ವಿಭಾಗದಲ್ಲಿ ನೆಚ್ಚಿನ ಉದಯೋನ್ಮುಖ ತಾಣವಾಗಿ ಪ್ರಶಸ್ತಿಗೆ ಆಯ್ಕೆಯಾಗಿರುತ್ತದೆ.

ಸಮಗ್ರ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಈಗಾಗಲೇ ನೂತನ ಪ್ರವಾಸೋದ್ಯಮ ನೀತಿ ೨೦೧೫–೨೦ನ್ನು ಪ್ರಕಟಿಸಲಾಗಿದೆ. ಈ ವರ್ಷಗಳ ಅವಧಿಯಲ್ಲಿ ಹೆಚ್ಚಿನ ಬಂಡವಾಳವು ಹೂಡಿಕೆಯಾಗಲಿದ್ದು, ಹೊಸ ಉದ್ಯೋಗಗಳ ಸೃಷ್ಟಿಯಾಗಲಿದೆ. ಮೆಗಾ ಯೋಜನೆಗಳ ಅನುಷ್ಠಾನಕ್ಕಾಗಿ ಖಾಸಗಿ ವಲಯ ಅಥವಾ ಪಿ.ಪಿ.ಪಿ.ಯೋಜನೆಗಳಿಂದ ಹೂಡಿಕೆ ನಿರೀಕ್ಷಿಸಲಾಗುತ್ತಿದೆ. ವರ್ಲ್ಡ್ ಟ್ರಾವೆಲ್ ಅಂಡ್ ಟೂರಿಸಮ್ ಕೌನ್ಸಿಲ್ ವರದಿಯ ಪ್ರಕಾರ ಭಾರತದಲ್ಲಿ ಪ್ರವಾಸೋದ್ಯಮವು ಒಟ್ಟಾರೆ ಜಿ.ಡಿ.ಪಿ.ಯ ಶೇ.೬.೬ರಷ್ಟು ೨೦೧೨ನೇ ವರ್ಷದಲ್ಲಿ ಕೊಡುಗೆ ನೀಡಿರುತ್ತದೆ.

### ಕಾರ್ಮಿಕ ಉತ್ಪಾದಕತೆ

೨೦೧೧–೧೨ನೇ ಸಾಲಿಗೆ ಕರ್ನಾಟಕದಲ್ಲಿನ ಒಟ್ಟಾರೆ ಉತ್ಪಾದನೆ ರೂ.೧,೬೩,೩೪೦/–, ವಲಯವಾರು ಉತ್ಪಾದನೆಯನ್ನು ಗಮನಿಸಿದಾಗ ಅವುಗಳ ನಡುವೆ ಅಗಾಧ ಅಂತರವಿರುವುದು ಕಂಡು ಬರುತ್ತದೆ. ಸೇವಾ ವಲಯದಲ್ಲಿನ ಪ್ರತಿ ಕಾರ್ಮಿಕರ ಕಾರ್ಮಿಕ ಉತ್ಪಾದನೆ (ರೂ.೨,೮೮,೧೭೬/– ಪ್ರತಿ ಕಾರ್ಮಿಕನಿಗೆ) ಕೃಷಿ ವಲಯದ ಪ್ರತಿ ಕಾರ್ಮಿಕ ಉತ್ಪಾದನೆಗಿಂತ (ರೂ.೫೪,೦೨೮/– ಪ್ರತಿ ಕಾರ್ಮಿಕನಿಗೆ) ಐದು ಪಟ್ಟು ಹೆಚ್ಚಿರುತ್ತದೆ. ಅದೇ ವೇಳೆಗೆ ವಾಣಿಜ್ಯ ವಲಯದ ಕಾರ್ಮಿಕ ಉತ್ಪಾದನೆಯು (ರೂ.೨,೩೫,೮೪೩/– ಪ್ರತಿ ಕಾರ್ಮಿಕನಿಗೆ) ಕೃಷಿ ವಲಯದ ಉತ್ಪಾದನೆಗಿಂತ ನಾಲ್ಕು ಪಟ್ಟು ಹೆಚ್ಚಿರುತ್ತದೆ. ಹಣಕಾಸಿನ ಉಪವಲಯಗಳಲ್ಲಿ ಕೃಷಿ ವಲಯದ ಕಾರ್ಮಿಕ ಉತ್ಪಾದನೆಯು ಕಡಿಮೆಯಿದ್ದು, ಹಣಕಾಸು ಮಧ್ಯವರ್ತಿಗಳ ಮತ್ತು ವ್ಯಾಪಾರ ಸೇವೆಗಳ ವಲಯದಲ್ಲಿ ಹೆಚ್ಚು ಉತ್ಪಾದನೆಯಿರುತ್ತದೆ. ವಿದ್ಯುತ್ ಮತ್ತು ನೀರು ಸರಬರಾಜು ವಲಯವು ಹೆಚ್ಚು ಕಾರ್ಮಿಕ ಉತ್ಪಾದನೆ ರೂ.೮,೧೪,೨೭೪/–ನ್ನು ಹೊಂದಿರುತ್ತದೆ.

**ಆರ್ಥಿಕ ಗಣತಿ:** ಆರ್ಥಿಕ ಗಣತಿಯನ್ನು ೧೯೯೦ ರಲ್ಲಿ ನಡೆಸಲಾಯಿತು ಹಾಗೂ ಅಂತಿಮ ವರದಿಯಂತೆ, ರಾಜ್ಯದಲ್ಲಿ ೧೬.೯೪ ಲಕ್ಷ ಉದ್ದಿಮೆಗಳಿದ್ದುವು ಹಾಗೂ ಇದು ಇಡೀ ಭಾರತದಲ್ಲಿರುವ ಒಟ್ಟು ಉದ್ದಿಮೆಗಳ ಶೇ.೭.೮ ಆಗುತ್ತದೆ ಎಂದು ತೋರಿಸಿಕೊಟ್ಟಿತು. ಅತಿಹೆಚ್ಚು (೨೭.೯೫ ಲಕ್ಷ) ಉದ್ದಿಮೆಗಳು ಪಶ್ಚಿಮ ಬಂಗಾಳದಲ್ಲಿ ಇದ್ದುವು. ಇದರಲ್ಲಿ ರಾಜ್ಯವು ಭಾರತದಲ್ಲಿ ಆರನೇ ಸ್ಥಾನದಲ್ಲಿತ್ತು. ಈ ಉದ್ದಿಮೆಗಳಲ್ಲಿ ೫೦.೦೪ ಲಕ್ಷ ಜನರು ಕೆಲಸ ಮಾಡುತ್ತಿದ್ದರು. ಆದರೆ, ಮಹಾರಾಷ್ಟ್ರದಲ್ಲಿ ಈ ಸಂಖ್ಯೆ ೮೭.೦೩ ಲಕ್ಷಗಳು ಆಗಿತ್ತು.ಕರ್ನಾಟಕ ೫ನೇ ಸ್ಥಾನದಲ್ಲಿತ್ತು. ಒಂದು ಉದ್ದಿಮೆಯಲ್ಲಿದ್ದ ಸರಾಸರಿ ಕೆಲಸಗಾರರು ಮೂರು ಮಂದಿ ಆಗಿದ್ದರೆ (ಗ್ರಾಮೀಣ ಮೂರು, ನಗರ ಪ್ರದೇಶ ನಾಲ್ಕು).೧೬.೯೫ ಲಕ್ಷ ಉದ್ದಿಮೆಗಳಲ್ಲಿ ೧೪.೮೬ ಲಕ್ಷ (ಶೇ.೮೭.೭) ವ್ಯವಸಾಯೇತರ ಉದ್ದಿಮೆಗಳಾಗಿದ್ದುವು. ವ್ಯವಸಾಯ ಆಧಾರಿತ ಉದ್ದಿಮೆಗಳು ಆಂಧ್ರ ಪ್ರದೇಶದಲ್ಲಿ ೪.೩೦ ಲಕ್ಷಗಳಾದರೆ, ಪಶ್ಚಿಮ ಬಂಗಾಳದಲ್ಲಿ ೨೫.೩೩ ಲಕ್ಷ ಉದ್ದಿಮೆಗಳನ್ನು ಹೊಂದಿ ಪ್ರಥಮ ಸ್ಥಾನದಲ್ಲಿತ್ತು.

೧೯೯೮ರ ಆರ್ಥಿಕ ಗಣತಿ ಪ್ರಕಾರ ಕರ್ನಾಟಕದಲ್ಲಿ ೧೯.೧೨ ಲಕ್ಷ ಉದ್ದಿಮೆಗಳಿದ್ದು, ಇವು ಬೆಳೆ ಮತ್ತು ಪ್ಲಾಂಟೇಶನ್ ಉತ್ಪಾದನೆ ಹೊರತುಪಡಿಸಿ, ಇತರ ವಿವಿಧ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿದ್ದುವು ಹಾಗೂ ಸಾಮಾನ್ಯವಾಗಿ ೫೨.೫೩ ಲಕ್ಷ ಜನರು ಈ ಉದ್ದಿಮೆಗಳಲ್ಲಿ ಕೆಲಸ ಮಾಡುತ್ತಿದ್ದರು. ೧೯೯೮ರ ತಾತ್ಕಾಲಿಕ ಅಂಕಿಅಂಶಗಳ ಪ್ರಕಾರ, ಇಡೀ ಭಾರತದಲ್ಲಿದ್ದ ಒಟ್ಟು ೨೩.೮ ದಶಲಕ್ಷ ಉದ್ಯಮಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿದ್ದ ಉದ್ಯಮಗಳು ಶೇ.೮.೦೧ರಷ್ಟು ಆಗಿತ್ತು, ಇದರಲ್ಲಿ ಕೆಲಸ ಮಾಡುತ್ತಿದ್ದ ಕೆಲಸಗಾರರು, ಎಲ್ಲ ಉದ್ದಿಮೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ಸಂಖ್ಯೆಗೆ ಹೋಲಿಸಿದರೆ ಶೇ.೮.೧೫ ಆಗಿತ್ತು. ೧೯೯೦ರ ಸಂಖ್ಯೆಗಳಿಗೆ ಹೋಲಿಸಿದರೆ ಉದ್ದಿಮೆಗಳ ಸಂಖ್ಯೆ ಹಾಗೂ ಅವುಗಳಲ್ಲಿ ಕೆಲಸ ಮಾಡುತ್ತಿದ್ದವರ ಸಂಖ್ಯೆಯಲ್ಲಿ ಗಣನೀಯ ಏರಿಕೆ ಕಂಡುಬಂದಿತ್ತು ಎಂದು ೧೯೯೮ರ ಆರ್ಥಿಕ ಗಣತಿ ತಿಳಿಸುತ್ತದೆ. ಕರ್ನಾಟಕದಲ್ಲಿ, ೧೯೯೦ರಲ್ಲಿ ಇದ್ದ ೧೬.೯೪ ಲಕ್ಷ ಉದ್ದಿಮೆಗಳು ೧೯೯೮ರ ಹೊತ್ತಿಗೆ ೧೯.೧೨ ಲಕ್ಷಗಳಿಗೆ ಏರಿತು (ಶೇ.೧೨.೮೭ರಷ್ಟು) ಹಾಗೂ ಇವುಗಳಲ್ಲಿ ಸಾಮಾನ್ಯವಾಗಿ ಕೆಲಸ ಮಾಡುತ್ತಿದ್ದವರ ಸಂಖ್ಯೆ ೫೦.೮೩ ಲಕ್ಷಗಳಿಂದ ೫೨.೫೩ ಲಕ್ಷಗಳಿಗೆ (ಶೇ.೩.೩೫ರಷ್ಟು) ಏರಿತು.ದಿನಗೂಲಿ ಆಧಾರದ ಮೇಲೆ ನೇಮಕ ಮಾಡಿಕೊಂಡ ಕಾರ್ಮಿಕರ ಸಂಖ್ಯೆ ೧೯೯೦ರಲ್ಲಿ ೨೮.೭೨ ಲಕ್ಷಗಳಿದ್ದರೆ, ೧೯೯೮ರಲ್ಲಿ ೨೭.೨೮ ಲಕ್ಷಗಳಿಗೆ ಇಳಿಮುಖವಾಯಿತು.

೧೯೯೮ರಲ್ಲಿ ಕರ್ನಾಟಕದಲ್ಲಿದ್ದ ೧೯.೧೨ ಲಕ್ಷ ಉದ್ದಿಮೆಗಳಲ್ಲಿ ೧೬.೫೨ ಲಕ್ಷ ಉದ್ದಿಮೆಗಳು (ಶೇ.೮೬.೪ರಷ್ಟು) ವ್ಯವಸಾಯೇತರ ಚಟುವಟಿಕೆಗಳಲ್ಲಿ ತೊಡಗಿದ್ದುವು ಮತ್ತು ಉಳಿದ ೨.೬೦ ಲಕ್ಷ ಉದ್ದಿಮೆಗಳು (ಶೇ.೧೩.೬ರಷ್ಟು) ಬೆಳೆ ಮತ್ತು ಪ್ಲಾಂಟೇಶನ್ ಉತ್ಪಾದನೆ ಹೊರತುಪಡಿಸಿ ವ್ಯವಸಾಯ ಆಧಾರದ ಚಟುವಟಿಕೆಗಳಲ್ಲಿ ತೊಡಗಿದ್ದುವು. ಇದರ ಪ್ರಕಾರ ೧೯೯೦ ರಲ್ಲಿ ವ್ಯವಸಾಯೇತರ ಮತ್ತು ವ್ಯವಸಾಯ ಆಧಾರದ ಚಟುವಟಿಕೆಗಳು ಕ್ರಮವಾಗಿ ಶೇ.೮೭.೭ರಷ್ಟು ಮತ್ತು ಶೇ.೧೨.೩ರಷ್ಟು ಆಗಿತ್ತು. ೧೯೯೮ರಲ್ಲಿದ್ದ ಒಟ್ಟು ಉದ್ದಿಮೆಗಳಲ್ಲಿ ೧೧.೫೨ ಲಕ್ಷ ಉದ್ದಿಮೆಗಳು (ಶೇ.೬೦.೩ರಷ್ಟು) ಗ್ರಾಮೀಣ ಪ್ರದೇಶದಲ್ಲಿದ್ದುವು ಹಾಗೂ ಉಳಿದ ೭.೬೦ ಲಕ್ಷ ಉದ್ದಿಮೆಗಳು (ಶೇ.೩೯.೭ರಷ್ಟು) ನಗರ ಪ್ರದೇಶದಲ್ಲಿದ್ದುವು.ಇದರ ಪ್ರಕಾರ ೧೯೯೦ರಲ್ಲಿ ಶೇ.೬೧.೦ ಗ್ರಾಮೀಣ ಪ್ರದೇಶದಲ್ಲೂ ಹಾಗೂ ಶೇ.೩೯.೦ ಉದ್ದಿಮೆಗಳು ನಗರ ಪ್ರದೇಶದಲ್ಲೂ ಇದ್ದುವು. ಸ್ವಂತ ಖಾತೆ ಉದ್ದಿಮೆಗಳು (Own Account Establishments (OAE)), ಅಂದರೆ ಮನೆಯ ಮಂದಿ ಕೆಲಸ ಮಾಡಿ ನಡೆಸುತ್ತಿದ್ದ ಉದ್ದಿಮೆಗಳು ೧೧.೯೩ ಲಕ್ಷಗಳಿದ್ದು, ಇದು ಒಟ್ಟು ಉದ್ದಿಮೆಗಳ ಸಂಖ್ಯೆಯಲ್ಲಿ ಶೇ.೬೨.೪೦ರಷ್ಟು ಆಗಿತ್ತು. ಕನಿಷ್ಠ ಒಬ್ಬ ಹೊರಗಡೆಯ ಕೆಲಸಗಾರನನ್ನು ನೇಮಿಸಿಕೊಂಡಿದ್ದಂತಹ ಉದ್ದಿಮೆಗಳ ಸಂಖ್ಯೆ೭.೧೯ ಲಕ್ಷಗಳಾಗಿದ್ದು ಇದು ಒಟ್ಟು ಉದ್ದಿಮೆಗಳ ಸಂಖ್ಯೆಯ ಶೇ.೩೭.೬ರಷ್ಟು ಆಗಿತ್ತು. ೧೯೯೦ ಹಾಗೂ ೧೯೯೮ರಲ್ಲಿ ಸ್ವಂತ ಖಾತೆ ಉದ್ದಿಮೆಗಳು ಮತ್ತು ಇತರ ಉದ್ದಿಮೆಗಳು ಕ್ರಮವಾಗಿ ಶೇ.೧೧.೧ರಷ್ಟು ಮತ್ತು ಶೇ.೧೬.೨ರಷ್ಟು ಆಗಿತ್ತು. ಐದನೇ ಆರ್ಥಿಕ ಗಣತಿ (Economic Census) ಪ್ರಕಾರ ಕರ್ನಾಟಕದಲ್ಲಿದ್ದ ಒಟ್ಟು ೨೫.೩೯ ಲಕ್ಷ ಉದ್ದಿಮೆಗಳಲ್ಲಿ ೨೧.೪೮ ಲಕ್ಷ ಉದ್ದಿಮೆಗಳು (ಶೇ.೮೪.೬೨) ಕೃಷಿಯೇತರ ಚಟುವಟಿಕೆಗಳಲ್ಲಿ ಹಾಗೂ ಉಳಿದ ೩.೯೧ಲಕ್ಷ ಉದ್ದಿಮೆಗಳು (ಶೇ.೧೫.೩೮) ಕೃಷಿ ಚಟುವಟಿಕೆಗಳಲ್ಲಿ ತೊಡಗಿದ್ದವು. ಇದೇ ಸಾಲಿನಲ್ಲಿ ಕೃಷಿ ಹಾಗೂ ಕೃಷಿಯೇತರ ಚಟುವಟಿಕೆಗಳಲ್ಲಿ ೧೫.೯೦ ಲಕ್ಷ ಉದ್ದಿಮೆಗಳು (ಶೇ.೧೬೨.೬೩) ಗ್ರಾಮೀಣ ಪ್ರದೇಶದಲ್ಲೂ, ೯.೪೯ ಲಕ್ಷ ಉದ್ದಿಮೆಗಳು (ಶೇ.೩೭.೩೭) ನಗರ ಪ್ರದೇಶಗಳಲ್ಲಿ ಸ್ಥಾಪನೆಗೊಂಡಿದ್ದವು. ಉದ್ದಿಮೆಗಳು ಸ್ವಂತವಾಗಿದ್ದು, ಅವುಗಳನ್ನು ಕುಟುಂಬದ ಸದಸ್ಯರುಗಳಿಂದ ಚಾಲನೆ ಮಾಡುವಂತಿದ್ದು, ಅಂತಹ ಉದ್ಯಮಗಳನ್ನು ಸ್ವಂತ ಖಾತೆ

ಉದ್ಯಮಗಳೆಂದು ಕರೆಯಲಾಗುತ್ತದೆ. ಅಂತಹ ಉದ್ದಿಮೆಗಳ ಸಂಖ್ಯೆ ೧೬.೧೮ ಲಕ್ಷಗಳಾಗಿದೆ. ಕೊನೆ ಪಕ್ಷ ಒಬ್ಬ ಕಾರ್ಮಿಕನೊಳಗೊಂಡ ಉದ್ಯಮಗಳ ಸಂಖ್ಯೆ ೯.೨೧ ಲಕ್ಷಗಳಾಗಿದೆ. ೧೯೯೮-೨೦೦೫ರ ಅವಧಿಯಲ್ಲೂ ಸ್ವಂತ ಖಾತೆ ಉದ್ಯಮಗಳು ಹಾಗೂ ಕೊನೆ ಪಕ್ಷ ಒಬ್ಬ ಕಾರ್ಮಿಕನಿಂದ ಕೂಡಿದ ಉದ್ಯಮಗಳು ಕ್ರಮವಾಗಿ ಶೇ.೩೫.೬೭ ಹಾಗೂ ಶೇ.೨೮.೦೭ಕ್ಕೆ ಹೆಚ್ಚಾಗಿರುವುದು ಗಮನಾರ್ಹವಾಗಿದೆ. ಹೆಚ್ಚಿನ ವಿವರಗಳಿಗೆ ಕೋಷ್ಟಕ ೮.೩೨ ಅನ್ನು ನೋಡಿ.

**ಕೋಷ್ಟಕ ೮.೩೨: ೧೯೯೮ ಹಾಗೂ ೨೦೦೫ರ ಆರ್ಥಿಕ ಗಣತಿಯಂತೆ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿದ್ದ ಉದ್ಯಮಗಳು ಹಾಗೂ ಅವುಗಳಲ್ಲಿದ್ದ ಉದ್ಯೋಗಿಗಳ ವಿವರ.**

| ಉದ್ಯಮದ ವಿಧಗಳು ಮತ್ತು ಉದ್ಯೋಗ | ಗ್ರಾಮೀಣ | | | ನಗರ | | | ಒಟ್ಟು | | |
|---|---|---|---|---|---|---|---|---|---|
| | ೧೯೯೮ | ೨೦೦೫ | ಶೇ.ವಾರು ವ್ಯತ್ಯಾಸ | ೧೯೯೮ | ೨೦೦೫ | ಶೇ.ವಾರು ವ್ಯತ್ಯಾಸ | ೧೯೯೮ | ೨೦೦೫ | ಶೇ.ವಾರು ವ್ಯತ್ಯಾಸ |
| ೧. ಕೃಷಿ ಚಟುವಟಿಕೆ | | | | | | | | | |
| A.ಎಲ್ಲಾ ಉದ್ಯಮಗಳು | ೨೪೬೬೯೦ | ೩೭೭೩೭೯ | ೫೨.೯೮ | ೧೨೪೮೮ | ೧೩೨೨೩ | ೫.೮೯ | ೨೫೯೧೭೮ | ೩೯೦೬೦೨ | ೫೦.೭೧ |
| ೧) ಸ್ವಂತ ಖಾತೆ ಉದ್ಯಮಗಳು | ೧೭೨೨೩೬ | ೨೯೮೪೫೩ | ೭೩.೨೮ | ೯೦೨೯ | ೯೭೮೫ | ೮.೩೭ | ೧೮೧೨೬೫ | ೩೦೮೨೩೮ | ೭೦.೦೫ |
| ೨) ಕನಿಷ್ಟ ಒಬ್ಬ ಕೂಲಿ ಕಾರ್ಮಿಕನೊಂದಿಗೆ ಆರಂಭ | ೭೪೪೫೪ | ೭೮೯೨೬ | ೬.೦೧ | ೩೪೫೯ | ೩೪೩೮ | -೦.೬೧ | ೭೭೯೧೩ | ೮೨೩೬೪ | ೫.೭೧ |
| B.ಉದ್ಯಮಗಳಲ್ಲಿ ಸಾಮಾನ್ಯವಾಗಿ ಕೆಲಸ ಮಾಡುವ ವ್ಯಕ್ತಿಗಳು | | | | | | | | | |
| ೧)ಸ್ವಂತ ಖಾತೆ ಉದ್ಯಮಗಳು | ೩೭೯೦೩೯ | ೪೮೭೨೯೦ | ೨೮.೫೬ | ೧೭೫೮೨ | ೧೪೨೧೧ | -೧೯.೧೭ | ೩೯೬೬೨೧ | ೫೦೧೫೦೧ | ೨೬.೪೪ |
| ೨) ಕನಿಷ್ಟ ಒಬ್ಬ ಕೂಲಿ ಕಾರ್ಮಿಕನೊಂದಿಗೆ ಆರಂಭ | ೩೧೧೪೯೮ | ೨೯೫೭೫೫ | -೫.೦೫ | ೧೪೫೨೭ | ೧೬೨೩೫ | ೧೧.೭೬ | ೩೨೬೦೨೫ | ೩೧೧೯೯೦ | -೪.೩೦ |
| ೩) ಒಟ್ಟು | ೬೯೦೫೩೭ | ೭೮೩೦೪೫ | ೧೩.೪೦ | ೩೨೧೦೯ | ೩೦೪೪೬ | -೫.೧೮ | ೭೨೨೬೪೬ | ೮೧೩೪೯೧ | ೧೨.೫೭ |
| ೪) ಕೂಲಿ ಕಾರ್ಮಿಕರು | ೨೦೨೩೩೪ | ೧೮೦೪೫೧ | -೧೦.೮೨ | ೧೦೩೧೦ | ೧೨೮೨೨ | ೨೪.೩೬ | ೨೧೨೬೪೪ | ೧೯೩೨೭೩ | -೯.೧೧ |
| ೨. ಕೃಷಿಯೇತರ ಚಟುವಟಿಕೆ | | | | | | | | | |
| A.ಎಲ್ಲಾ ಉದ್ಯಮಗಳು | ೯೦೫೪೦೨ | ೧೨೧೨೭೭೩ | ೩೩.೯೫ | ೭೪೭೦೫೧ | ೯೩೫೪೯೯ | ೨೫.೨೩ | ೧೬೫೨೪೫೩ | ೨೧೪೮೨೭೨ | ೩೦.೦೧ |
| ೧) ಸ್ವಂತ ಖಾತೆ ಉದ್ಯಮಗಳು | ೫೯೫೧೭೫ | ೮೦೯೨೪೦ | ೩೫.೯೭ | ೪೧೬೦೬೦ | ೫೦೦೩೯೪ | ೨೦.೨೭ | ೧೦೧೧೨೩೫ | ೧೩೦೯೬೩೪ | ೨೯.೫೧ |
| ೨) ಕನಿಷ್ಟ ಒಬ್ಬ ಕೂಲಿ ಕಾರ್ಮಿಕನೊಂದಿಗೆ ಆರಂಭ | ೩೧೦೨೨೭ | ೪೦೩೫೩೩ | ೩೦.೦೮ | ೩೩೦೯೯೧ | ೪೩೫೧೦೫ | ೩೧.೪೫ | ೬೪೧೨೧೮ | ೮೩೮೬೩೮ | ೩೦.೭೯ |
| B. ಉದ್ಯಮಗಳಲ್ಲಿ ಸಾಮಾನ್ಯವಾಗಿ ಕೆಲಸ ಮಾಡುವ ವ್ಯಕ್ತಿಗಳು | | | | | | | | | |
| ೧)ಸ್ವಂತ ಖಾತೆ ಉದ್ಯಮಗಳು | ೮೮೨೬೦೩ | ೧೦೪೨೯೦೭ | ೧೮.೧೬ | ೬೫೮೪೦೩ | ೬೨೩೪೩೮ | -೫.೩೧ | ೧೫೪೧೦೦೬ | ೧೬೬೬೩೪೫ | ೮.೧೩ |
| ೨) ಕನಿಷ್ಟ ಒಬ್ಬ ಕೂಲಿ ಕಾರ್ಮಿಕನೊಂದಿಗೆ ಆರಂಭ | ೧೧೮೪೨೪೩ | ೧೫೬೫೧೭೧ | ೩೨.೧೭ | ೧೮೦೫೫೪೪ | ೨೩೦೦೫೭೯ | ೨೭.೪೨ | ೨೯೮೯೭೮೭ | ೩೮೬೫೭೫೦ | ೨೯.೩೦ |
| ೩) ಒಟ್ಟು | ೨೦೬೬೮೪೬ | ೨೬೦೮೦೭೮ | ೨೬.೧೯ | ೨೪೬೩೯೪೭ | ೨೯೨೪೦೧೭ | ೧೮.೬೭ | ೪೫೩೦೭೯೩ | ೫೫೩೨೦೯೫ | ೨೨.೧೦ |
| ೪) ಕೂಲಿ ಕಾರ್ಮಿಕರು | ೯೯೬೪೯೩ | ೧೩೦೮೭೮೬ | ೩೧.೩೪ | ೧೫೧೯೨೩೫ | ೧೯೩೩೦೬೩ | ೨೭.೨೪ | ೨೫೧೫೭೨೮ | ೩೨೪೧೮೪೯ | ೨೮.೮೬ |
| ೩. ಕೃಷಿ ಮತ್ತು ಕೃಷಿಯೇತರ ಚಟುವಟಿಕೆ | | | | | | | | | |
| A. ಎಲ್ಲಾ ಉದ್ಯಮಗಳು | ೧೧೫೨೦೯೨ | ೧೫೯೦೧೫೨ | ೩೮.೦೨ | ೭೫೯೫೩೯ | ೯೪೮೭೨೨ | ೨೪.೯೧ | ೧೯೧೧೬೩೧ | ೨೫೩೮೮೭೪ | ೩೨.೮೧ |
| ೧) ಸ್ವಂತ ಖಾತೆ ಉದ್ಯಮಗಳು | ೭೬೭೪೧೧ | ೧೧೦೭೬೯೩ | ೪೪.೩೪ | ೪೨೫೦೮೯ | ೫೧೦೧೭೯ | ೨೦.೦೨ | ೧೧೯೨೫೦೦ | ೧೬೧೭೮೭೨ | ೩೫.೬೭ |
| ೨) ಕನಿಷ್ಟ ಒಬ್ಬ ಕೂಲಿ ಕಾರ್ಮಿಕನೊಂದಿಗೆ ಆರಂಭ | ೩೮೪೬೮೧ | ೪೮೨೪೫೯ | ೨೫.೪೨ | ೩೩೪೪೫೦ | ೪೩೮೫೪೩ | ೩೧.೧೨ | ೭೧೯೧೩೧ | ೯೨೧೦೦೨ | ೨೮.೦೭ |
| B. ಉದ್ಯಮಗಳಲ್ಲಿ ಸಾಮಾನ್ಯವಾಗಿ ಕೆಲಸ ಮಾಡುವ ವ್ಯಕ್ತಿಗಳು | | | | | | | | | |
| ೧)ಸ್ವಂತ ಖಾತೆ ಉದ್ಯಮಗಳು | ೧೨೬೧೬೪೨ | ೧೫೩೦೧೯೭ | ೨೧.೨೯ | ೬೭೫೯೮೫ | ೬೩೭೬೪೯ | -೫.೬೭ | ೧೯೩೭೬೨೭ | ೨೧೬೭೮೪೬ | ೧೧.೮೮ |
| ೨) ಕನಿಷ್ಟ ಒಬ್ಬ ಕೂಲಿ ಕಾರ್ಮಿಕನೊಂದಿಗೆ ಆರಂಭ | ೧೪೯೫೭೪೧ | ೧೮೬೦೯೨೬ | ೨೪.೪೧ | ೧೮೨೦೦೭೧ | ೨೩೧೬೮೧೪ | ೨೭.೨೯ | ೩೩೧೫೮೧೨ | ೪೧೭೭೭೪೦ | ೨೬.೦೨ |
| ೩) ಒಟ್ಟು | ೨೭೫೭೩೮೩ | ೩೩೯೧೧೨೩ | ೨೨.೯೮ | ೨೪೯೬೦೫೬ | ೨೯೫೪೪೬೩ | ೧೮.೩೭ | ೫೨೫೩೪೩೯ | ೬೩೪೫೫೮೬ | ೨೦.೭೯ |

| | | | | | | | | | |
|---|---|---|---|---|---|---|---|---|---|
| ೪) ಕೂಲಿ ಕಾರ್ಮಿಕರು | ೧೧೯೮೮.೨೭ | ೧೪೮೯.೨೩೭ | ೨೪.೨೨ | ೧೫೨೯೫೪೫ | ೧೯೪೫೮೫೫ | ೨೭.೨೨ | ೨೭೨೮೩೭೨ | ೩೪೩೫೦೯೨ | ೨೫.೯೦ |
| ಕೇಂದ್ರೀಕರಿಸಿದ ಘಟಕಗಳು (Concentration of Units) | | | | | | | | | |
| ಚ.ಕಿ.ಗೆ | ೦೬ | ೦೮ | ೩೩.೩೩ | ೦೪ | ೦೫ | ೨೫.೦೦ | ೧೦ | ೧೩ | ೩೦.೦೦ |
| ಸಾವಿರ ಜನಸಂಖ್ಯೆಗೆ | ೩೭ | ೪೬ | ೨೪.೩೨ | ೪೮ | ೫೩ | ೧೦.೪೩ | ೪೩ | ೪೮ | ೧೧೬.೩ |
| ಸರಾಸರಿ ಕಾರ್ಮಿಕರ ಸಂಖ್ಯೆ/ ಉದ್ದಿಮೆಗಳು. | ೦೨ | ೦೨ | - | ೦೩ | ೦೩ | - | ೦೩ | ೦೩ | - |

## ಉದ್ಯೋಗ

ನಿರುದ್ಯೋಗ ನಿರ್ಮೂಲನೆ ಮತ್ತು ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸುವುದು ಯೋಜನೆಗಳ ಪ್ರಮುಖ ಉದ್ದೇಶಗಳು. ಉದ್ಯೋಗ ವಿನಿಮಯ ಕೇಂದ್ರಗಳ ಜೀವಂತ ದಾಖಲೆಗಳಲ್ಲಿ (ಲೈವ್ ರಿಜಿಸ್ಟರ್) ಆಗುವ ನೋಂದಣಿಗಳ ಸಂಖ್ಯೆ ನಿರುದ್ಯೋಗ ಮಟ್ಟವನ್ನು ಸೂಚಿಸುತ್ತದೆ ಎಂದೇ ಪರಿಗಣಿಸಲಾಗುತ್ತದೆ. ರಾಜ್ಯದಲ್ಲಿ ಇದ್ದ ನೋಂದಣಿಗಳ ಸಂಖ್ಯೆ ಈ ರೀತಿಯಾಗಿ ಇತ್ತು. ೧೯೮೧ ರಲ್ಲಿ ೬,೩೯,೮೯೦, ೧೯೯೧ರಲ್ಲಿ ೧೩,೨೭,೭೬೧, ೧೯೯೩ರಲ್ಲಿ ೧೫.೧೧ ಲಕ್ಷ, ೧೯೯೯ ರಲ್ಲಿ ೧೮.೧೮ ಲಕ್ಷ, ೨೦೦೪ರಲ್ಲಿ ೧೭.೪೩೧ಲಕ್ಷ, ಮತ್ತು ೨೦೧೨ರಲ್ಲಿ ೪೬.೭೩ ಲಕ್ಷಗಳಾಗಿತ್ತು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ನೋಂದಣಿ ಮಾಡಿರುವವರೆಲ್ಲರೂ ನಿರುದ್ಯೋಗಿಗಳಲ್ಲ ಹಾಗೂ ಉದ್ಯೋಗದಲ್ಲಿರುವವರೆಲ್ಲರೂ ಉದ್ಯೋಗ ವಿನಿಮಯ ಕೇಂದ್ರದ ಮೂಲಕವೇ ಉದ್ಯೋಗ ಪಡೆದಿರುವುದಿಲ್ಲ. ೨೦೧೨ರ ಫೆಬ್ರವರಿ ಅಂತ್ಯಕ್ಕೆ ರಾಜ್ಯದಲ್ಲಿ ೪೦ ಉದ್ಯೋಗ ವಿನಿಮಯ ಕೇಂದ್ರಗಳಿದ್ದುವು, ಇವುಗಳಲ್ಲಿ ೨೯ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರಗಳು, ಒಂದು ಯೋಜನಾ ಉದ್ಯೋಗ ವಿನಿಮಯ ಕೇಂದ್ರ, ಒಂದು ಉಪ-ಪ್ರಾದೇಶಿಕ ಉದ್ಯೋಗ ವಿನಿಮಯ ಕೇಂದ್ರ, ಒಂದು ವಿಶಿಷ್ಟ ವೃತ್ತಿ ಮತ್ತು ಕಾರ್ಯನಿರ್ವಾಹಕ ಉದ್ಯೋಗ ವಿನಿಮಯ ಕೇಂದ್ರ, ಒಂದು ಪ.ಜಾ./ವರ್ಗಗಳ ವಿಶೇಷ ಉದ್ಯೋಗ ವಿನಿಮಯ ಕೇಂದ್ರ, ಒಂದು ಅಂಗವಿಕಲರ ಉದ್ಯೋಗ ವಿನಿಮಯ ಕೇಂದ್ರ, ಆರು ವಿಶ್ವವಿದ್ಯಾನಿಲಯ ಉದ್ಯೋಗ ಮಾಹಿತಿ ಮತ್ತು ಮಾರ್ಗದರ್ಶನ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ದೇಶದ ಎಲ್ಲಾ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಜೂನ್ ೨೦೦೪ ರಲ್ಲಿ ಜೀವಂತ ದಾಖಲೆಗಳಲ್ಲಿ ನೋಂದಣಿ ಮಾಡಿಸಿದ್ದವರ ಸಂಖ್ಯೆ ೪೦೯.೨೦ ಲಕ್ಷಗಳು. ೨೦೦೩-೦೪ ರಲ್ಲಿ ಸಂಘಟಿತ ವಲಯದಲ್ಲಿದ್ದ ಒಟ್ಟು ಉದ್ಯೋಗಿಗಳ ಸಂಖ್ಯೆ ೧೮.೨೦ ಲಕ್ಷಗಳಾಗಿದ್ದು, ಇದರಲ್ಲಿ ೧೦.೬೩ ಲಕ್ಷಗಳು ಸಾರ್ವಜನಿಕ ಉದ್ದಿಮೆಗಳಲ್ಲಿ ಹಾಗೂ ೧೨.೪೮ ಲಕ್ಷ ಖಾಸಗಿ ವಲಯದಲ್ಲಿದ್ದರು. ಮಾರ್ಚ್ ೨೦೦೩ರ ಅಂತ್ಯಕ್ಕೆ ಸಂಘಟಿತ ವಲಯದಲ್ಲಿ ೧೮.೫೦ ಲಕ್ಷ ಉದ್ಯೋಗಿಗಳು ಹಾಗೂ ಮಾರ್ಚ್ ೨೦೦೪ರ ಅಂತ್ಯಕ್ಕೆ ೧೮.೨೦ಲಕ್ಷ ಉದ್ಯೋಗಿಗಳು ಹಾಗೂ ೨೦೧೨ರ ಸೆಪ್ಟೆಂಬರ್ ಅಂತ್ಯಕ್ಕೆ ೨೩.೧೧ಲಕ್ಷ ಉದ್ಯೋಗಿಗಳು ಇದ್ದರು. ಕೋಷ್ಟಕ ೮.೩೩ರಲ್ಲಿ ಸಂಘಟಿತ ವಲಯದಲ್ಲಿದ್ದ ಉದ್ಯೋಗಿಗಳ ವಿವರಗಳನ್ನು ಹಾಗೂ ಸಾರ್ವಜನಿಕ ಮತ್ತು ಖಾಸಗಿ ವಲಯಗಳಲ್ಲಿನ ಉದ್ಯೋಗದ ವಿವರಗಳನ್ನು ಕೋಷ್ಟಕ ೮.೩೪ರಲ್ಲಿ ನೀಡಲಾಗಿದೆ.

ಕರ್ನಾಟಕ ಸರ್ಕಾರವು ಕೌಶಲ್ಯ ಅಭಿವೃದ್ಧಿಯನ್ನು ರಾಜ್ಯ ಸರ್ಕಾರದ 'ಅಭಿವೃದ್ಧಿ ನೀತಿಯನ್ನಾಗಿಸಿ' ೨೦೦೮-೦೯ ರಿಂದ ಕಾರ್ಯಾರಂಭಮಾಡಿತು. ಕರ್ನಾಟಕ ಸರ್ಕಾರವು ರಾಜ್ಯ ಕೌಶಲ್ಯ ಮಂಡಳಿಯನ್ನು ನೇಮಿಸಿ ಅದರಲ್ಲಿ ಕೈಗಾರಿಕೆ, ವ್ಯಾಪಾರ ಮತ್ತು ತಂತ್ರಜ್ಞಾನ ಕ್ಷೇತ್ರದ ಪ್ರತಿನಿಧಿಗಳನ್ನೊಳಗೊಂಡಿದ್ದು, ಕೌಶಲ್ಯ ನೀತಿ ನಿರೂಪಣೆಗೆ ಮಹತ್ವ ನೀಡಿದೆ. ರಾಜ್ಯ ಕೌಶಲ್ಯ ಮಂಡಳಿಯು ರಾಷ್ಟ್ರೀಯ ಕೌಶಲ್ಯ ನಿಗಮದ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಪ್ರಾಶಸ್ತ್ಯವನ್ನು ನೀಡಿದೆ. ೨೦೦೮ರಲ್ಲಿ ಕರ್ನಾಟಕ ಸರ್ಕಾರವು ಕರ್ನಾಟಕ ವೃತ್ತಿ ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿ ನಿಗಮ ನಿಯಮಿತವನ್ನು ಕಂಪನಿ ಕಾಯ್ದೆ ೧೯೫೬ರ ಮಾರ್ಗಸೂಚಿಯಲ್ಲಿ ಸ್ಥಾಪಿಸಿ ೧೦ ಲಕ್ಷ ಯುವಕರಿಗೆ ೫ ವರ್ಷಗಳಲ್ಲಿ ಕೌಶಲ್ಯ ಶಿಕ್ಷಣವನ್ನು ನೀಡಿ 'ಉದ್ಯೋಗ ಮುಖಿಗಳನ್ನಾಗಿ' ಮಾಡುವ ನಿರ್ಧಾರವನ್ನು ಕೈಗೊಂಡಿತು. ಕರ್ನಾಟಕ ವೃತ್ತಿ ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿ ನಿಗಮ ನಿಯಮಿತವು ಈ ಕಾರ್ಯದಲ್ಲಿ ಪೂರ್ಣಪ್ರಮಾಣದಲ್ಲಿ ಸಕ್ರಿಯವಾಗಿ ಅರ್ಪಣೆಗೊಂಡು ಈ ಕೆಳಕಂಡ ಕಾರ್ಯಕ್ರಮಗಳ ಮೂಲಕ ಕಾರ್ಯನಿರ್ವಹಿಸುತ್ತಿದೆ.

## ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರಗಳು

ಕರ್ನಾಟಕ ವೃತ್ತಿ ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿ ನಿಗಮ ನಿಯಮಿತವು ಕರ್ನಾಟಕ ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳನ್ನು ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರಗಳನ್ನಾಗಿ ಪರಿವರ್ತಿಸಿ ಅವುಗಳ ಮೂಲಕ ಉದ್ಯೋಗದಾತರಿಗೆ ಮತ್ತು ಉದ್ಯೋಗಾಸಕ್ತರಿಗೆ ಮೌಲ್ಯವರ್ಧಿತ ಸೇವೆಯನ್ನು ನೀಡುವ ಗುರಿಯೊಂದಿಗೆ ಕಾರ್ಯಾರಂಭ ಮಾಡಿದೆ. ಪ್ರಸ್ತುತವಾಗಿ ಉದ್ಯೋಗ ಮಾರುಕಟ್ಟೆಯಲ್ಲಿರುವ ಉದ್ಯೋಗಾವಕಾಶಗಳ ಬೇಡಿಕೆ ಮತ್ತು ಉದ್ಯೋಗಾಸಕ್ತರ ನೀಡಿಕೆ ನಡುವೆ ಬಹುದೊಡ್ಡ ಕಂದಕ ಏರ್ಪಟ್ಟಿದ್ದು ಅದಕ್ಕೆ ಪ್ರಮುಖ ಕಾರಣ ಕೌಶಲ್ಯಕ್ಕೆ ಒತ್ತು ನೀಡದ ಶಿಕ್ಷಣ ವ್ಯವಸ್ಥೆಯಾಗಿದೆ ಎಂಬುದು ತಜ್ಞರ ಅಭಿಪ್ರಾಯ. ಪ್ರತಿ ವರ್ಷವೂ ಬಹಳ ದೊಡ್ಡ ಸಂಖ್ಯೆಯ ಯುವಕರು ಉದ್ಯೋಗ ಮಾರುಕಟ್ಟೆಯಲ್ಲಿ ನೋಂದಾಯಿಸಿಕೊಂಡಿದ್ದರೂ, ಕೌಶಲ್ಯಗಳ ಕೊರತೆಯಿಂದ ಉತ್ತಮ ಉದ್ಯೋಗಾವಕಾಶಗಳು ದೊರೆತಿರುವುದಿಲ್ಲ. ಕರ್ನಾಟಕ ಸರ್ಕಾರವು ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರಗಳ ಮೂಲಕ ತರಬೇತಿಗೆ ಆದ್ಯತೆ ನೀಡಿ ಅವಶ್ಯ ಕೌಶಲ್ಯ ತರಬೇತಿಯನ್ನು ಉದ್ಯೋಗಾಸಕ್ತರಿಗೆ ನೀಡುವ ಕಾರ್ಯದಲ್ಲಿ ನಿರತವಾಗಿದೆ.

ಪ್ರಸ್ತುತವಾಗಿ ೮ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರಗಳು ಕರ್ನಾಟಕ ರಾಜ್ಯದ ಮಂಗಳೂರು, ಬಿಜಾಪುರ, ಮಂಡ್ಯ, ಚಾಮರಾಜನಗರ, ಹುಬ್ಬಳ್ಳಿ, ಕೋಲಾರ, ಬಳ್ಳಾರಿ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ಪೂರ್ಣಪ್ರಮಾಣದ ಸಂಪನ್ಮೂಲಗಳೊಂದಿಗೆ ಕಾರ್ಯನಿರ್ವಹಿಸುತ್ತಿವೆ. ೨ನೆಯ ಹಂತದಲ್ಲಿ ೬ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರಗಳನ್ನು ಗುರುತಿಸಿದ್ದು, ಅವು ಚಿತ್ರದುರ್ಗ, ಹಾವೇರಿ, ಬಾಗಲಕೋಟೆ, ರಾಮನಗರ, ಕೊಪ್ಪಳ, ಶಿವಮೊಗ್ಗ, ಇಲ್ಲಿ ಕೊನೆಯ ಹಂತದ ನಿರ್ಮಾಣದಲ್ಲಿವೆ. ಪ್ರತಿಯೊಂದು ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರಕ್ಕೆ ೩೦ ಲಕ್ಷ ರೂಗಳ ಅನುದಾನವನ್ನು ಕರ್ನಾಟಕ ವೃತ್ತಿ ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿ ನಿಗಮ ನಿಯಮಿತ ನೀಡಿದೆ.

ಪ್ರತಿ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರದಲ್ಲಿ ಎಲ್ಲಾ ಅವಶ್ಯ ಸೌಲಭ್ಯಗಳಾದ ಸ್ವಾಗತ ಸ್ಥಳ, ನೋಂದಣಿ ಕೇಂದ್ರ, ಮೌಲ್ಯಮಾಪನ ಕೇಂದ್ರ, ತರಬೇತಿ ಕೊಠಡಿಗಳು, ಕಂಪ್ಯೂಟರ್ ಪ್ರಯೋಗಾಲಯ, ದಾಖಲೆಗಳ ಕೊಠಡಿ, ಮೌಖಿಕ ಸಂದರ್ಶನ ಕೊಠಡಿ, ಅಧಿಕಾರಿಗಳ ಮತ್ತು ಸಿಬ್ಬಂದಿ ಕೊಠಡಿ ಮತ್ತು ಇನ್ನಿತರೆ ಸೌಲಭ್ಯಗಳನ್ನೊಳಗೊಂಡಿವೆ. ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರಗಳಲ್ಲಿ ಉದ್ಯೋಗ ಮೇಳಗಳನ್ನು ನಡೆಸಲು ಅವಕಾಶ ಕಲ್ಪಿಸಲಾಗಿದೆ. ಪ್ರತಿಯೊಂದು ಮಾನವ ಸಂಪನ್ಮೂಲ ಕೇಂದ್ರವು ೩೦೦ ಸ್ಕ್ವೇರ್ ಮೀಟರ್ ಜಾಗದಲ್ಲಿ ಸರ್ಕಾರಿ ಹಾಗೂ ಖಾಸಗಿ ಸಹಭಾಗಿತ್ವದಲ್ಲಿ ಕಾರ್ಯನಿರ್ವಹಿಸುತ್ತಿದೆ.

೨೦೧೪-೧೫ನೇ ಸಾಲಿನಲ್ಲಿ ೧೧ ಉದ್ಯೋಗ ವಿನಿಮಯ ಕೇಂದ್ರಗಳನ್ನು ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರಗಳನ್ನಾಗಿ ಪರಿವರ್ತಿಸುವ ಗುರಿಯನ್ನು ಕರ್ನಾಟಕ ವೃತ್ತಿ ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿ ನಿಗಮ ನಿಯಮಿತ ಹೊಂದಿದ್ದು, ಆ ಜಿಲ್ಲೆಗಳಾದ ಬೆಳಗಾಂ, ದಾವಣಗೆರೆ, ಉಡುಪಿ, ಹಾಸನ, ತುಮಕೂರು, ಚಿಕ್ಕಬಳ್ಳಾಪುರ, ಗದಗ, ಮಡಿಕೇರಿ, ಬೀದರ್, ಚಿಕ್ಕಮಗಳೂರು ಮತ್ತು ರಾಯಚೂರು ಇವುಗಳಲ್ಲಿ ಕಾರ್ಯ ಪ್ರಗತಿಯಲ್ಲಿದೆ. ಈ ಕೇಂದ್ರಗಳಿಗೆ ಹೊರಗುತ್ತಿಗೆ ಆಧಾರಿತ ಸಿಬ್ಬಂದಿ ನೇಮಕ ಮಾಡಿ ಫೆಬ್ರುವರಿ ೨೦೧೫ ರಿಂದ ಕಾರ್ಯಾರಂಭ ಮಾಡಲು ಯೋಜಿಸಲಾಗಿದೆ.ಇದೇ ಅಲ್ಲದೆ ರಾಜ್ಯದ ರಾಜಧಾನಿಯಾದ ಬೆಂಗಳೂರು ಹಾಗೂ ಮೈಸೂರಿನಲ್ಲಿ ೨ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರಗಳನ್ನು ಸ್ಥಾಪಿಸಲು ಕರ್ನಾಟಕ ವೃತ್ತಿ ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿ ನಿಗಮ ನಿಯಮಿತ ಯೋಜಿಸಿದೆ.

**ಕೋಷ್ಟಕ ೮.೩೩: ಕರ್ನಾಟಕದಲ್ಲಿ ೧೯೭೦-೭೧ ರಿಂದ ೨೦೧೫-೧೬ರ ವರೆಗೆ ಸಂಘಟಿತ ವಲಯದಲ್ಲಿನ ಉದ್ಯೋಗದ ವಿವರ (ಸಾವಿರಗಳಲ್ಲಿ)**

| ವರ್ಷ | ಸಾರ್ವಜನಿಕ ವಲಯ | | ಖಾಸಗಿ ವಲಯ | | ಸಾರ್ವಜನಿಕ ಮತ್ತು ಖಾಸಗಿ ವಲಯ | |
|---|---|---|---|---|---|---|
| | ಒಟ್ಟು | ಮಹಿಳೆಯರು | ಒಟ್ಟು | ಮಹಿಳೆಯರು | ಒಟ್ಟು | ಮಹಿಳೆಯರು |
| ೧೯೭೦-೭೧ | ೫೫೮.೭ | ೫೨.೬ | ೨೭೪.೨ | ೫೬.೭ | ೮೩೨.೯ | ೧೦೯.೩ |
| ೧೯೭೫-೭೬ | ೬೬೯.೧ | ೬೫.೬ | ೩೦೫.೫ | ೫೨.೫ | ೯೭೪.೬ | ೧೧೮.೧ |
| ೧೯೮೦-೮೧ | ೭೯೪.೨ | ೯೦.೦ | ೩೪೮.೩ | ೫೫.೫ | ೧೧೪೨.೫ | ೧೪೫.೫ |
| ೧೯೮೫-೮೬ | ೯೨೬.೨ | ೧೨೪.೦ | ೩೭೨.೨ | ೬೩.೯ | ೧೨೯೦.೪ | ೧೯೭.೯ |
| ೧೯೯೦-೯೧ | ೧೦೧೭.೩ | ೧೬೦.೦ | ೪೩೦.೦ | ೯೨.೧ | ೧೪೪೭.೩ | ೨೫೨.೧ |
| ೧೯೯೫-೯೬ | ೧೦೫೮.೪ | ೧೯೯.೦ | ೭೦೦೯ | ೨೭೩.೮ | ೧೭೫೯.೩ | ೪೭೨.೮ |
| ೨೦೦೦-೦೧ | ೧೧೧೨.೬ | ೨೫೪.೫ | ೭೬೭.೧ | ೩೧೪.೨ | ೧೮೭೯.೭ | ೫೬೮.೭ |
| ೨೦೦೫-೦೬ | ೧೦೫೧.೨ | ೨೬೭.೫ | ೮೬೪.೩ | ೩೨೩.೬ | ೧೯೧೫.೫ | ೫೯೧.೧ |
| ೨೦೧೦-೧೧ | ೧೦೬೧.೪೦ | ೨೮೪.೩೦ | ೧೨೩೩.೧೦ | ೪೭೧.೨೦ | ೨೨೯೪.೫೦ | ೭೫೫.೫೦ |
| ೨೦೧೧-೧೨ | ೧೦೬೫.೮೦ | ೨೮೬.೩೦ | ೧೨೮೨.೪೦ | ೪೭೨.೩೦ | ೨೩೪೮.೨೦ | ೭೫೮.೬೦ |
| ೨೦೧೨-೧೩ | ೧೦೫೯.೯೦ | ೨೮೯.೫೦ | ೧೨೮೯.೦೦ | ೪೭೨.೩೦ | ೨೩೪೮.೯೦ | ೭೬೧.೮೦ |
| ೨೦೧೩-೧೪ | ೧೦೪೯.೬೦ | ೨೮೮.೩೦ | ೧೩೧೪.೪೦ | ೪೭೫.೧೦ | ೨೩೬೪.೦೦ | ೭೬೩.೪೦ |
| ೨೦೧೪-೧೫ | ೧೦೪೫.೨೦ | ೨೮೬.೯೦ | ೧೩೩೯.೦೦ | ೪೮೫.೭೦ | ೨೩೮೪.೨೦ | ೭೭೨.೬೦ |
| ೨೦೧೫-೧೬ (ಡಿಸೆಂಬರ್ ೨೦೧೫ರ ಅಂತ್ಯಕ್ಕೆ) | ೧೦೪೨.೫೦ | ೨೮೭.೦೦ | ೧೩೪೪.೭೦ | ೪೮೮.೪೦ | ೨೩೮೭.೨೦ | ೭೭೫.೪೦ |

ಮೂಲ: ಉದ್ಯೋಗ ಮತ್ತು ತರಬೇತಿ ಇಲಾಖೆ, ಕರ್ನಾಟಕ ಸರ್ಕಾರ

## ಸಾರ್ವಜನಿಕ ಮತ್ತು ಖಾಸಗಿ ವಲಯಗಳಲ್ಲಿನ ಉದ್ಯೋಗ

ರಾಜ್ಯದಲ್ಲಿ ಸಂಘಟಿತ ಮತ್ತು ವಲಯಗಳಲ್ಲಿನ ಉದ್ಯೋಗ ಪ್ರಮಾಣವು ೨೦೧೫ರ ಡಿಸೆಂಬರ್ ಅಂತ್ಯಕ್ಕೆ ೨೩.೮೭೨ ಲಕ್ಷಗಳಿದ್ದು ಮಾರ್ಚ್ ೨೦೧೫ಕ್ಕೆ ಇದ್ದ ೨೩.೮೪೨ ಲಕ್ಷಕ್ಕೆ ಹೋಲಿಸಿದರೆ ಶೇ.೦.೦೬ರಷ್ಟು ಏರಿಕೆಯಾಗಿರುವುದು ಕಂಡು ಬರುತ್ತದೆ. ಸಾರ್ವಜನಿಕ ವಲಯದ ಉದ್ಯೋಗ ಕ್ಷೇತ್ರವು ೧೦.೪೩ ಲಕ್ಷ (ಶೇ.೪೩.೭) ಮತ್ತು ಖಾಸಗಿ ಕ್ಷೇತ್ರವು ೧೩.೪೨ ಲಕ್ಷ (ಶೇ.೫೬.೩) ರಷ್ಟು ಗಾತ್ರವನ್ನು ಹೊಂದಿದ್ದು ಮಾರ್ಚ್ ಮತ್ತು ಡಿಸೆಂಬರ್ ೨೦೧೫ರ ಅವಧಿಯಲ್ಲಿ ಮೊದಲನೆಯದ್ದು ಶೇಕಡ ೦.೧೫ರಷ್ಟು ಇಳಿಕೆಯಾಗಿ, ಅನಂತರದ ವಲಯವು ಶೇಕಡ ೦.೨೩ರಷ್ಟು ಏರಿಕೆಯಾಗಿರುತ್ತದೆ.ಶಾಖಾವಾರು ಉದ್ಯೋಗ ಕ್ಷೇತ್ರದ ಸ್ಥಿತಿಯ ತುಲನಾತ್ಮಕ ವಿಶ್ಲೇಷಣೆಯು, ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಮತ್ತು ಅರೆ ಕೇಂದ್ರ ಸರ್ಕಾರ ಸಂಸ್ಥೆಗಳಲ್ಲಿ ಉದ್ಯೋಗ ಪ್ರಮಾಣವು ಮಾರ್ಚ್೨೦೧೫ ರಿಂದ ಡಿಸೆಂಬರ್ ೨೦೧೫ರ ಅವಧಿಯಲ್ಲಿ ಇಳಿಕೆಯಾಗಿರುವುದನ್ನು ತೋರಿಸುತ್ತಿದೆ.

**ಕೋಷ್ಟಕ ೮.೩೪ : ಸಾರ್ವಜನಿಕ ಮತ್ತು ಖಾಸಗಿ ವಲಯಗಳಲ್ಲಿನ ಉದ್ಯೋಗ (ಲಕ್ಷಗಳಲ್ಲಿ)**

| ಕ್ರ. ಸಂ. | ವಲಯ | ಮಾರ್ಚ್ ೨೦೧೧ | ಮಾರ್ಚ್ ೨೦೧೨ | ಮಾರ್ಚ್ ೨೦೧೩ | ಮಾರ್ಚ್ ೨೦೧೪ | ಮಾರ್ಚ್ ೨೦೧೫ | ಡಿಸೆಂಬರ್ ೨೦೧೫ |
|---|---|---|---|---|---|---|---|
| ೧ | ೨ | ೩ | ೪ | ೫ | ೬ | ೭ | ೮ |
| ೧ | ಕೇಂದ್ರ ಸರ್ಕಾರ | ೦.೯೫೫ | ೦.೯೫೫ | ೦.೯೫೩ | ೦.೯೫೪ | ೦.೯೪೫ | ೦.೯೩೯ |
| ೨ | ರಾಜ್ಯ ಸರ್ಕಾರ | ೫.೭೩೫ | ೫.೮೦೩ | ೫.೭೯೪ | ೫.೬೯೯ | ೫.೬೪೯ | ೫.೬೩೨ |
| ೩ | ಅರೆ ಕೇಂದ್ರ ಸರ್ಕಾರ | ೧.೬೩೩ | ೧.೬೪೬ | ೧.೬೪೮ | ೧.೬೫೦ | ೧.೬೫೨ | ೧.೬೪೮ |
| ೪ | ಅರೆ ರಾಜ್ಯ ಸರ್ಕಾರ | ೧.೬೦೨ | ೧.೫೮೨ | ೧.೫೫೪ | ೧.೫೫೭ | ೧.೫೬೭ | ೧.೫೬೮ |
| ೫ | ಸ್ಥಳೀಯ ಸಂಸ್ಥೆಗಳು | ೦.೬೮೯ | ೦.೬೭೨ | ೦.೬೫೦ | ೦.೬೩೬ | ೦.೬೩೯ | ೦.೬೩೮ |
| | **ಸಾರ್ವಜನಿಕ ವಲಯ** | ೧೦.೬೧೪ | ೧೦.೬೫೮ | ೧೦.೫೯೯ | ೧೦.೪೯೬ | ೧೦.೪೫೨ | ೧೦.೪೨೫ |
| ೬ | ಖಾಸಗಿ ವಲಯ (ಕಾಯಿದೆ) | ೧೧.೬೬೯ | ೧೨.೧೭೦ | ೧೨.೨೭೪ | ೧೨.೫೩೪ | ೧೨.೭೭೮ | ೧೨.೮೩೬ |
| ೭ | ಖಾಸಗಿ ವಲಯ (ಕಾಯಿದೆಯೇತರ) | ೦.೬೬೨ | ೦.೬೫೪ | ೦.೬೧೬ | ೦.೬೧೦ | ೦.೬೧೨ | ೦.೬೧೧ |
| | **ಖಾಸಗಿ ವಲಯ** | **೧೨.೩೩೧** | **೧೨.೮೨೪** | **೧೨.೮೯೦** | **೧೩.೧೪೪** | **೧೩.೩೯೦** | **೧೩.೪೪೭** |
| | **ಒಟ್ಟು** | **೨೨.೯೪೫** | **೨೩.೪೮೨** | **೨೩.೪೮೯** | **೨೩.೬೪೦** | **೨೩.೮೪೨** | **೨೩.೮೭೨** |

ಮೂಲ: ಉದ್ಯೋಗ ಮತ್ತು ತರಬೇತಿ ಇಲಾಖೆ, ಕರ್ನಾಟಕ ಸರ್ಕಾರ

## ಸಾರ್ವಜನಿಕ ಮತ್ತು ಖಾಸಗಿ ವಲಯಗಳಲ್ಲಿನ ಉದ್ಯೋಗ (ಉದ್ಯಮ ಗುಂಪುವಾರು)

ಸಂಘಟಿತ ವಲಯದಲ್ಲಿನ ಉದ್ಯೋಗ ಪ್ರಮಾಣದಲ್ಲಿ ಮಾರ್ಚ್-೨೦೧೫ ಮಾಹಿತಿ ತಂತ್ರಜ್ಞಾನ ಮತ್ತು ಸಂಪರ್ಕ ವಿಭಾಗದಲ್ಲಿ ೪.೪೫೮ ಲಕ್ಷಗಳಷ್ಟಿದ್ದು, ಅದು ೨೦೧೫-ಡಿಸೆಂಬರ್ ವೇಳೆಗೆ ೪.೪೮೪ ಲಕ್ಷಗಳಿಗೆ ತಲುಪಿದೆ. ಅಂದರೆ ೨೬೦೦ ಹೆಚ್ಚುವರಿ ಕಾರ್ಮಿಕರಿಗೆ ಉದ್ಯೋಗ ಒದಗಿಸಿದೆ. ಹಾಗೆಯೇ ಸಾರಿಗೆ, ದಾಸ್ತಾನು ಸಂಗ್ರಹಣೆ ವಿಭಾಗದಲ್ಲಿ ೧.೫೬೧ ಲಕ್ಷಗಳಷ್ಟಿದ್ದಲ್ಲಿ ಅದು ೨೦೧೫ ಡಿಸೆಂಬರ್ ವೇಳೆಗೆ ೧.೫೭೨ ಲಕ್ಷಗಳಿಗೆ ತಲುಪಿದೆ. ಅಂದರೆ ೧೧೦೦ ಹೆಚ್ಚುವರಿ ಕಾರ್ಮಿಕರಿಗೆ ಉದ್ಯೋಗ ಒದಗಿಸಿದೆ. ಸಗಟು ಚಿಲ್ಲರೆ ವ್ಯಾಪಾರ ಮತ್ತು ಮೋಟಾರು ರಿಪೇರಿ, ವಸತಿ ಮತ್ತು ಉಪಹಾರ ಸೌಕರ್ಯ ಸೇವೆ, ಶಿಕ್ಷಣ ಮತ್ತು ವಿದ್ಯುಚ್ಛಕ್ತಿ, ಅನಿಲ ಮತ್ತು ಹವಾನಿಯಂತ್ರಣ ಸರಬರಾಜು ಸೇವೆಗಳು ವಲಯದ ಉದ್ಯೋಗ ಪ್ರಮಾಣವು ೦.೩೬೪ ಲಕ್ಷಗಳಿಂದ ಡಿಸೆಂಬರ್-೨೦೧೫ರಲ್ಲಿ ಕ್ರಮವಾಗಿ ೦.೩೬೭ ಲಕ್ಷಗಳಿಗೆ, ೦.೨೫೫ ಲಕ್ಷಗಳಿಂದ ೦.೨೫೬ ಲಕ್ಷಗಳಿಗೆ, ೨.೯೯೫ ಲಕ್ಷಗಳಿಂದ ೩.೯೯೭ ಲಕ್ಷಗಳಿಗೆ, ೦.೩೫೪ ಲಕ್ಷಗಳಿಂದ ೦.೩೫೫ ಲಕ್ಷಗಳಿಗೆ ಏರಿಕೆಯಾಗಿದೆ. ಕೃಷಿ, ಅರಣ್ಯ, ಮೀನುಗಾರಿಕೆ, ತಯಾರಿಕೆ, ಹಣಕಾಸು ಮತ್ತು ವಿಮೆ ಸೌಲಭ್ಯಗಳು, ಆಡಳಿತಾತ್ಮಕ ಮತ್ತು ಸಮರ್ಥನೀಯ ಸೇವೆಗಳು, ಆರೋಗ್ಯ ಮತ್ತು ಸಾಮಾಜಿಕ ಸೇವೆಗಳು, ವೃತ್ತೀಯ ವೈಜ್ಞಾನಿಕ ಮತ್ತು ತಾಂತ್ರಿಕ ಸೇವೆಗಳು, ಸಾರ್ವಜನಿಕ ಆಡಳಿತ, ರಕ್ಷಣೆ ಮತ್ತು ಸಾಮಾಜಿಕ ಭದ್ರತೆ, ಆರೋಗ್ಯ ಮತ್ತು ಸಾಮಾಜಿಕ ಸೇವೆಗಳ ವಲಯಗಳಲ್ಲಿ ಉದ್ಯೋಗವು ಸ್ವಲ್ಪಮಟ್ಟಿಗೆ ಇಳಿಕೆ ಕಂಡಿವೆ. ಆದರೆ, ಗಣಿ ಮತ್ತು ಕಲ್ಲು ಗಣಿಗಾರಿಕೆ, ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ, ತ್ಯಾಜ್ಯ ನಿರ್ವಹಣೆ, ಕಟ್ಟಡ ನಿರ್ಮಾಣ, ಕಲೆ, ಮನೋರಂಜನೆ ಮತ್ತು ವಿಹಾರ ಹಾಗೂ ಇತರ ಸೇವಾ ಚಟುವಟಿಕೆಗಳು ವಲಯಗಳಲ್ಲಿ ಉದ್ಯೋಗ ಪ್ರಮಾಣವು ತಟಸ್ಥವಾಗಿರುತ್ತದೆ. ವಿವರವಾದ ಮಾಹಿತಿಯನ್ನು ಕೋಷ್ಟಕ ೮.೩೫ರಲ್ಲಿ ನೀಡಲಾಗಿದೆ.

## ಕೋಷ್ಟಕ ೮.೩೫: ಸಾರ್ವಜನಿಕ ಮತ್ತು ಖಾಸಗಿ ವಲಯಗಳಲ್ಲಿನ ಉದ್ಯೋಗ (ಉದ್ಯಮ ಗುಂಪುವಾರು)

(ಲಕ್ಷಗಳಲ್ಲಿ)

| ಕೈಗಾರಿಕೆ | ೩೧-೦೩-೨೦೧೪ ರಲ್ಲಿದ್ದಂತೆ ಉದ್ಯೋಗಸ್ಥರು | | | ೩೧-೦೩-೨೦೧೫ ರಲ್ಲಿದ್ದಂತೆ ಉದ್ಯೋಗಸ್ಥರು | | | ೩೧.೧೨.೨೦೧೫ರಲ್ಲಿದ್ದಂತೆ ಉದ್ಯೋಗಸ್ಥರು | | |
|---|---|---|---|---|---|---|---|---|---|
| | ಸಾರ್ವಜನಿಕ | ಖಾಸಗಿ | ಒಟ್ಟು | ಸಾರ್ವಜನಿಕ | ಖಾಸಗಿ | ಒಟ್ಟು | ಸಾರ್ವಜನಿಕ | ಖಾಸಗಿ | ಒಟ್ಟು |
| ಕೃಷಿ ಮತ್ತು ಅರಣ್ಯ, ಮತ್ತುಮೀನುಗಾರಿಕೆ | ೦.೨೭೧ | ೦.೧೨೧ | ೦.೩೯೨ | ೦.೨೬೫ | ೦.೧೨೦ | ೦.೩೮೫ | ೦.೨೬೫ | ೦.೧೨೦ | ೦.೩೮೫ |
| ಗಣಿ ಮತ್ತು ಕಲ್ಲು ಗಣಿಗಾರಿಕೆ | ೦.೦೭೪ | ೦.೦೭೩ | ೦.೧೪೭ | ೦.೦೭೪ | ೦.೦೭೩ | ೦.೧೪೭ | ೦.೦೭೪ | ೦.೦೭೩ | ೦.೧೪೭ |
| ತಯಾರಿಕೆ | ೦.೫೯೭ | ೫.೭೦೧ | ೬.೨೯೮ | ೦,೫೮೭ | ೫.೭೯೦ | ೬.೩೭೭ | ೦,೫೮೬ | ೫.೭೭೯ | ೬.೩೬೫ |
| ವಿದ್ಯುಚ್ಚಕ್ತಿ, ಅನಿಲ ಮತ್ತು ಹವಾನಿಯಂತ್ರಣ ಸರಬರಾಜು ಸೇವೆಗಳು | ೦.೩೩೮ | ೦.೦೧೦ | ೦.೩೪೮ | ೦.೩೪೪ | ೦.೦೧೦ | ೦.೩೫೪ | ೦.೩೪೫ | ೦.೦೧೦ | ೦.೩೫೫ |
| ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ, ತ್ಯಾಜ್ಯ ನಿರ್ವಹಣೆ ಮತ್ತು ಇತರೆ ಪರಿಹಾರ ಸೇವೆಗಳು | ೦.೦೫೬ | ೦.೦೦೧ | ೦.೦೫೭ | ೦.೦೫೫ | ೦.೦೦೧ | ೦.೦೫೬ | ೦.೦೫೫ | ೦.೦೦೧ | ೦.೦೫೬ |
| ಕಟ್ಟಡ ನಿರ್ಮಾಣ | ೦.೩೦೩ | ೦.೦೧೪ | ೦.೩೧೭ | ೦.೨೯೯ | ೦.೦೧೫ | ೦.೩೧೪ | ೦.೨೯೭ | ೦.೦೧೬ | ೦.೩೧೩ |
| ಸಗಟು, ಚಿಲ್ಲರೆ ವ್ಯಾಪಾರ ಮತ್ತು ಮೋಟಾರು ವಾಹನಗಳ ರಿಪೇರಿ | ೦.೦೮೩ | ೦.೨೬೧ | ೦.೩೪೪ | ೦.೦೮೧ | ೦.೨೮೩ | ೦.೩೬೪ | ೦.೦೮೧ | ೦.೨೮೬ | ೦.೩೬೭ |
| ಸಾರಿಗೆ ಮತ್ತು ದಾಸ್ತಾನು ಸಂಗ್ರಹಣೆ | ೧.೩೬೪ | ೦.೧೯೯ | ೧.೫೬೩ | ೧.೩೬೧ | ೦.೨೦೦ | ೧.೫೬೧ | ೧.೩೫೩ | ೦.೨೧೯ | ೧.೫೭೨ |
| ವಸತಿ ಮತ್ತು ಉಪಾಹಾರ ಸೌಕರ್ಯ ಸೇವೆಗಳು | ೦.೦೦೬ | ೦.೨೪೯ | ೦.೨೫೫ | ೦.೦೦೬ | ೦.೨೪೯ | ೦.೨೫೫ | ೦.೦೦೬ | ೦.೨೫೦ | ೦.೨೫೬ |
| ಮಾಹಿತಿ ತಂತ್ರಜ್ಞಾನ ಮತ್ತು ಸಂಪರ್ಕ | ೦.೨೩೧ | ೪.೧೩೯ | ೪.೩೭೦ | ೦.೨೨೮ | ೪.೨೩೦ | ೪.೪೫೮ | ೦.೨೨೬ | ೪.೨೫೮ | ೪.೪೮೪ |
| ಹಣಕಾಸು ಮತ್ತು ವಿಮೆ ಸೌಲಭ್ಯ ಸೇವೆಗಳು | ೦.೮೮೧ | ೦.೨೨೪ | ೧.೧೦೫ | ೦.೮೮೩ | ೦.೨೩೨ | ೧.೧೧೫ | ೦.೮೮೧ | ೦.೨೩೩ | ೧.೧೧೪ |
| ಸ್ಥಿರ, ಚರಾಸ್ತಿ ಮತ್ತು ವ್ಯಾಪಾರ ಸೇವೆಗಳು | ೦.೦೦೦ | ೦.೦೦೦ | ೦.೦೦೦ | ೦.೦೦೦ | ೦.೦೦೦ | ೦.೦೦೦ | ೦.೦೦೦ | ೦.೦೦೧ | ೦.೦೦೧ |
| ವೃತ್ತೀಯ ವೈಜ್ಞಾನಿಕ ಮತ್ತು ತಾಂತ್ರಿಕ ಸೇವೆಗಳು | ೦.೩೨೪ | ೦.೦೮೧ | ೦.೪೦೫ | ೦.೩೨೦ | ೦.೦೮೦ | ೦.೪೦೦ | ೦.೩೧೮ | ೦.೦೮೧ | ೦.೩೯೯ |
| ಆಡಳಿತಾತ್ಮಕ ಮತ್ತು ಸಮರ್ಥನೀಯ ಸೇವೆಗಳು | ೦.೦೦೯ | ೦.೫೪೦ | ೦.೫೪೯ | ೦.೦೦೯ | ೦.೫೭೨ | ೦.೫೮೧ | ೦.೦೦೯ | ೦.೫೬೯ | ೦.೫೭೮ |
| ಸಾರ್ವಜನಿಕ ಆಡಳಿತ, ರಕ್ಷಣೆ ಮತ್ತು ಸಾಮಾಜಿಕ ಭದ್ರತೆ | ೩.೧೭೦ | ೦.೦೦೦ | ೩.೧೭೦ | ೩.೧೬೬ | ೦.೦೦೦ | ೩.೧೬೬ | ೩.೧೬೧ | ೦.೦೦೦ | ೩.೧೬೧ |
| ಶಿಕ್ಷಣ | ೧.೮೫೦ | ೧.೧೩೯ | ೨.೯೮೯ | ೧.೮೫೨ | ೧.೧೪೩ | ೨.೯೯೫ | ೧,೮೪೮ | ೧.೧೪೮ | ೨.೯೯೬ |

| | | | | | | | | | |
|---|---|---|---|---|---|---|---|---|---|
| ಆರೋಗ್ಯ ಮತ್ತು ಸಾಮಾಜಿಕ ಸೇವೆಗಳು | ೦.೯೦೬ | ೦.೩೬೪ | ೧.೨೭೦ | ೦.೮೮೭ | ೦.೩೬೯ | ೧.೨೫೩ | ೦.೮೮೫ | ೦.೩೬೯ | ೧.೨೫೪ |
| ಕಲೆ, ಮನರಂಜನೆ ಮತ್ತು ವಿಹಾರ | ೦.೦೨೨ | ೦.೦೨೩ | ೦.೦೪೫ | ೦.೦೨೨ | ೦.೦೨೩ | ೦.೦೪೫ | ೦.೦೨೨ | ೦.೦೨೩ | ೦.೦೪೫ |
| ಇತರೆ ಸೇವಾ ಚಟುವಟಿಕೆಗಳು | ೦.೦೧೧ | ೦.೦೦೬ | ೦.೦೧೭ | ೦.೦೧೩ | ೦.೦೧೨ | ೦.೦೨೫ | ೦.೦೧೩ | ೦.೦೧೨ | ೦.೦೨೫ |
| ಒಟ್ಟು | **೧೦.೪೯೬** | **೧೩.೧೪೪** | **೨೩.೬೪೦** | **೧೦.೪೫೨** | **೧೩.೪೦೧** | **೨೩.೮೫೩** | **೧೦.೪೨೫** | **೧೩.೪೪೭** | **೨೩.೮೭೨** |

ಮೂಲ: ಉದ್ಯೋಗ ಮತ್ತು ತರಬೇತಿ ಇಲಾಖೆ, ಕರ್ನಾಟಕ ಸರ್ಕಾರ

## ಉದ್ಯೋಗ ವಿನಿಮಯ ಅಂಕಿ ಅಂಶಗಳು

ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಾಯಿಸಿದವರ ಸಂಖ್ಯೆಯು ಡಿಸೆಂಬರ್-೨೦೧೫ ರಲ್ಲಿ ೩.೪೫ ಲಕ್ಷ ಇದ್ದು ಮಾರ್ಚ್-೨೦೧೫ಕ್ಕೆ ಇದ್ದ ೩.೫೩ ಲಕ್ಷಕ್ಕೆ ಹೋಲಿಸಿದರೆ ಇದು ಶೇ.೨.೪ರಷ್ಟು ಕುಸಿದಿರುವುದು ಕಂಡು ಬರುತ್ತದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಸ್ನಾತಕೋತ್ತರ ಪದವೀಧರರು ಶೇ.೦.೮ರಷ್ಟು ಹಾಗೂ ಪದವೀಧರರು ಶೇ.೦.೪ರಷ್ಟು ಉದ್ಯೋಗ ಸಹಾಯಕ್ಕೆ ನೋಂದಾಯಿಸುತ್ತಿರುವ ಪ್ರಮಾಣ ಸ್ವಲ್ಪ ಮಟ್ಟಿಗೆ ಏರಿಕೆಯಾಗಿದೆ. ಹತ್ತನೇ ತರಗತಿಗಿಂತ ಕಡಿಮೆ ಶಿಕ್ಷಣ ಪಡೆದವರ ದಾಖಲಾತಿ ಪ್ರಮಾಣ ಶೇ.-೭.೮ರಷ್ಟು ಕುಸಿದಿದ್ದು, ಐ.ಟಿ.ಐ. ತರಬೇತಿ ಪಡೆದವರು (ಶೇ.-೬.೯), ಡಿಪ್ಲೊಮಾ ಹೊಂದಿದವರು (ಶೇ.-೩.೪), ಹತ್ತನೇ ತರಗತಿ ಮತ್ತು ಶೀಘ್ರಲಿಪಿಗಾರರ ದಾಖಲಾತಿ ಪ್ರಮಾಣ ಶೇ.-೦.೭ರಷ್ಟು ಕುಸಿದಿರುತ್ತದೆ. ಕರ್ನಾಟಕದಲ್ಲಿ ಉದ್ಯೋಗ ಸಹಾಯಕ್ಕಾಗಿ ನೋಂದಾಯಿಸಿರುವ ಅಭ್ಯರ್ಥಿಗಳ ವಿವರಗಳನ್ನು ಕೋಷ್ಟಕ ೮.೩೬ರಲ್ಲಿ ವಿವರಿಸಲಾಗಿದೆ.

ರಾಜ್ಯ ಉದ್ಯೋಗ ವಿನಿಮಯ ಕೇಂದ್ರಗಳಿಂದ ಏಪ್ರಿಲ್-೨೦೧೫ ಮತ್ತು ಡಿಸೆಂಬರ್-೨೦೧೫ ರ ಅವಧಿಯಲ್ಲಿ ೨,೯೮೮ ಉದ್ಯೋಗಾವಕಾಶಗಳನ್ನು ಕಲ್ಪಿಸಲಾಗಿದೆ (ಪ್ರತಿ ಮಾಹೆ ಸರಾಸರಿ ೩೨೨ ಉದ್ಯೋಗಾವಕಾಶಗಳು). ಕಳೆದ ವರ್ಷ ಇದೇ ಅವಧಿಯಲ್ಲಿ ಸುಮಾರು ೭,೮೭೦ (ಮಾಹೆಯಾನ ಸರಾಸರಿ ೮೭೪ ಉದ್ಯೋಗಾವಕಾಶಗಳು). ಒಟ್ಟು ಕಲ್ಪಿಸಲಾಗಿದ್ದ ಉದ್ಯೋಗಾವಕಾಶಗಳು ಡಿಸೆಂಬರ್-೨೦೧೫ರ ಅಂತ್ಯದಲ್ಲಿದ್ದ ಒಟ್ಟು ನೋಂದಾಯಿತರ ಶೇಕಡಾ ೦.೮೬ ರಷ್ಟಿದೆ. ೨೦೧೪-೧೫ರಲ್ಲಿ ೮,೮೬೮ ಉದ್ಯೋಗಾವಕಾಶವನ್ನು ಕಲ್ಪಿಸಲಾಗಿದೆ (ಮಾಹೆಯಾನ ಸರಾಸರಿ ೭೩೯ ಉದ್ಯೋಗಾವಕಾಶಗಳು). ೧,೪೮೪ ಖಾಲಿ ಹುದ್ದೆಗಳನ್ನು ಪ್ರಸ್ತುತ ವರ್ಷದ ಡಿಸೆಂಬರ್-೨೦೧೫ರ ಅಂತ್ಯಕ್ಕೆ ಅಧಿಸೂಚಿಸಲಾಗಿದೆ (ಪ್ರತಿ ಮಾಹೆಯಾನ ೧೬೫ ಉದ್ಯೋಗಾವಕಾಶಗಳು). ಕಳೆದ ವರ್ಷದ ಇದೇ ಅವಧಿಯಲ್ಲಿ ೧,೨೩೩ ಖಾಲಿ ಹುದ್ದೆಗಳು ಅಧಿಸೂಚಿತವಾಗಿದ್ದವು (ಪ್ರತಿ ಮಾಹೆಯಾನ ೧೩೭ ಉದ್ಯೋಗಾವಕಾಶಗಳು). ಅಧಿಸೂಚಿತವಾದ ಖಾಲಿ ಹುದ್ದೆಗಳು ಒಟ್ಟು ನೋಂದಾಯಿತರ ಶೇ.೦.೪೩ರಷ್ಟಿದೆ. ೨೦೧೪-೧೫ ರ ಸಾಲಿನಲ್ಲಿ ೧,೮೨೭ ರಷ್ಟು ಖಾಲಿ ಹುದ್ದೆಗಳು ಅಧಿಸೂಚಿತವಾಗಿದ್ದವು. (ಮಾಹೆಯಾನ ಸರಾಸರಿ ೧೫೨ ಹುದ್ದೆಗಳು). ವಿವರಗಳಿಗೆ ಕೋಷ್ಟಕ ೮.೩೭ಅನ್ನು ನೋಡಿ.

**ಕೋಷ್ಟಕ ೮.೩೬ : ಕರ್ನಾಟಕ ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳ ಚಾಲ್ತಿ ದಾಖಲೆಯಲ್ಲಿರುವ ಉದ್ಯೋಗಾರ್ಥಿಗಳ ವಿವರ**

| ಕ್ರ. ಸಂ. | ನೋಂದಣಿಯಾದವರು | ತಿಂಗಳಾಂತ್ಯದಲ್ಲಿ | | | ವ್ಯತ್ಯಾಸ ಡಿಸೆಂಬರ್-೧೫ / ಮಾರ್ಚ್-೧೫ |
|---|---|---|---|---|---|
| | | ಮಾರ್ಚ್ ೨೦೧೪ | ಮಾರ್ಚ್ ೨೦೧೫ | ಡಿಸೆಂಬರ್ ೨೦೧೫ | |
| ೧ | ಸ್ನಾತಕೋತ್ತರ ಪದವೀಧರರು | ೫,೦೬೨ | ೪,೬೪೯ | ೪,೬೮೫ | ೦.೮ |
| ೨ | ಪದವೀಧರರು | ೪೯,೮೪೪ | ೪೯,೯೮೩ | ೪೯,೨೦೧ | ೦.೪ |
| ೩ | ಡಿಪ್ಲೊಮಾ ಹೊಂದಿದವರು | ೧೮,೫೨೪ | ೧೨,೭೭೧ | ೧೨,೩೪೨ | -೩.೪ |
| ೪ | ಐ.ಟಿ.ಐ. ತರಬೇತಿ ಮತ್ತು ಇತರ ಪ್ರಶಸ್ತಿ ಪತ್ರ ಹೊಂದಿದವರು | ೫೧,೭೮೬ | ೫೧,೨೯೬ | ೪೭,೭೬೬ | -೬.೯ |
| ೫ | ಹತ್ತನೇ ತರಗತಿ ತೇರ್ಗಡೆಯಾದವರು ಮತ್ತು ಶೀಘ್ರಲಿಪಿಗಾರರು | ೨,೧೧,೪೭೯ | ೧,೯೨,೭೨೪ | ೧,೯೧,೪೩೩ | -೦.೭ |
| ೬ | ಹತ್ತನೇ ತರಗತಿಗಿಂತ ಕಡಿಮೆ ವಿದ್ಯಾರ್ಹತೆ ಹೊಂದಿದವರು | ೫೯,೧೦೦ | ೪೩,೫೨೦ | ೪೦,೧೨೭ | -೭.೮ |
| | ಒಟ್ಟು | ೩,೯೫,೭೯೫ | ೩,೫೩,೯೪೩ | ೩,೪೫,೫೫೪ | -೨.೪ |

ಮೂಲ: ಉದ್ಯೋಗ ಮತ್ತು ತರಬೇತಿ ಇಲಾಖೆ, ಕರ್ನಾಟಕ ಸರ್ಕಾರ

**ಕೋಷ್ಟಕ ೮.೩.೭: ೨೦೧೦-೧೧ ರಿಂದ ೨೦೧೫-೧೬ ರವರೆಗೆ ಅಧಿಸೂಚಿಸಿದ ಹುದ್ದೆಗಳು ಮತ್ತು ಉದ್ಯೋಗ ಪಡೆದವರ ವಿವರ**

| ವರ್ಷ | ಅಧಿಸೂಚಿಸಿದ ಹುದ್ದೆಗಳು | ಉದ್ಯೋಗ ಪಡೆದವರು |
|---|---|---|
| ೨೦೧೦-೧೧ | ೭,೪೨೧ | ೫.೯೩೭ |
| ೨೦೧೧-೧೨ | ೩,೨೦೨ | ೮,೩೯೪ |
| ೨೦೧೨-೧೩ | ೩,೨೭೧ | ೧೫,೦೩೯ |
| ೨೦೧೩-೧೪ | ೨,೩೨೯ | ೧೮,೫೭೩ |
| ೨೦೧೪-೧೫ | ೧,೮೨೭ | ೮,೮೩೮ |
| ೨೦೧೫-೧೬ | ೧,೪೮೪ | ೨,೯೮೮ |

ಮೂಲ: ಉದ್ಯೋಗ ಮತ್ತು ತರಬೇತಿ ಇಲಾಖೆ, ಕರ್ನಾಟಕ ಇಲಾಖೆ

### ದಿನಗೂಲಿ ಉದ್ಯೋಗ

ಹೆಚ್ಚುತ್ತಿರುವ ಕಾರ್ಮಿಕರ ಬಲದಿಂದಾಗಿ ಅದಕ್ಕೆ ಸಮನಾಗಿ ಲಾಭದಾಯಕ/ಉತ್ಪಾದಕ ಹಾಗೂ ಗುಣಮಟ್ಟದ ಉದ್ಯೋಗ ಅವಕಾಶಗಳನ್ನು ಸೃಜಿಸುವುದರ ಜೊತೆಗೆ, ಅವುಗಳಿಗೆ ತಕ್ಕಂತೆ ಹೆಚ್ಚಿನ ಮಟ್ಟದ ಬೆಳವಣಿಗೆ ದರವನ್ನು ಸಾಧಿಸುವ ಸವಾಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರಡರಲ್ಲೂ ಇದೆ. ಉದ್ಯೋಗ ಸೃಜನೆಯಲ್ಲಿನ ಮಂದಗತಿಯ ಬೆಳವಣಿಗೆ, ಕಡಿಮೆ ಮಟ್ಟದ ಉತ್ಪಾದಕತೆ, ಕಡಿಮೆ ಗುಣಮಟ್ಟದ ಉದ್ಯೋಗ, ವಿಶೇಷವಾಗಿ ಅಸಂಘಟಿತ ವಲಯ, ಯುವಪೀಳಿಗೆ ಹಾಗೂ ಸುಶಿಕ್ಷಿತರ ಪೈಕಿ ಹೆಚ್ಚಿನ ಪ್ರಮಾಣದ ನಿರುದ್ಯೋಗ ದರಗಳು ಸೂಚಿಸಿರುವುದರಿಂದ, ಇತ್ತೀಚಿನ ವರ್ಷಗಳಲ್ಲಿ ಬಡತನ ತಗ್ಗಿಸುವಲ್ಲಿ ಹಾಗೂ ಬೆಳವಣಿಗೆಯ ಪ್ರಕ್ರಿಯೆಯನ್ನು ಹೆಚ್ಚು ಸಮಷ್ಟೀಕರಿಸುವ ನಿಟ್ಟಿನಲ್ಲಿ, ಉತ್ಪಾದಕತೆ ವರ್ಧನೆ, ಗುಣಮಟ್ಟ ಮತ್ತು ಗೌರವಯುತ ಉದ್ಯೋಗ ಒದಗಿಸುವಿಕೆ ಎಂಬ ಅಂಶಗಳು ರಾಜ್ಯ ಸರ್ಕಾರ ನೀತಿಯ ಮುಖ್ಯ ಕಾಳಜಿಯಾಗಿದೆ. ಕರ್ನಾಟಕದಲ್ಲಿ ಬಹುಭಾಗ ಜನಸಂಖ್ಯೆಯ ಮುಖ್ಯ ಕಸುಬು ಕೃಷಿಯಾಗಿರುತ್ತದೆ ಮತ್ತು ಉದ್ಯೋಗ ಕ್ಷೇತ್ರದ ರಚನೆಯು ಬಹುತೇಕ ಅಸಂಘಟಿತ, ಗ್ರಾಮೀಣಮಯ ಮತ್ತು ಕೈಗಾರಿಕಾ ರಹಿತವಾಗಿರುತ್ತದೆ.

### ೨೦೧೩-೧೪ರ ಕಾರ್ಮಿಕ ಮಾರುಕಟ್ಟೆ ಪ್ರಮುಖ ಸೂಚ್ಯಾಂಕ

ನಿಯಮಾವಳಿ ನಿರೂಪಣೆಯಲ್ಲಿ ಅತ್ಯಂತ ಜಟಿಲವಾದ ಅಂಶವೆಂದರೆ ಕಾರ್ಮಿಕ ಪೂರೈಕೆಯ ಮೇಲೆ ಪರಿಣಾಮ ಬೀಳುವುದು ಅಂದರೆ ಕಾರ್ಮಿಕ ಬಲದ ಭಾಗವಹಿಸುವಿಕೆಯ ದರ ಆಗಿರುತ್ತದೆ. ಕಾರ್ಮಿಕ ಬಲದ ಭಾಗವಹಿಸುವಿಕೆಯ ದರ ಎಂದರೆ ರಾಷ್ಟ್ರದ/ರಾಜ್ಯದ ಕೆಲಸ ಮಾಡುವ ವಯಸ್ಸಿನ ಜನಸಂಖ್ಯೆಯು ಕಾರ್ಮಿಕ ಮಾರುಕಟ್ಟೆಯಲ್ಲಿ ಸಕ್ರಿಯವಾಗಿ ತೊಡಗಿಸಿರುವವರ, ಉದ್ಯೋಗ ಹುಡುಕುತ್ತಿರುವವರ ಅಥವಾ ಕಾರ್ಯನಿರ್ವಹಿಸುತ್ತಿರುವವರ ಪ್ರಮಾಣ ಆಗಿರುತ್ತದೆ.ಇದು ಸರಕು ಮತ್ತು ಸೇವೆಗಳ ಉತ್ಪಾದನೆಗಾಗಿ ದೊರಕುವ ಕಾರ್ಮಿಕ ಬಲದ ಸೂಚನೆಯನ್ನು ಒದಗಿಸುತ್ತದೆ.

ಸಾಮಾಜಿಕ ಮತ್ತು ಆರ್ಥಿಕ ವಲಯಗಳಲ್ಲಿ ಕಾರ್ಮಿಕ ಬಲದ ದರಕ್ಕಿಂತಲೂ ಕಾರ್ಮಿಕ ಜನಸಂಖ್ಯಾ ಪರಿಮಾಣ ಮತ್ತು ನಿರುದ್ಯೋಗ ದರಗಳು ಕೂಡ ಅತಿ ಮಹತ್ವದ ಸೂಚ್ಯಾಂಕವಾಗಿರುತ್ತವೆ. ಕಾರ್ಮಿಕ ಜನಸಂಖ್ಯಾ ಪರಿಮಾಣವು ೧೦೦೦ ಮಂದಿಯಲ್ಲಿ ಉದ್ಯೋಗ ಹೊಂದಿರುವವರ ಸಂಖ್ಯೆಯಾಗಿರುತ್ತವೆ. ಕಾರ್ಮಿಕ ಮಾರುಕಟ್ಟೆಯಲ್ಲಿ ೧೦೦೦ ಮಂದಿಯಲ್ಲಿ ನಿರುದ್ಯೋಗ ಹೊಂದಿರುವವರ ಸಂಖ್ಯೆಯೇ ನಿರುದ್ಯೋಗ ದರವಾಗಿರುತ್ತದೆ. ಕಡಿಮೆ ಕಾರ್ಮಿಕ ಬಲ ಭಾಗವಹಿಸುವಿಕೆಯ ದರವು ಪ್ರಥಮವಾಗಿ ಹೆಚ್ಚು ಅವಲಂಬಿತ ಪರಿಮಾಣವನ್ನು ಸೂಚಿಸುತ್ತದೆ. ಅಭಿವೃದ್ಧಿ ಅನುಭವವು ಅವಲಂಬನೆ ಮತ್ತು ಬೆಳವಣಿಗೆ ನಡುವೆ ಬಲವಾದ ಸಂಬಂಧವನ್ನು ಸೂಚಿಸುತ್ತದೆ.

ಉದ್ಯೋಗ ಮತ್ತು ನಿರುದ್ಯೋಗ ಸಮೀಕ್ಷೆ- ಭಾರತ ಸರ್ಕಾರದ ಕಾರ್ಮಿಕ ಬ್ಯೂರೋ ನಡೆಸಿದ ೨೦೧೩-೧೪ನೇ ಸಾಲಿನ ವಾರ್ಷಿಕ ಉದ್ಯೋಗ ಮತ್ತು ನಿರುದ್ಯೋದ ಸಮೀಕ್ಷೆಯು ಈ ಸರಣಿಯಲ್ಲಿ ನಾಲ್ಕನೆಯದಾಗಿರುತ್ತದೆ. ಈ ಸಮೀಕ್ಷೆಯು ವಾರ್ಷಿಕ ಸಮೀಕ್ಷೆಯಾಗಿರುವುದರಿಂದ ಮಾಹಿತಿ ಸಂಗ್ರಹಣೆಯಲ್ಲಿ ನಿರಂತರತೆಯಿರುತ್ತದೆ.

ಈ ಕೆಳಗಿನ ವಿಶ್ಲೇಷಣೆಯಲ್ಲಿ ಪ್ರತಿ ನಿಯತಾಂಕಗಳಿಗೆ ಎರಡು ವಿಧಾನಗಳನ್ನು ತೆಗೆದುಕೊಳ್ಳಲಾಗಿದೆ. ಅವುಗಳೆಂದರೆ, ಸಾಮಾನ್ಯ ಪ್ರಮುಖ ಚಟುವಟಿಕೆಯ ಸ್ಥಿತಿ ಮತ್ತು ಅಂಗಚಟುವಟಿಕೆ ಸ್ಥಿತಿ ವಿಧಾನ. ಎಲ್ಲಾ ಅಂದಾಜಿಗೆ ಇಲ್ಲಿ ವಯೋಮಾನದಂಡ ೧೫ ವರ್ಷ ಮೇಲ್ಪಟ್ಟು ಆಗಿದೆ. ಈ ವಿಶ್ಲೇಷಣೆಯು ಆಂಧ್ರಪ್ರದೇಶ, ತಮಿಳುನಾಡು, ಕರ್ನಾಟಕ, ಕೇರಳ, ಮಹಾರಾಷ್ಟ್ರ, ಗುಜರಾತ್, ತೆಲಂಗಾಣ ಮತ್ತು ಭಾರತ ನಡುವಿನ ಹೋಲಿಕೆಯನ್ನು ಒಳಗೊಂಡಿರುತ್ತದೆ.

ಕಾರ್ಮಿಕ ಬಲ ಭಾಗವಹಿಸುವಿಕೆಯ ದರ, ಕಾರ್ಮಿಕ ಜನಸಂಖ್ಯಾ ಪ್ರಮಾಣ, ನಿರುದ್ಯೋಗ ಪರಿಮಾಣ ಮತ್ತು ನಿರುದ್ಯೋಗ ದರ ಈ ನಿಯತಾಂಕಗಳನ್ನು ಗಣನೆಗೆ ತೆಗೆದು ಕೊಳ್ಳಲಾಗಿದೆ.

ಒಬ್ಬ ವ್ಯಕ್ತಿಯ ಸಾಮಾನ್ಯ ಪ್ರಮುಖ ಚಟುವಟಿಕೆಯನ್ನು ಅವನು/ಅವಳು ಉಲ್ಲೇಖಾವಧಿಯಲ್ಲಿನ ಪ್ರಮುಖಾವಧಿಯ (೧೮೩ ದಿನ ಅಥವಾ ಅದಕ್ಕಿಂತ ಹೆಚ್ಚು) ಆಧಾರದ ಮೇಲೆ ಕಾರ್ಮಿಕ ಬಲಕ್ಕೆ ಸೇರಿರುವರೇ ಅಥವಾ ಇಲ್ಲವೇ ಎಂಬುದನ್ನು ವಿಂಗಡಿಸುವುದರ ಮೇಲೆ ನಿರ್ಧರಿಸಲಾಗುತ್ತದೆ. ಒಬ್ಬ ವ್ಯಕ್ತಿಯು ೩೦ ದಿನಗಳಗಿಂತಲೂ ಹೆಚ್ಚು ಅಥವಾ ಅವನ ಸಾಮಾನ್ಯ ಪ್ರಮುಖ ಚಟುವಟಿಕೆಗಳಿಗಿಂತಲೂ ಹೆಚ್ಚು ಅವಧಿ ಇತರೆ ಚಟುವಟಿಕೆಯಲ್ಲಿ ಭಾಗಿಯಾಗಿದ್ದಲ್ಲಿ ಈ ಸ್ಥಿತಿಯನ್ನು ಸಾಮಾನ್ಯ ಪ್ರಮುಖ ಚಟುವಟಿಕೆ ಮತ್ತು ಅಂಗ ಚಟುವಟಿಕೆ ಸ್ಥಿತಿ ಎಂದು ಕರೆಯಲಾಗುತ್ತದೆ.

ಕಾರ್ಮಿಕ ಬಲ ಗಣನೆಯಲ್ಲಿ ಕ್ಲಿಷ್ಟಕರ ಅಂಶಗಳೆಂದರೆ ಕಾರ್ಮಿಕ ಬಲ ಮತ್ತು ವಿವಿಧ ಆರ್ಥಿಕ ಚಟುವಟಿಕೆಗಳಲ್ಲಿ ಭಾಗವಹಿಸಿರುವ ಕಾರ್ಮಿಕ ಬಲವನ್ನು ವ್ಯಾಖ್ಯಾನಿಸುವುದೇ ಆಗಿದೆ.ವ್ಯಕ್ತಿಗಳು ಚಟುವಟಿಕೆಗಳಲ್ಲಿ ಭಾಗವಹಿಸುವುದು ಎಂದರೆ ಕೇವಲ ಚುರುಕಾಗಿರುವುದಲ್ಲದೇ ಬಹು ಆಯಾಮವೂ ಆಗಿರುತ್ತದೆ. ಏಕೆಂದರೆ ಇದು ಪ್ರದೇಶ, ವಯೋಮಾನ, ಶಿಕ್ಷಣ, ಲಿಂಗ, ವಾಣಿಜ್ಯ ಮತ್ತು ಔದ್ಯೋಗಿಕ ವರ್ಗಗಳಲ್ಲಿ ಬದಲಾಗುತ್ತದೆ.

**ಕಾರ್ಮಿಕ ಬಲ ಭಾಗವಹಿಸುವಿಕೆ ದರ**

ಈ ಕೆಳಗಿನ ಕೋಷ್ಟಕದಲ್ಲಿ (ಕೋಷ್ಟಕ ೮.೩೮) ನೀಡಿರುವ ಅಂಕಿಅಂಶಗಳು ಕರ್ನಾಟಕದಲ್ಲಿರುವ ಉದ್ಯೋಗ ಮತ್ತು ನಿರುದ್ಯೋಗ ಚಿತ್ರಣವನ್ನು ಇತರೆ ಹೋಲಿಕೆ ಮಾಡಬಹುದಾದ ರಾಜ್ಯಗಳು ಮತ್ತು ರಾಷ್ಟ್ರದ ತುಲನೆಯನ್ನು ವಿವರಿಸುತ್ತದೆ. ಪ್ರಮುಖ ಚಟುವಟಿಕೆ ಸ್ಥಿತಿ ಮತ್ತು ಅಂಗ ಚಟುವಟಿಕೆ ಸ್ಥಿತಿ ವಿಧಾನದ ಪ್ರಕಾರ ೧೫ ವರ್ಷ ಮತ್ತು ಅದಕ್ಕೂ ಮೇಲ್ಪಟ್ಟ ವ್ಯಕ್ತಿಗಳ ಕಾರ್ಮಿಕ ಬಲ ಭಾಗವಹಿಸುವಿಕೆ ದರವು ಕರ್ನಾಟಕದಲ್ಲಿ ಶೇ.೫೭.೮ ರಷ್ಟಿದ್ದು, ರಾಷ್ಟ್ರ ಮಟ್ಟದಲ್ಲಿ ಶೇ.೫೫.೬ ರಷ್ಟಿದೆ. ಹೋಲಿಕೆ ಮಾಡಬಹುದಾದ ರಾಜ್ಯಗಳಲ್ಲಿ ಅತಿ ಕಡಿಮೆ ದರವು ಕೇರಳದಲ್ಲಿದ್ದು, ಹೆಚ್ಚಿನ ದರವು ತೆಲಂಗಾಣದಲ್ಲಿರುತ್ತದೆ. ಕರ್ನಾಟಕದ ಗ್ರಾಮೀಣ ಪುರುಷರಲ್ಲಿ ಈ ದರವು ಶೇ.೮೧.೭ರಷ್ಟಿದ್ದು, ಕರ್ನಾಟಕವು ನಾಲ್ಕನೇ ಸ್ಥಾನದಲ್ಲಿರುತ್ತದೆ. ಕರ್ನಾಟಕ ನಗರ ಪ್ರದೇಶದ ಮಹಿಳೆಯರಲ್ಲಿ ಈ ದರವು ಕಡಿಮೆ ಎಂದರೆ ಶೇ.೨೮.೦ ಇದ್ದು, ಇದು ರಾಷ್ಟ್ರೀಯ ಮಟ್ಟದ ನಗರ ಪ್ರದೇಶದ ಮಹಿಳೆಯರಲ್ಲಿನ ದರ ಶೇ.೧೯.೭ ಕ್ಕಿಂತಲೂ ಹೆಚ್ಚಿರುತ್ತದೆ. ಕೋಷ್ಟಕ ೮.೩೯ ರಲ್ಲಿನ ಅಂಕಿಅಂಶಗಳು ಆಂಧ್ರಪ್ರದೇಶ, ತಮಿಳುನಾಡು, ಕರ್ನಾಟಕ, ಕೇರಳ, ಮಹಾರಾಷ್ಟ್ರ, ಗುಜರಾತ್, ತೆಲಂಗಾಣ ಮತ್ತು ಭಾರತ ನಡುವಿನ ಹೋಲಿಕೆಯನ್ನು ಒಳಗೊಂಡಿರುತ್ತದೆ.

ಕಾರ್ಮಿಕ ಬಲ ಭಾಗವಹಿಸುವಿಕೆ ದರವನ್ನು (ರಿ.+) ವಿಧಾನದಂತೆ ವಯೋಮಾನವಾರು ಹಂಚಿಕೆ ಮಾಡಿರುವುದನ್ನು ಕೋಷ್ಟಕ ೮.೪೧ ರಲ್ಲಿ ನೀಡಿದೆ. ಮೂರು ವಯೋಮಾನ ಗುಂಪುಗಳ ಪೈಕಿ ಅತಿ ಹೆಚ್ಚಿನ ಕಾರ್ಮಿಕ ಬಲ ಭಾಗವಹಿಸುವಿಕೆ ದರವು ಮೂರನೇ ವರ್ಗದಲ್ಲಿ ಅಂದರೆ ೩೦ಕ್ಕಿಂತ ಹೆಚ್ಚಿನ ವಯೋಮಾನ ಗುಂಪಿನಲ್ಲಿ ಹಾಗೂ ೧೫-೧೭ರ ವಯೋಮಾನ ಗುಂಪಿನಲ್ಲಿ ಈ ದರವು ಕಡಿಮೆ ಪ್ರಮಾಣದಲ್ಲಿರುವುದನ್ನು ಗಮನಿಸಬಹುದಾಗಿದೆ. ಇದು ಈ ವಯೋಮಾನದ ಗುಂಪಿನವರು ಸಾಮಾನ್ಯವಾಗಿ ಶಿಕ್ಷಣವನ್ನು ಮುಂದುವರಿಸುತ್ತಿರುತ್ತಾರೆ ಎಂಬುದನ್ನು ವಿವರಿಸುತ್ತದೆ. ಹೋಲಿಕೆ ಮಾಡಬಹುದಾದ ರಾಜ್ಯಗಳಲ್ಲಿ ಎಲ್ಲಾ ಮೂರು ವಯೋಮಾನದ ಗುಂಪಿನ ಪೈಕಿ ಅತಿ ಹೆಚ್ಚಿನ ಕಾರ್ಮಿಕ ಬಲ ಭಾಗವಹಿಸುವಿಕೆ ದರ ಆಂಧ್ರಪ್ರದೇಶದಲ್ಲಿ ಕಂಡುಬಂದಿರುತ್ತದೆ. ನಿಸ್ಸಂಶಯವಾಗಿ ಕೇರಳದಲ್ಲಿ ಅತಿಕಡಿಮೆ ಕಾರ್ಮಿಕ ಬಲ ಭಾಗವಹಿಸುವಿಕೆ ದರವು ಎಲ್ಲಾ ಮೂರು ವರ್ಗಗಳಲ್ಲಿ ಇರುವುದು ಕಂಡುಬಂದಿದ್ದು, ರಾಜ್ಯವು ಶಿಕ್ಷಣದ ಬಗ್ಗೆ ಗಮನ ವಹಿಸುತ್ತಿರುವುದರ ಬಗ್ಗೆ ವಿವರಿಸುತ್ತದೆ. ಈ ವಯೋಮಾನದ ಗುಂಪಿನಲ್ಲಿ ಕರ್ನಾಟಕಕ್ಕೆ ಹೋಲಿಸಿದರೆ ಮಹಾರಾಷ್ಟ್ರ ಮತ್ತು ತಮಿಳುನಾಡಿನಲ್ಲಿಯು ಸಹ ಕಾರ್ಮಿಕ ಬಲ ಭಾಗವಹಿಸುವಿಕೆ ದರವು ಕಡಿಮೆ ಇರುತ್ತದೆ.

**ಕೋಷ್ಟಕ ೮.೩೮: ೧೫ ವರ್ಷ ಮತ್ತು ಮೇಲ್ಪಟ್ಟ ವ್ಯಕ್ತಿಗಳ ಕಾರ್ಮಿಕ ಬಲ ಭಾಗವಹಿಸುವಿಕೆ, ಸಾಮಾನ್ಯ ಪ್ರಮುಖ ಮತ್ತು ಅಂಗ ಚಟುವಟಿಕೆ ಸ್ಥಿತಿ ವಿಧಾನದಂತೆ, ಶೇಕಡಾವಾರು**

| ರಾಜ್ಯ | ಕಾರ್ಮಿಕ ಬಲ ಭಾಗವಹಿಸುವಿಕೆ ದರ | | | | | | | | |
|---|---|---|---|---|---|---|---|---|---|
| | ಗ್ರಾಮೀಣ | | | ನಗರ | | | ಗ್ರಾಮೀಣ ಮತ್ತು ನಗರ | | |
| | ಪುರುಷ | ಹೆಣ್ಣು | ಒಟ್ಟು | ಪುರುಷ | ಹೆಣ್ಣು | ಒಟ್ಟು | ಪುರುಷ | ಹೆಣ್ಣು | ಒಟ್ಟು |
| ಆಂಧ್ರಪ್ರದೇಶ | ೮೪.೨ | ೫೭.೮ | ೭೦.೮ | ೭೮.೭ | ೩೫.೧ | ೫೬.೭ | ೮೨.೬ | ೫೧.೩ | ೬೬.೮ |
| ಗುಜರಾತ್ | ೮೨.೪ | ೩೪.೦ | ೫೯.೨ | ೭೫.೯ | ೧೧.೦ | ೪೪.೭ | ೭೯.೮ | ೨೪.೭ | ೫೩.೩ |
| **ಕರ್ನಾಟಕ** | **೮೧.೭** | **೩೯.೬** | **೬೧.೧** | **೭೫.೨** | **೨೮.೦** | **೫೨.೦** | **೭೯.೩** | **೩೫.೩** | **೫೭.೮** |
| ಕೇರಳ | ೭೪.೩ | ೩೬.೭ | ೫೪.೩ | ೭೧.೫ | ೩೦.೨ | ೪೯.೯ | ೭೩.೪ | ೩೪.೭ | ೫೨.೯ |
| ಮಹಾರಾಷ್ಟ್ರ | ೭೯.೪ | ೪೭.೬ | ೬೪.೨ | ೭೦.೯ | ೧೯.೯ | ೪೬.೫ | ೭೫.೬ | ೩೫.೪ | ೫೬.೪ |
| ತಮಿಳುನಾಡು | ೮೦.೨ | ೫೨.೪ | ೬೬.೬ | ೭೬.೭ | ೨೯.೦ | ೫೨.೮ | ೭೮.೬ | ೪೧.೬ | ೬೦.೩ |
| ತೆಲಂಗಾಣ | ೮೩.೪ | ೭೦.೦ | ೭೬.೭ | ೭೨.೯ | ೨೮.೨ | ೫೧.೩ | ೭೯.೪ | ೫೪.೬ | ೬೭.೨ |
| ಒಟ್ಟು ಭಾರತ | ೭೬.೪ | ೩೬.೪ | ೫೮.೮ | ೭೪.೦ | ೧೯.೭ | ೪೭.೯ | ೭೫.೭ | ೩೧.೧ | ೫೫.೬ |

ಮೂಲ: ಉದ್ಯೋಗ ಮತ್ತು ನಿರುದ್ಯೋಗ ಸಮೀಕ್ಷೆ-೨೦೧೩-೧೪, ಕಾರ್ಮಿಕ ಬ್ಯೂರೊ, ಚಂಡೀಘಡ

**ಕೋಷ್ಟಕ ೮.೩೯: ಎಲ್ಲಾ ವಯೋಮಾನ ಗುಂಪಿನ ವ್ಯಕ್ತಿಗಳ ಕಾರ್ಮಿಕ ಬಲ ಭಾಗವಹಿಸುವಿಕೆ ದರವು, ಸಾಮಾನ್ಯ ಪ್ರಮುಖ ಮತ್ತು ಅಂಗಚಟುವಟಿಕೆ ಸ್ಥಿತಿ ವಿಧಾನದಂತೆ ಶೇಕಡಾವಾರು**

| ಕ್ರ.ಸಂ. | ರಾಜ್ಯ | ೧೫-೧೭ ವರ್ಷ | ೧೮-೨೯ ವರ್ಷ | ೩೦ ವರ್ಷ ಮೇಲ್ಪಟ್ಟು |
|---|---|---|---|---|
| ೧ | ಆಂಧ್ರಪ್ರದೇಶ | ೧೮.೦ | ೬೩.೪ | ೭೨.೧ |
| ೨ | ಗುಜರಾತ್ | ೧೬.೨ | ೫೧.೨ | ೫೮.೯ |
| ೩ | ಕರ್ನಾಟಕ | ೧೩.೩ | ೫೪.೨ | ೬೩.೮ |
| ೪ | ಕೇರಳ | ೨.೮ | ೫೦.೧ | ೫೭.೮ |
| ೫ | ಮಹಾರಾಷ್ಟ್ರ | ೮.೫ | ೪೯.೦ | ೬೫.೦ |
| ೬ | ತಮಿಳುನಾಡು | ೯.೫ | ೫೪.೭ | ೬೭.೦ |
| ೭ | ತೆಲಂಗಾಣ | ೧೩.೫ | ೫೯.೩ | ೭೬.೦ |
| | ಒಟ್ಟು ಭಾರತ | ೧೪.೧ | ೫೨.೦ | ೬೨.೮ |

ಮೂಲ: ಉದ್ಯೋಗ ಮತ್ತು ನಿರುದ್ಯೋಗ ಸಮೀಕ್ಷೆ-೨೦೧೩-೧೪, ಕಾರ್ಮಿಕ ಬ್ಯೂರೊ, ಚಂಡೀಘಡ

## ಕಾರ್ಮಿಕ ಜನಸಂಖ್ಯಾ ಪ್ರಮಾಣ (WPR)

ಕಾರ್ಮಿಕ ಜನಸಂಖ್ಯಾ ಪ್ರಮಾಣವು ಒಟ್ಟಾರೆ ಜನಸಂಖ್ಯೆಯಲ್ಲಿನ ಕೆಲಸಗಾರರ / ಉದ್ಯೋಗ ನಿರತರ ಸಂಖ್ಯೆಯನ್ನು ಸೂಚಿಸುತ್ತದೆ. ಸಾಮಾನ್ಯ ಪ್ರಮುಖ ಮತ್ತು ಅಂಗಚಟುವಟಿಕೆ ಸ್ಥಿತಿ ವಿಧಾನದಂತೆ ಕಾರ್ಮಿಕರ ಜನಸಂಖ್ಯಾ ಪ್ರಮಾಣವು ಕರ್ನಾಟಕದಲ್ಲಿ ಶೇ.೫೬.೮ ಇದ್ದು, ಇದು ಅಖಿಲ ಭಾರತದ ಸರಾಸರಿ ಶೇ.೫೨.೭ ಕ್ಕಿಂತ ಹೆಚ್ಚಿರುತ್ತದೆ. ಈ ದರವು ತೆಲಂಗಾಣ, ಆಂಧ್ರಪ್ರದೇಶ ಮತ್ತು ತಮಿಳುನಾಡಿನಲ್ಲಿ ಹೆಚ್ಚು ಇರುತ್ತದೆ. ಆದಾಗ್ಯೂ ಕೇರಳ, ಗುಜರಾತ್ ಮತ್ತು ಮಹಾರಾಷ್ಟ್ರದಲ್ಲಿ ಕಡಿಮೆ ಇರುತ್ತದೆ. ಕರ್ನಾಟಕದಲ್ಲಿ ಹೆಚ್ಚು ಕೆಲಸಗಾರ ಜನಸಂಖ್ಯಾ ಪ್ರಮಾಣವು ಗ್ರಾಮೀಣ ಪುರುಷರಲ್ಲಿ ಶೇ.೮೦.೬ ರಷ್ಟು ಹಾಗೂ ಗ್ರಾಮೀಣ ಮಹಿಳೆಯರಲ್ಲಿ ಶೇ.೩೮.೮ ರಷ್ಟಿರುತ್ತದೆ. ಇದು ಕ್ರಮವಾಗಿ ಅಖಿಲ ಭಾರತ ಸರಾಸರಿ ಶೇ.೭೪.೩ ಮತ್ತು ಶೇ.೩೫.೧ ಕ್ಕಿಂತ ಹೆಚ್ಚಿರುತ್ತದೆ. ಈ ದರವು ನಗರ ಪುರುಷರಲ್ಲಿ ಶೇ.೭೪.೦ ಮತ್ತು ನಗರ ಮಹಿಳೆಯರಲ್ಲಿ ಶೇ.೨೭.೧ ರಷ್ಟಿರುತ್ತದೆ ಹಾಗೂ ಮತ್ತೊಮ್ಮೆ ಈ ದರಗಳು ಅಖಿಲ ಭಾರತ ಸರಾಸರಿ, ಕ್ರಮವಾಗಿ ನಗರ ಪುರುಷರಲ್ಲಿ ಶೇ.೭೧.೪ ಮತ್ತು ನಗರ ಮಹಿಳೆಯರಲ್ಲಿ ಶೇ.೧೭.೫ಕ್ಕಿಂತ ಹೆಚ್ಚಿರುತ್ತದೆ. ಪುರುಷ ಮತ್ತು ಮಹಿಳೆಯರ ಕಾರ್ಮಿಕ ಜನಸಂಖ್ಯಾ ಪ್ರಮಾಣದ ರಾಜ್ಯ ಸರಾಸರಿಯು (ಶೇ.೭೮.೨ ಮತ್ತು ಶೇ.೩೪.೫) ಅಖಿಲ ಭಾರತ ಸರಾಸರಿಗಿಂತ ಹೆಚ್ಚಿರುತ್ತದೆ.ಈ ಪ್ರಮಾಣವು ಹೋಲಿಕೆ ಮಾಡಬಹುದಾದ ರಾಜ್ಯಗಳ ಪೈಕಿ ಆಂಧ್ರಪ್ರದೇಶದಲ್ಲಿ ಶೇ.೬೪.೮ ಅತಿ ಹೆಚ್ಚಿನದಾಗಿದ್ದು, ಇದು ಕೇರಳದಲ್ಲಿ ಶೇ.೪೮.೦ ಅತಿ ಕಡಿಮೆ ಇರುವುದು ಕಂಡುಬರುತ್ತದೆ. ವಿವರಗಳಿಗೆ ಕೋಷ್ಟಕ ೮.೪೦ಅನ್ನು ನೋಡಿ.

**ಕೋಷ್ಟಕ ೮.೪೦: ೧೫ ವರ್ಷ ಮತ್ತು ಮೇಲ್ಪಟ್ಟ ವ್ಯಕ್ತಿಗಳ ಕಾರ್ಮಿಕ ಜನಸಂಖ್ಯಾ ಪ್ರಮಾಣ ದರ ಸಾಮಾನ್ಯ ಪ್ರಮುಖ ಮತ್ತು ಅಂಗ ಚಟುವಟಿಕೆ ಸ್ಥಿತಿ ವಿಧಾನದಂತೆ (ಶೇಕಡಾವಾರು)**

| ರಾಜ್ಯ | ಕಾರ್ಮಿಕ ಬಲ ಭಾಗವಹಿಸುವಿಕೆ ದರ | | | | | | | | |
|---|---|---|---|---|---|---|---|---|---|
| | ಗ್ರಾಮೀಣ | | | ನಗರ | | | ಗ್ರಾಮೀಣ ಮತ್ತು ನಗರ | | |
| | ಪುರುಷ | ಹೆಣ್ಣು | ಒಟ್ಟು | ಪುರುಷ | ಹೆಣ್ಣು | ಒಟ್ಟು | ಪುರುಷ | ಹೆಣ್ಣು | ಒಟ್ಟು |
| ಆಂಧ್ರಪ್ರದೇಶ | ೮೨.೩ | ೫೬.೭ | ೬೯.೩ | ೭೫.೯ | ೩೧.೮ | ೫೩.೭ | ೮೦.೫ | ೪೯.೬ | ೬೪.೮ |
| ಗುಜರಾತ್ | ೮೧.೯ | ೩೩.೮ | ೫೮.೮ | ೭೫.೦ | ೧೦.೭ | ೪೪.೧ | ೭೯.೧ | ೨೪.೫ | ೫೨.೯ |
| **ಕರ್ನಾಟಕ** | **೮೦.೬** | **೩೮.೮** | **೬೦.೨** | **೭೪.೦** | **೨೭.೧** | **೫೧.೦** | **೭೮.೨** | **೩೪.೫** | **೫೬.೮** |
| ಕೇರಳ | ೭೧.೪ | ೩೦.೨ | ೪೯.೫ | ೬೯.೪ | ೨೨.೩ | ೪೪.೭ | ೭೦.೮ | ೨೭.೮ | ೪೮.೦ |
| ಮಹಾರಾಷ್ಟ್ರ | ೭೭.೯ | ೪೭.೧ | ೬೩.೨ | ೬೯.೧ | ೧೮.೭ | ೪೫.೦ | ೪.೦ | ೩೪.೬ | ೫೫.೨ |
| ತಮಿಳುನಾಡು | ೭೮.೨ | ೫೧.೦ | ೬೪.೯ | ೭೪.೭ | ೨೬.೩ | ೫೦.೪ | ೭೬.೬ | ೩೯.೬ | ೫೮.೩ |
| ತೆಲಂಗಾಣ | ೮೨.೨ | ೬೮.೯ | ೭೫.೬ | ೭೦.೪ | ೨೩.೪ | ೪೭.೭ | ೭೭.೭ | ೫೨.೭ | ೬೫.೧ |
| ಒಟ್ಟು ಭಾರತ | ೭೪.೩ | ೩೫.೧ | ೫೭.೧ | ೭೧.೪ | ೧೭.೫ | ೪೫.೫ | ೭೩.೫. | ೨೯.೬ | ೫೩.೭ |

ಮೂಲ: ಉದ್ಯೋಗ ಮತ್ತು ನಿರುದ್ಯೋಗ ಸಮೀಕ್ಷೆ–೨೦೧೩–೧೪, ಕಾರ್ಮಿಕ ಬ್ಯೂರೊ, ಚಂಡೀಘಡ

## ನಿರುದ್ಯೋಗ ದರ

ಕಾರ್ಮಿಕ ಶಕ್ತಿಯ ಇನ್ನೊಂದು ಮುಖ್ಯವಾದ ಸೂಚ್ಯಾಂಕವೆಂದರೆ ನಿರುದ್ಯೋಗ ದರ. ನಿರುದ್ಯೋಗ ದರವು ನಿರುದ್ಯೋಗದ ವ್ಯಕ್ತಿಯ/ವ್ಯಕ್ತಿಗಳ ದಿನ ಮತ್ತು ಎಷ್ಟು ವ್ಯಕ್ತಿಗಳು ಅಥವಾ ಎಷ್ಟು ಜನರು ಕಾರ್ಮಿಕ ಶಕ್ತಿಯಲ್ಲಿ ಭಾಗವಹಿಸುತ್ತಾರೆ ಎಂಬುದರ ಅನುಪಾತ ಆಗಿದೆ. ನಿರುದ್ಯೋಗದ ದರವನ್ನು ಸಾಮಾನ್ಯವಾಗಿ ನಿರುದ್ಯೋಗಿಗಳಾಗಿರುವ ವ್ಯಕ್ತಿಗಳ ಸಂಖ್ಯೆ – ಸಾಮಾನ್ಯ ಪ್ರಮುಖ ಸ್ಥಿತಿ ಆಧಾರಿತ ರೀತಿಯ ದೃಷ್ಟಿಕೋನದಿಂದ ಚಟುವಟಿಕೆಯಲ್ಲಿ ತೊಡಗಿರುವ ವ್ಯಕ್ತಿಗಳ ಸ್ಥಿತಿಯನ್ನು ವರ್ಗೀಕರಣಗೊಳಿಸಬಹುದು.

ಇಲ್ಲಿ ಹೋಲಿಕೆಗಾಗಿ ಸಾಮಾನ್ಯ ಪ್ರಮುಖ ಮತ್ತು ಅಂಗ ಚಟುವಟಿಕೆ ಸ್ಥಿತಿ ವಿಧಾನವನ್ನು ತೆಗೆದುಕೊಳ್ಳಲಾಗಿದೆ ಮತ್ತು ಕೋಷ್ಟಕ ೮.೪೧ರಲ್ಲಿ ಸಾಮಾನ್ಯ ಪ್ರಮುಖ ಮತ್ತು ಅಂಗ ಚಟುವಟಿಕೆ ಸ್ಥಿತಿ ವಿಧಾನದಂತೆ ನಿರುದ್ಯೋಗ ದರವನ್ನು ತೋರಿಸಲಾಗಿದೆ.ಸಾಮಾನ್ಯ ಪ್ರಮುಖ ಮತ್ತು ಅಂಗ ಚಟುವಟಿಕೆ ಸ್ಥಿತಿ ವಿಧಾನದಲ್ಲಿ ಗ್ರಾಮೀಣ ಮತ್ತು ನಗರದ ಎಲ್ಲಾ ವ್ಯಕ್ತಿಗಳನ್ನು ಒಟ್ಟುಗೂಡಿಸಿದ ನಿರುದ್ಯೋಗ ದರವು ಕರ್ನಾಟಕದಲ್ಲಿ ಶೇ.೧.೭ ಇದ್ದು, ಭಾರತದ ನಿರುದ್ಯೋಗ ದರ ಶೇ.೩.೪ ಕ್ಕಿಂತ ಕಡಿಮೆ ಇದೆ. ಎಲ್ಲಾ ದಕ್ಷಿಣ ರಾಜ್ಯಗಳ ಪೈಕಿ ಅತಿ ಕಡಿಮೆ ನಿರುದ್ಯೋಗ ದರ ಕರ್ನಾಟಕದಲ್ಲಿ ಕಂಡುಬಂದಿದ್ದು, ಅತಿ ಹೆಚ್ಚಿನ ದರವು ಕೇರಳದಲ್ಲಿ ಶೇ.೯.೩ ಇರುತ್ತದೆ.

ನಿರುದ್ಯೋಗ ದರವು ಗುಜರಾತ್‌ನಲ್ಲಿ ಸಹ ಕಡಿಮೆ ಇರುವುದು ಕಂಡುಬಂದಿರುತ್ತದೆ.ಕರ್ನಾಟಕದ ಗ್ರಾಮೀಣ ಪ್ರದೇಶದ ಪುರುಷರಲ್ಲಿ ಶೇ.೧.೩ ಹಾಗೂ ಮಹಿಳೆಯರಲ್ಲಿ ಶೇ.೨ ರಷ್ಟಿರುತ್ತದೆ. ಆದರೆ ಈ ದರವು ನಗರ ಪ್ರದೇಶದ ಪುರುಷರಲ್ಲಿ ಶೇ.೧.೫ ಹಾಗೂ ಶೇ.೩.೧ ಮಹಿಳೆಯರಲ್ಲಿ ಕಂಡುಬಂದಿರುತ್ತದೆ.

**ಕೋಷ್ಟಕ ೮.೪೧: ೧೫ ವರ್ಷ ಮತ್ತು ಮೇಲ್ಪಟ್ಟ ವ್ಯಕ್ತಿಗಳ ನಿರುದ್ಯೋಗ ದರ ಸಾಮಾನ್ಯ ಪ್ರಮುಖ ಮತ್ತು ಅಂಗ ಚಟುವಟಿಕೆ ಸ್ಥಿತಿ ವಿಧಾನದಂತೆ (ಶೇಕಡಾವಾರು)**

| ರಾಜ್ಯ | ಗ್ರಾಮೀಣ | | | ನಗರ | | | ಗ್ರಾಮೀಣ ಮತ್ತು ನಗರ | | |
|---|---|---|---|---|---|---|---|---|---|
| | ಪುರುಷ | ಹೆಣ್ಣು | ಒಟ್ಟು | ಪುರುಷ | ಹೆಣ್ಣು | ಒಟ್ಟು | ಪುರುಷ | ಹೆಣ್ಣು | ಒಟ್ಟು |
| ಆಂಧ್ರಪ್ರದೇಶ | ೨.೨ | ೧.೯ | ೨.೧ | ೩.೫ | ೯.೪ | ೫.೪ | ೨.೬ | ೩.೪ | ೨.೯ |
| ಗುಜರಾತ್ | ೦.೬ | ೦.೪ | ೦.೫ | ೧.೧ | ೨.೬ | ೧.೩ | ೦.೮ | ೦.೮ | ೦.೮ |
| **ಕರ್ನಾಟಕ** | **೧.೩** | **೨.೦** | **೧.೫** | **೧.೫** | **೩.೧** | **೨.೦** | **೧.೪** | **೨.೩** | **೧.೭** |
| ಕೇರಳ | ೩.೯ | ೧೭.೬ | ೮.೮ | ೩.೦ | ೨೬.೦ | ೧೦.೩ | ೩.೬ | ೧೯.೯ | ೯.೩ |
| ಮಹಾರಾಷ್ಟ್ರ | ೧.೮ | ೧.೧ | ೧.೬ | ೨.೬ | ೫.೯ | ೩.೨ | ೨.೧ | ೨.೩ | ೨.೨ |
| ತಮಿಳುನಾಡು | ೨.೫ | ೨.೬ | ೨.೫ | ೨.೭ | ೯.೩ | ೪.೫ | ೨.೬ | ೪.೮ | ೩.೩ |
| ತೆಲಂಗಾಣ | ೧.೪ | ೧.೬ | ೧.೫ | ೩.೪ | ೧೬.೯ | ೭.೦ | ೨.೧ | ೪.೮ | ೩.೧ |
| ಒಟ್ಟು ಭಾರತ | ೨.೭ | ೩.೪ | ೨.೯ | ೩.೫ | ೧೦.೮ | ೪.೯ | ೨.೯ | ೪.೯ | ೩.೪ |

ಮೂಲ: ಉದ್ಯೋಗ ಮತ್ತು ನಿರುದ್ಯೋಗ ಸಮೀಕ್ಷೆ–೨೦೧೩–೧೪, ಕಾರ್ಮಿಕ ಬ್ಯೂರೊ, ಚಂದೀಘಡ

೧೮–೨೯ ವಯೋಮಾನದ ಗುಂಪಿನಲ್ಲಿ, ಕರ್ನಾಟಕದ ನಿರುದ್ಯೋಗ ದರವು ಪುರುಷರಲ್ಲಿ ಶೇ.೩.೯ ಮತ್ತು ಶೇ.೬.೧ ಮಹಿಳೆಯರಲ್ಲಿ ಇದ್ದು, ರಾಜ್ಯದ ಸರಾಸರಿಯು ಶೇ.೪.೬ ಇರುತ್ತದೆ. ಅಖಿಲ ಭಾರತ ಸರಾಸರಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಸುಮಾರು ಶೇ.೫.೦ ರಷ್ಟು ಕಡಿಮೆ ದರ ಇರುತ್ತದೆ. ಗುಜರಾತ್‌ನ ಎಲ್ಲಾ ಮೂರು ವರ್ಗಗಳಲ್ಲೂ ಈ ದರವು ಕಡಿಮೆ ಇರುತ್ತದೆ ಮತ್ತು ಕೇರಳದಲ್ಲಿ ಎಲ್ಲಾ ಮೂರು ವರ್ಗಗಳಲ್ಲೂ ಅತಿ ಹೆಚ್ಚಿನ ದರ ಕಂಡುಬಂದಿರುತ್ತದೆ. ಅತಿ ಹೆಚ್ಚಿನ ಈ ದರವು ಮಹಿಳೆಯ ವರ್ಗೀಕರಣದಲ್ಲಿ ಶೇ.೫೨ರಷ್ಟಿರುತ್ತದೆ ವಿವರಗಳಿಗೆ ಕೋಷ್ಟಕ ೮.೪೨ ಅನ್ನು ನೋಡಿ.

**ಕೋಷ್ಟಕ ೮.೪೨: ೧೮–೨೯ ವಯೋಮಾನ ಗುಂಪಿನ ವ್ಯಕ್ತಿಗಳ ನಿರುದ್ಯೋಗ ದರ ಸಾಮಾನ್ಯ ಪ್ರಮುಖ ಮತ್ತು ಅಂಗ ಚಟುವಟಿಕೆ ಸ್ಥಿತಿ ವಿಧಾನದಂತೆ (ಶೇಕಡಾವಾರು)**

| ರಾಜ್ಯ | ಪುರುಷ | ಹೆಣ್ಣು | ಒಟ್ಟು |
|---|---|---|---|
| ಆಂಧ್ರಪ್ರದೇಶ | ೮.೩ | ೯.೯ | ೮.೯ |
| ಗುಜರಾತ್ | ೨.೦ | ೨.೩ | ೨.೧ |
| **ಕರ್ನಾಟಕ** | **೩.೯** | **೬.೧** | **೪.೬** |
| ಕೇರಳ | ೧೩.೬ | ೫೧.೯ | ೨೭.೯ |
| ಮಹಾರಾಷ್ಟ್ರ | ೭.೨ | ೬.೭ | ೭.೧ |
| ತಮಿಳುನಾಡು | ೮.೨ | ೧೩.೩ | ೯.೯ |
| ತೆಲಂಗಾಣ | ೭.೩ | ೧೧.೨ | ೮.೯ |
| ಒಟ್ಟು ಭಾರತ | ೮.೪ | ೧೨.೪ | ೯.೨ |

ಮೂಲ: ಉದ್ಯೋಗ ಮತ್ತು ನಿರುದ್ಯೋಗ ಸಮೀಕ್ಷೆ–೨೦೧೩–೧೪, ಕಾರ್ಮಿಕ ಬ್ಯೂರೊ, ಚಂದೀಘಡ

**ನಿರುದ್ಯೋಗ ಪ್ರಮಾಣ**

ನಿರುದ್ಯೋಗ ಪ್ರಮಾಣವು ಒಟ್ಟು ಜನಸಂಖ್ಯೆಗೆ ನಿರುದ್ಯೋಗಿ ವ್ಯಕ್ತಿಗಳ ಸಂಖ್ಯೆಗಳ ಅನುಪಾತ ಆಗಿದೆ.ನಿರುದ್ಯೋಗ ದರದಲ್ಲಿ ಛೇದದಲ್ಲಿ ಒಟ್ಟು ಜನಸಂಖ್ಯೆಯನ್ನು ಬಳಸುವುದಕ್ಕೆ ಹೋಲಿಸಿದಾಗ ಈ ದರವು ಒಟ್ಟು ಜನಸಂಖ್ಯೆಯನ್ನು ಛೇದದಲ್ಲಿ ಬಳಸುತ್ತದೆ ಎಂದರೆ, ಒಟ್ಟು ಜನಸಂಖ್ಯೆಗೆ ಹೋಲಿಸಿದಾಗ ಕಾರ್ಮಿಕ ಶಕ್ತಿಯು ಕಡಿಮೆ ಇದ್ದು ಮತ್ತು ದರ ಅಂದಾಜು ಅದೇ ವರ್ಗೀಕರಣದ ನಿರುದ್ಯೋಗ ದರಕ್ಕಿಂತ ಕಡಿಮೆ ಇರುತ್ತದೆ.ಕಡಿಮೆ ನಿರುದ್ಯೋಗ ಪ್ರಮಾಣವು ರಾಜ್ಯದ ಉದ್ಯೋಗ ಚಿತ್ರಣದ ಒಂದು ಉತ್ತಮ ಸೂಚ್ಯಂಕವಾಗಿರುತ್ತದೆ.

ಸಾಮಾನ್ಯ ಪ್ರಮುಖ ಮತ್ತು ಅಂಗ ಚಟುವಟಿಕೆ ಸ್ಥಿತಿ ವಿಧಾನವು ನಿರುದ್ಯೋಗ ಪ್ರಮಾಣವು ಹೋಲಿಕೆ ಮಾಡಬಹುದಾದ ಎಲ್ಲಾ ರಾಜ್ಯಗಳ ಪೈಕಿ ಕರ್ನಾಟಕದಲ್ಲಿ ಶೇ.೧ ಅತೀ ಕಡಿಮೆ ದರ ಇರುವುದನ್ನು ಸೂಚಿಸುತ್ತದೆ.

ಈ ಪ್ರಮಾಣವು ಗ್ರಾಮೀಣ ಪ್ರದೇಶದ ಪುರುಷ ಹಾಗೂ ಮಹಿಳೆಯರಲ್ಲಿ ಕ್ರಮವಾಗಿ ಶೇ.೧.೧ ಮತ್ತು ಶೇ.೦.೮ ಇದ್ದು, ಅದೇ ಸಂಬಂಧಿತ ಅಂಕಿಅಂಶಗಳು ನಗರ ಪ್ರದೇಶದ ಪುರುಷ ಹಾಗೂ ಮಹಿಳೆಯರಲ್ಲಿ ಕ್ರಮವಾಗಿ ಶೇ.೧.೨ ಮತ್ತು ಶೇ.೦.೯ ರಷ್ಟು ಇರುತ್ತದೆ.

ಕರ್ನಾಟಕದಲ್ಲಿನ ನಿರುದ್ಯೋಗ ಪ್ರಮಾಣವು ಅಖಿಲ ಭಾರತ ಸರಾಸರಿಗಿಂತ ಕಡಿಮೆಯಿರುತ್ತದೆ. ಹೋಲಿಕೆ ಮಾಡಬಹುದಾದ ಎಲ್ಲಾ ರಾಜ್ಯಗಳ ಪೈಕಿ ಗುಜರಾತ್‌ನ ಎಲ್ಲಾ ವರ್ಗೀಕರಣದಲ್ಲಿ ಅತಿ ಕಡಿಮೆ ನಿರುದ್ಯೋಗ ಪ್ರಮಾಣ ಕಂಡುಬಂದಿರುತ್ತದೆ ಹಾಗೂ ಈ ಪ್ರಮಾಣವು ಕೇರಳದ ಎಲ್ಲಾ ವರ್ಗೀಕರಣದಲ್ಲಿ ಅತಿ ಹೆಚ್ಚಿನದಾಗಿರುತ್ತದೆ. ವಿವರಗಳಿಗೆ ಕೋಷ್ಟಕ ೮.೪೩ರಲ್ಲಿ ನೋಡಿ.

**ಕೋಷ್ಟಕ ೮.೪೩: ೧೫ ವರ್ಷ ಮತ್ತು ಮೇಲ್ಪಟ್ಟ ವ್ಯಕ್ತಿಗಳ ನಿರುದ್ಯೋಗ ಪ್ರಮಾಣ ಸಾಮಾನ್ಯ ಪ್ರಮುಖ ಮತ್ತು ಅಂಗ ಚಟುವಟಿಕೆ ಸ್ಥಿತಿ ವಿಧಾನದಂತೆ (ಶೇಕಡಾವಾರು)**

| ರಾಜ್ಯ | ಗ್ರಾಮೀಣ | | | ನಗರ | | | ಗ್ರಾಮೀಣ ಮತ್ತು ನಗರ | | |
|---|---|---|---|---|---|---|---|---|---|
| | ಪುರುಷ | ಹೆಣ್ಣು | ವ್ಯಕ್ತಿ | ಪುರುಷ | ಹೆಣ್ಣು | ವ್ಯಕ್ತಿ | ಪುರುಷ | ಹೆಣ್ಣು | ವ್ಯಕ್ತಿ |
| ಆಂಧ್ರಪ್ರದೇಶ | ೧.೯ | ೧.೧ | ೧.೫ | ೨.೮ | ೩.೩ | ೩.೦ | ೨.೧ | ೧.೭ | ೧.೯ |
| ಗುಜರಾತ್ | ೦.೫ | ೦.೧ | ೦.೩ | ೦.೮ | ೦.೩ | ೦.೬ | ೦.೬ | ೦.೨ | ೦.೪ |
| ಕರ್ನಾಟಕ | ೧.೧ | ೦.೮ | ೦.೯ | ೧.೨ | ೦.೯ | ೧.೦ | ೧.೧ | ೦.೮ | ೧.೦ |
| ಕೇರಳ | ೨.೯ | ೬.೫ | ೪.೮ | ೨.೧ | ೭.೯ | ೫.೧ | ೨.೭ | ೬.೯ | ೪.೯ |
| ಮಹಾರಾಷ್ಟ್ರ | ೧.೫ | ೦.೫ | ೧.೦ | ೧.೮ | ೧.೨ | ೧.೫ | ೧.೬ | ೦.೮ | ೧.೨ |
| ತಮಿಳುನಾಡು | ೨.೦ | ೧.೪ | ೧.೭ | ೨.೦ | ೨.೭ | ೨.೪ | ೨.೦ | ೨.೦ | ೨.೦ |
| ತೆಲಂಗಾಣ | ೧.೨ | ೧.೨ | ೧.೨ | ೨.೫ | ೪.೮ | ೩.೬ | ೧.೭ | ೨.೫ | ೨.೧ |
| ಒಟ್ಟು ಭಾರತ | ೨.೧ | ೧.೨ | ೧.೭ | ೨.೬ | ೨.೧ | ೨.೪ | ೨.೨ | ೧.೫ | ೧.೯ |

ಮೂಲ: ಉದ್ಯೋಗ ಮತ್ತು ನಿರುದ್ಯೋಗ ಸಮೀಕ್ಷೆ–೨೦೧೩–೧೪, ಕಾರ್ಮಿಕ ಬ್ಯೂರೊ, ಚಂಡೀಘಡ

### ಶಿಕ್ಷಣ ಮತ್ತು ಸಾಮಾಜಿಕ ವರ್ಗ ಆಧಾರಿತ ಉದ್ಯೋಗ

ಪ್ರತೀ ಸಾಮಾಜಿಕ ಗುಂಪಿನಲ್ಲಿ ವ್ಯಕ್ತಿಗಳ ಶೈಕ್ಷಣಿಕ ಅರ್ಹತೆಗೆ ಅನುಗುಣವಾಗಿ ಉದ್ಯೋಗ ಹೊಂದಿರುವವರು, ನಿರುದ್ಯೋಗಿಗಳು ಮತ್ತು ಕಾರ್ಮಿಕ ಶಕ್ತಿಯಲ್ಲಿ ಇಲ್ಲದೇ ಇರುವುದನ್ನು ಅಂದಾಜಿಸಲಾಗಿದೆ.ಇದಕ್ಕಾಗಿ ಪ್ರತೀ ಸಾಮಾಜಿಕ ಗುಂಪಿನಲ್ಲಿ, ಪ್ರತಿಯೊಂದು ಶೈಕ್ಷಣಿಕ ಅರ್ಹತೆಗೆ ಅನುಗುಣವಾಗಿ ಒಂಭತ್ತು ವರ್ಗೀಕರಣಗಳಲ್ಲಿ ಅಂದಾಜಿಸಲಾಗಿದೆ.ಸಾಮಾನ್ಯ ಪ್ರಧಾನ ಸ್ಥಿತಿ ವಿಧಾನದಡಿ ನಡೆಸಲಾದ ಸಮೀಕ್ಷೆ ಆಧಾರದ ಮೇಲೆ ಉದ್ಯೋಗ ಹೊಂದಿರುವವರು, ನಿರುದ್ಯೋಗಿಗಳು ಮತ್ತು ಕಾರ್ಮಿಕ ಶಕ್ತಿಯಲ್ಲಿ ಇಲ್ಲದೇ ಇರುವುದನ್ನು ವರ್ಗೀಕರಣ ಮಾಡಲಾಗಿದೆ.ಕರ್ನಾಟಕ ಮತ್ತು ಅಖಿಲ ಭಾರತ ಮಟ್ಟದ ಸರಾಸರಿ ದರಗಳು, ಗ್ರಾಮೀಣ ಮತ್ತು ನಗರ ಪ್ರದೇಶ ಹಾಗೂ ಪುರುಷ ಮತ್ತು ಮಹಿಳೆ ಈ ವರ್ಗಗಳನ್ನು ತುಲನಾತ್ಮಕ ವಿಶ್ಲೇಷಣೆ ಮಾಡಲು ಉಪಯೋಗಿಸಲಾಗಿದೆ.

ಕರ್ನಾಟಕದೊಂದಿಗೆ ತಮಿಳುನಾಡು, ಆಂಧ್ರಪ್ರದೇಶ, ಕೇರಳ, ತೆಲಂಗಾಣಾ, ಗುಜರಾತ್ ಮತ್ತು ಅಖಿಲ ಭಾರತ ಮಟ್ಟದ ಅಂಕಿ ಅಂಶಗಳೊಂದಿಗೆ ಉದ್ಯೋಗಾಧಾರಿತ ಕಾರ್ಮಿಕರ ವಿಂಗಡಣೆ ಹೋಲಿಕೆಗಾಗಿ ಪ್ರಯತ್ನ ಮಾಡಲಾಗಿದೆ. ಈ ವಿಶ್ಲೇಷಣೆಗಾಗಿ ಹತ್ತು ವೃತ್ತಿಗಳನ್ನು ಪರಿಗಣಿಸಲಾಗಿದೆ. ವಿವರಗಳಿಗೆ ಕೋಷ್ಟಕ ೮.೪೪ ಅನ್ನು ನೋಡಿ.

**ಕೋಷ್ಟಕ ೮.೪೪: ಸಾಮಾನ್ಯ ಪ್ರಧಾನ ಚಟುವಟಿಕೆ ಮತ್ತು ಅಂಗಚಟುವಟಿಕೆ ಆಧಾರದಂತೆ ೧೫ ವರ್ಷಕ್ಕಿಂತ ಮೇಲ್ಪಟ್ಟು ಕೆಲಸಗಾರರ ವೃತ್ತಿ ಆಧಾರಿತ ವಿಂಗಡಣೆ: ವೃತ್ತಿ ಆಧಾರಿತ ಕೆಲಸಗಾರರ ಶೇಕಡವಾರು ವಿಂಗಡಣೆ**

| ವಿವರ | ಆಂಧ್ರಪ್ರದೇಶ | ಗುಜರಾತ್ | ಕರ್ನಾಟಕ | ಕೇರಳ | ಮಹಾರಾಷ್ಟ್ರ | ತಮಿಳುನಾಡು | ತೆಲಂಗಾಣ | ಅಖಿಲ ಭಾರತ |
|---|---|---|---|---|---|---|---|---|
| ಸಚಿವಾಲಯ, ಹಿರಿಯ ಅಧಿಕಾರಿ ಮತ್ತು ವ್ಯವಸ್ಥಾಪಕರು | ೦.೭ | ೧.೫ | ೦.೭ | ೧.೨ | ೧.೦ | ೧.೪ | ೧.೨ | ೦.೭ |
| ವೃತ್ತಿಪರರು | ೨.೪ | ೨.೩ | ೩.೨ | ೫.೨ | ೩.೩ | ೩.೮ | ೪.೮ | ೨.೭ |
| ತಾಂತ್ರಿಕ ಮತ್ತು ಸಂಬಂಧಿತ ವೃತ್ತಿಪರರು | ೩.೪ | ೩.೫ | ೪.೮ | ೬.೧ | ೪.೪ | ೪.೫ | ೪.೩ | ೪.೨ |
| ಸಹಾಯಕರು | ೨.೩ | ೨.೮ | ೪.೧ | ೪.೬ | ೪.೮ | ೩.೯ | ೨.೮ | ೩.೧ |
| ಸೇವಾ ಕೆಲಸಗಾರರು ಮತ್ತು ಅಂಗಡಿ, ಮಾರುಕಟ್ಟೆ ವ್ಯಾಪಾರಗಾರರು | ೧೧.೨ | ೧೩.೩ | ೧೨.೯ | ೧೫.೫ | ೧೫.೭ | ೧೨.೫ | ೯.೫ | ೧೩.೨ |

| | | | | | | | | |
|---|---|---|---|---|---|---|---|---|
| ಕೃಷಿ ಮತ್ತು ಮೀನುಗಾರಿಕೆ ಕೆಲಸಗಾರರು | ೧೮.೪ | ೩೦.೫ | ೨೩.೭ | ೮.೫ | ೨೮.೭ | ೧೨.೧ | ೨೮.೫ | ೩೦.೫ |
| ಕ್ರಾಫ್ಟ್ಸ್ ಮತ್ತು ಸಂಬಂಧಿತ ಉದ್ಯೋಗಿಗಳು | ೮.೭ | ೧೦.೨ | ೯.೬ | ೧೩.೮ | ೭.೩ | ೧೬.೩ | ೧೦೩ | ೮.೮ |
| ಕಾರ್ಖಾನೆ ಮತ್ತು ಯಂತ್ರ ನಿರ್ವಾಹಕ ಮತ್ತು ಜೋಡಣೆಗಾರರು | ೩.೮ | ೬.೮ | ೫.೧ | ೮.೩ | ೫.೦ | ೭.೦ | ೪.೫ | ೪೬ |
| ಪ್ರಾಥಮಿಕ ಉದ್ಯೋಗಿಗಳು | ೪೯.೧ | ೨೯.೩ | ೩೫.೮ | ೩೭.೯ | ೨೯.೮ | ೩೮.೫ | ೩೩.೭ | ೩೨.೨ |
| ಉದ್ಯೋಗಾಧಾರಿತ ಹಂಚಿಕೆ ಮಾಡದ ಜನರು | - | - | - | - | - | - | - | - |

ಮೂಲ: ಉದ್ಯೋಗ ಮತ್ತು ನಿರುದ್ಯೋಗ ಸಮೀಕ್ಷೆ-೨೦೧೩-೧೪, ಕಾರ್ಮಿಕ ಬ್ಯೂರೊ, ಚಂಡೀಘಡ

## ಮುಖ್ಯ ಮತ್ತು ಅತೀ ಸಣ್ಣ ಕೆಲಸಗಾರರು

ರಾಜ್ಯದಲ್ಲಿರುವ ಒಟ್ಟಾರೆ ೨,೭೮,೭೨,೫೯೭ ಕೆಲಸಗಾರರಲ್ಲಿ ೨,೩೩,೯೭.೧೮೧ ಮಂದಿ ಮುಖ್ಯ ಕೆಲಸಗಾರರಿದ್ದು, ಶೇಕಡ ೮೩.೯೪ ರಷ್ಟಿರುತ್ತಾರೆ. ಮತ್ತು ೪೪,೭೭,೪೧೬ ಮಂದಿ ಅಂದರೆ ಶೇಕಡ ೧೬.೧೬ ರಷ್ಟು ಮಂದಿ ಅತೀ ಸಣ್ಣ ಕೆಲಸಗಾರರಿರುತ್ತಾರೆ. ಮುಖ್ಯ ಕೆಲಸಗಾರರ ಭಾಗವು ೨೦೦೧ ರಲ್ಲಿಶೇಕಡ ೮೨.೨೮ ರಿಂದ ೮೩.೯೪ಕ್ಕೆ ಅತೀ ಸಣ್ಣ ಪ್ರಮಾಣದ ಹೆಚ್ಚುವರಿಯನ್ನು (ಕೋಷ್ಟಕ ೮.೫೩) ವಿರುದ್ಧವಾಗಿ ಅತೀ ಸಣ್ಣ ಕೆಲಸಗಾರರ ಪ್ರಮಾಣದಲ್ಲಿ ಸ್ವಲ್ಪವೇ ಇಳಿಕೆಯಾಗಿದ್ದು, ೨೦೦೧ರ ಶೇಕಡ ೧೭.೭೨ ರಿಂದ ೨೦೧೧ಕ್ಕೆ ಶೇ.೧೬.೦೬ಕ್ಕೆ (ಕೋಷ್ಟಕ ೮.೪೭) ಇಳಿಕೆಯಾಗಿದೆ. ಪುರುಷ ಮುಖ್ಯ ಕೆಲಸಗಾರರ ಪ್ರಮಾಣವು ೨೦೦೧ರ ಶೇಕಡ ೯೧.೨೧ ರಿಂದ ೨೦೧೧ರಲ್ಲಿ ಶೇಕಡ ೮೯.೪೯ ಕ್ಕೆ ಇಳಿಕೆಯಾಗಿದ್ದರೆ, ಮಹಿಳಾ ಮುಖ್ಯ ಕೆಲಸಗಾರರ ಪ್ರಮಾಣವು ಇದೇ ಅವಧಿಯಲ್ಲಿ ಶೇಕಡ ೬೫.೮೮ ರಿಂದ ೭೩.೩೯ಕ್ಕೆ ಏರಿಕೆಯಾಗಿದೆ. ಅತೀ ಸಣ್ಣ ಕೆಲಸಗಾರರಲ್ಲಿ ಪುರುಷ ಅತೀ ಸಣ್ಣ ಕೆಲಸಗಾರರ ಪ್ರಮಾಣವು ಸ್ವಲ್ಪವೇ ಏರಿಕೆಯನ್ನು ದಾಖಲಿಸಿದ್ದು, ಇದು ೨೦೦೧ರ ಶೇಕಡ ೮.೭೯ ರಿಂದ ೨೦೧೧ರಲ್ಲಿ ಶೇಕಡ ೧೦.೫೧ಕ್ಕೆ ಏರಿಕೆಯಾಗಿದೆ, ಹಾಗೆಯೇ ಮಹಿಳಾ ಅತೀ ಸಣ್ಣ ಕೆಲಸಗಾರರ ಪ್ರಮಾಣವು ಶೇಕಡ ೩೪.೧೨ ರಿಂದ ಶೇಕಡ ೨೬.೬೧ಕ್ಕೆ ಇಳಿಕೆಯಾಗಿದೆ.

ರಾಜ್ಯದಲ್ಲಿ ೨೦೧೧ರ ಜನಗಣತಿಯಂತೆ ೨,೭೮,೭೨,೫೯೭ ಮಂದಿ ಒಟ್ಟು ಕೆಲಸಗಾರರಿದ್ದು, ಇವರಲ್ಲಿ ೨,೩೩,೯೭,೧೮೧ ಮಂದಿ ಮುಖ್ಯ ಕೆಲಸಗಾರರು ಹಾಗೂ ೪೪,೭೫,೪೧೬ ಮಂದಿ ಒಟ್ಟು ಸೀಮಾಂತ ಕೆಲಸಗಾರರು ಸೇರಿದ್ದರು. ಒಟ್ಟು ೨,೩೩,೯೭,೧೮೧ ಮುಖ್ಯ ಕೆಲಸಗಾರರಲ್ಲಿ, ೬೦೩೮೩೦೯ ಮಂದಿ ಸಾಗುವಳಿದಾರರು, ೫೧,೧೯,೯೨೧ ಮಂದಿ ಕೃಷಿ ಕಾರ್ಮಿಕರು, ೬,೯೫,೮೪೧ ಮಂದಿ ಗೃಹ ಕೈಗಾರಿಕಾ ಕೆಲಸಗಾರರು ಹಾಗೂ ೧,೧೫,೪೩,೧೧೦ ಇತರೆ ಕೆಲಸಗಾರರು ಸೇರಿದ್ದರು. ೪೪,೭೫,೪೧೬ ಮಂದಿ ಒಟ್ಟು ಸಿಮಾಂತ ಕೆಲಸಗಾರರಿದ್ದು, ಇವರಲ್ಲಿ ೫,೪೨,೩೪೦ ಮಂದಿ ಸಾಗುವಳಿದಾರರು, ೨೦,೩೬,೦೪೨ ಮಂದಿ ಕೃಷಿ ಕಾರ್ಮಿಕರು, ೨,೧೭,೩೮೬ ಮಂದಿ ಗೃಹ ಕೈಗಾರಿಕಾ ಕೆಲಸಗಾರರು ಹಾಗೂ ೧೬,೭೯,೬೪೮ ಮಂದಿ ಇತರೆ ಕೆಲಸಗಾರರು ಸೇರಿದ್ದರು. ಹೆಚ್ಚಿನ ವಿವರಗಳಿಗೆ ಕೋಷ್ಟಕ ೮.೪೫ನ್ನು ನೋಡಿ.

**ಕೋಷ್ಟಕ: ೮.೪೫ ೨೦೧೧ರ ಜನಗಣತಿಯಂತೆ ಕೆಲಸಗಾರರ ವಿವರ**

| ಹೆಸರು | | ಒಟ್ಟು ಕೆಲಸಗಾರರು | ಒಟ್ಟು ಪುರುಷ ಕೆಲಸಗಾರರು | ಒಟ್ಟು ಮಹಿಳೆ ಕೆಲಸಗಾರರು | ಒಟ್ಟು ಮುಖ್ಯ ಕೆಲಸಗಾರರು | ಮುಖ್ಯ ಕೆಲಸಗಾರರು ಪುರುಷರು | ಮುಖ್ಯ ಕೆಲಸಗಾರರು ಮಹಿಳೆಯರು |
|---|---|---|---|---|---|---|---|
| | | ೧ | ೨ | ೩ | ೪ | ೫ | ೬ |
| ಕರ್ನಾಟಕ | ಒಟ್ಟು | ೨೭೮೭೨೫೯೭ | ೧೮೨೭೦೧೧೬ | ೯೬೦೨೪೮೧ | ೨೩೩೯೭೧೮೧ | ೧೬೩೪೯೮೩೭ | ೭೦೪೭೩೪೪ |
| | ಗ್ರಾಮೀಣ | ೧೮೫೦೨೨೩೦ | ೧೧೩೧೧೪೨೬ | ೭೧೯೦೮೦೪ | ೧೫೦೬೦೯೦೫ | ೧೦೦೦೩೦೨೧ | ೫೦೫೭೮೮೪ |
| | ನಗರ | ೯೩೭೦೩೬೭ | ೬೯೫೮೬೯೦ | ೨೪೧೧೬೭೭ | ೮೩೩೬೨೭೬ | ೬೩೪೬೮೧೬ | ೧೯೮೯೪೬೦ |
| | | | | | | | |
| ಹೆಸರು | | ಒಟು ಮುಖ್ಯ ಸಾಗುವ ಆದಾರರರು | ಮುಖ್ಯ ಸಾಗುವಆದಾರರು ಪುರುಷರು | ಮುಖ್ಯ ಸಾಗುವ ಆದಾರರು ಮಹಿಳೆಯರು | ಒಟ್ಟು ಮುಖ್ಯ ಕೃಷಿ ಕಾರ್ಮಿಕರು | ಮುಖ್ಯ ಕೃಷಿಕಾರ್ಮಿಕರು ಪುರುಷರು | ಮುಖ್ಯ ಕೃಷಿಕಾರ್ಮಿಕರು ಮಹಿಳೆಯರು |

| | | | | | | | |
|---|---|---|---|---|---|---|---|
| | | ೭ | ೮ | ೯ | ೧೦ | ೧೧ | ೧೨ |
| ಕರ್ನಾಟಕ | ಒಟ್ಟು | ೬೦೩೮೩೦೯ | ೪೫೫೮೫೦೫ | ೧೪೬೯೮೦೪ | ೫೧೧೯೯೨೧ | ೨೬೦೯೦೯೮ | ೨೫೧೦೮೨೩ |
| | ಗ್ರಾಮೀಣ | ೫೮೨೪೭೦೨ | ೪೩೯೪೬೧೩ | ೧೪೩೦೦೮೯ | ೪೭೯೫೭೬೩ | ೨೪೧೫೬೫೭ | ೨೩೮೦೧೦೬ |
| | ನಗರ | ೨೧೩೬೦೭ | ೧೬೩೮೯೨ | ೩೯೭೧೫ | ೩೨೪೧೫೮ | ೧೯೩೪೪೧ | ೧೩೦೭೧೭ |
| | | | | | | | |
| | | | | | | | |
| ಹೆಸರು | | ಒಟ್ಟು ಗೃಹ ಕೈಗಾರಿಕರು | ಮುಖ್ಯ ಗೃಹ ಕೈಗಾರಿಕರು ಪುರುಷರು | ಮುಖ್ಯ ಗೃಹ ಕೈಗಾರಿಕರು ಮಹಿಳೆಯರು | ಒಟ್ಟು ಇತರ ಕೆಲಸಗಾರರು | ಮುಖ್ಯ ಇತರ ಕೆಲಸಗಾರರು ಪುರುಷರು | ಮುಖ್ಯ ಇತರ ಕೆಲಸಗಾರರು ಮಹಿಳೆಯರು |
| | | ೧೩ | ೧೪ | ೧೫ | ೧೬ | ೧೭ | ೧೮ |
| ಕರ್ನಾಟಕ | ಒಟ್ಟು | ೬೯೫೮೪೧ | ೩೫೩೫೧೩ | ೩೪೨೩೨೮ | ೧೧೫೪೩೧೧೦ | ೮೮೧೮೭೨೧ | ೨೭೨೪೩೮೯ |
| | ಗ್ರಾಮೀಣ | ೩೭೮೬೯೧ | ೧೭೮೩೧೧ | ೨೦೦೩೮೦ | ೪೦೬೧೭೪೯ | ೩೦೧೪೪೪೦ | ೧೦೪೭೩೦೯ |
| | ನಗರ | ೩೧೭೧೫೦ | ೧೭೫೨೦೨ | ೧೪೧೯೪೮ | ೭೪೮೧೩೬೧ | ೫೮೦೪೨೮೧ | ೧೬೭೭೦೮೦ |
| | | | | | | | |
| ಹೆಸರು | | ಒಟ್ಟು ಸೀಮಾಂತ ಕೆಲಸಗಾರರು | ಸೀಮಾಂತ ಕೆಲಸಗಾರರು ಪುರುಷರು | ಸೀಮಾಂತ ಕೆಲಸಗಾರರು ಮಹಿಳೆಯರು | ಒಟ್ಟು ಸೀಮಾಂತ ಸಾಗುವಳಿ ದಾರರು | ಸೀಮಾಂತ ಸಾಗುವಳಿದಾರರು ಪುರುಷರು | ಸೀಮಾಂತ ಸಾಗುವಳಿದಾರರು ಮಹಿಳೆಯರು |
| | | ೧೯ | ೨೦ | ೨೧ | ೨೨ | ೨೩ | ೨೪ |
| ಕರ್ನಾಟಕ | ಒಟ್ಟು | ೪೪೭೫೪೧೬ | ೧೯೨೦೨೭೯ | ೨೫೫೫೧೩೭ | ೩೪೨೩೪೦ | ೧೮೫೨೦೩ | ೩೫೭೧೩೭ |
| | ಗ್ರಾಮೀಣ | ೩೪೪೧೩೨೫ | ೧೩೦೮೪೦೫ | ೨೧೩೨೯೨೦ | ೩೧೬೨೨೮ | ೧೭೧೦೬೪ | ೩೪೫೧೬೪ |
| | ನಗರ | ೧೦೩೪೦೯೧ | ೬೧೧೮೭೪ | ೪೨೨೨೧೭ | ೨೬೧೧೨ | ೧೪೧೩೯ | ೧೧೯೭೩ |
| | | | | | | | |
| ಹೆಸರು | | ಒಟ್ಟು ಸೀಮಾಂತ ಕೃಷಿ ಕಾರ್ಮಿಕರು | ಸೀಮಾಂತ ಕೃಷಿ ಕಾರ್ಮಿಕರು ಪುರುಷರು | ಸೀಮಾಂತ ಕೃಷಿ ಕಾರ್ಮಿಕರು ಮಹಿಳೆಯರು | ಒಟ್ಟು ಸೀಮಾಂತ ಗೃಹ ಕೈಗಾರಿಕರು | ಸೀಮಾಂತ ಗೃಹ ಕೈಗಾರಿಕರು ಪುರುಷರು | ಸೀಮಾಂತ ಗೃಹ ಕೈಗಾರಿಕರು ಮಹಿಳೆಯರು |
| | | ೨೫ | ೨೬ | ೨೭ | ೨೮ | ೨೯ | ೩೦ |
| ಕರ್ನಾಟಕ | ಒಟ್ಟು | ೨೦೩೬೦೪೨ | ೬೭೪೧೮೧ | ೧೩೬೧೮೬೧ | ೨೧೭೩೮೬ | ೮೫೪೭೦ | ೧೩೧೯೧೬ |
| | ಗ್ರಾಮೀಣ | ೧೯೪೧೪೫೦ | ೬೩೧೪೫೯ | ೧೩೦೯೯೯೧ | ೧೪೩೯೦೯ | ೫೨೧೭೫ | ೯೧೭೩೪ |
| | ನಗರ | ೯೪೫೯೨ | ೪೨೭೨೨ | ೫೧೮೭೦ | ೭೩೪೭೭ | ೩೩೨೯೫ | ೪೦೧೮೨ |
| | | | | | | | |
| ಹೆಸರು | | ಒಟ್ಟು ಸೀಮಾಂತ ಇತರ ಕೆಲಸಗಾರರು | ಸೀಮಾಂತ ಇತರ ಕೆಲಸಗಾರರು ಪುರುಷರು | ಸೀಮಾಂತ ಇತರ ಕೆಲಸಗಾರರು ಮಹಿಳೆಯರು | | | |
| | | ೩೧ | ೩೨ | ೩೩ | | | |
| ಕರ್ನಾಟಕ | ಒಟ್ಟು | ೧೬೭೯೬೪೮ | ೯೭೫೪೨೫ | ೭೦೪೨೨೩ | | | |
| | ಗ್ರಾಮೀಣ | ೮೩೯೭೩೮ | ೪೫೩೭೦೭ | ೩೮೬೦೩೧ | | | |
| | ನಗರ | ೮೩೯೯೧೦ | ೫೨೧೭೧೮ | ೩೧೮೧೯೨ | | | |

## ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮವು ೫ ಜಿಲ್ಲೆಗಳಲ್ಲಿ ದಿನಾಂಕ ೦೨-೦೨-೨೦೦೬ ರಿಂದ ಕಾರ್ಯಾಚರಣೆಗೆ ಬಂದಿದೆ. ಮೊದಲನೇ ಹಂತದಲ್ಲಿ ಬೀದರ್, ಗುಲಬರ್ಗ, ರಾಯಚೂರು, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗಿದೆ.ಎರಡನೇ ಹಂತದಲ್ಲಿ ಈ ಯೋಜನೆಯನ್ನು ದಿನಾಂಕ ೦೧-೦೪-೨೦೦೭ ರಿಂದ ಜಾರಿಗೆ ಬರುವಂತೆ ಬೆಳಗಾಂ, ಬಳ್ಳಾರಿ, ಚಿಕ್ಕಮಗಳೂರು, ಹಾಸನ, ಶಿವಮೊಗ್ಗ ಮತ್ತು ಕೊಡಗು ಜಿಲ್ಲೆಗಳಿಗೆ ವಿಸ್ತರಿಸಲಾಗಿದೆ.ಈ ಯೋಜನೆಯನ್ನು ದಿನಾಂಕ ೦೧-೦೪-೨೦೦೮ ರಿಂದ ಜಾರಿಗೆ ಬರುವಂತೆ ರಾಜ್ಯದ ಎಲ್ಲಾ ೩೦ ಜಿಲ್ಲೆಗಳಿಗೆ ವಿಸ್ತರಿಸಲಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಕುಶಲವಲ್ಲದ ದೈಹಿಕ ಶ್ರಮದ ಕೆಲಸ ಬಯಸುವ ಪ್ರತಿಯೊಂದು ಕುಟುಂಬದ ವಯಸ್ಕ ಸದಸ್ಯರಿಗೆ ಆರ್ಥಿಕ ವರ್ಷ ಒಂದರಲ್ಲಿ ಕನಿಷ್ಠ ನೂರು ದಿನಗಳ ಉದ್ಯೋಗ ಖಾತ್ರಿಯನ್ನು ಒದಗಿಸಿ ಜೀವನಾವಶ್ಯಕವನ್ನು ಉತ್ತಮಪಡಿಸುವುದು ಈ ಅಧಿನಿಯಮದ ಉದ್ದೇಶವಾಗಿದೆ.ಉದ್ಯೋಗ ಕೋರಿ ಅರ್ಜಿ ಸಲ್ಲಿಸಿದ ೧೫ ದಿನಗಳೊಳಗಾಗಿ ಉದ್ಯೋಗ ಒದಗಿಸದಿದ್ದಲ್ಲಿ ನಿರುದ್ಯೋಗ ಭತ್ಯೆಯನ್ನು ನೀಡಬೇಕಾಗುತ್ತದೆ.ಈ ಯೋಜನೆಯು ಬಹುಬಾಳಿಕೆಯ ಸ್ವತ್ತುಗಳನ್ನು ನಿರ್ಮಿಸುವುದು, ಪರಿಸರ ಸಂರಕ್ಷಣೆ ಮಾಡುವುದು ಮತ್ತು ಗ್ರಾಮೀಣ ಮಹಿಳೆಯರನ್ನು ಸಬಲೀಕರಣ ಮಾಡುವುದು, ಗ್ರಾಮೀಣ ಜನರು ನಗರಗಳಿಗೆ ವಲಸೆ ಹೋಗುವುದನ್ನು ಕಡಿಮೆ ಮಾಡುವುದು ಮೊದಲಾದ ಧ್ಯೇಯಗಳನ್ನು ಹೊಂದಿರುತ್ತದೆ. ಈ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವೆಚ್ಚ ಹಂಚಿಕೆ ಆಧಾರದ ಮೇಲೆ ಖರ್ಚನ್ನು ಭರಿಸುತ್ತವೆ. ಕೂಲಿ ಮೊತ್ತವನ್ನು ಕೇಂದ್ರ ಸರ್ಕಾರವು ಪೂರ್ತಿಯಾಗಿ ಭರಿಸುತ್ತದೆ, ಸಾಮಗ್ರಿಗಳ ವೆಚ್ಚವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರತಿಶತ ೬೦:೪೦ ರ ಅನುಪಾತದಲ್ಲಿ ಭರಿಸುತ್ತವೆ. ೨೦೧೫-೧೬ನೇ ಸಾಲಿನಲ್ಲಿ ಲಭ್ಯವಿರುವ ಅನುದಾನವು ರೂ.೨೫೮೭.೩೫ ಕೋಟಿ, ಇದರ ಪೈಕಿ ಡಿಸೆಂಬರ್ ೨೦೧೫ರ ಅಂತ್ಯದವರೆಗೆ ರೂ.೯೧೬.೫೧ ಕೋಟಿಗಳ ವೆಚ್ಚವನ್ನು ಭರಿಸಲಾಗಿದೆ. ೨೩೮.೬೭ ಲಕ್ಷ ಮಾನವ ದಿನಗಳ ಉದ್ಯೋಗವನ್ನು ಸೃಜಿಸಲಾಗಿದೆ. ಇದರಿಂದ ೬.೬೫ ಲಕ್ಷ ಕುಟುಂಬಗಳು ಪ್ರಯೋಜನವನ್ನು ಪಡೆದಿರುತ್ತವೆ. ಒಟ್ಟಾರೆ ವಿವರಗಳನ್ನು ಕೋಷ್ಟಕ ೮.೪೬ ಮತ್ತು ೮.೪೭ ರಲ್ಲಿ ನೀಡಲಾಗಿದೆ.

### ಕೋಷ್ಟಕ ೮.೪೬: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸಾಧಿಸಿದ ಪ್ರಗತಿಯ ವಿವರ

| ವರ್ಷ | ಲಭ್ಯವಿರುವ ಮೊತ್ತ (ರೂ. ಲಕ್ಷಗಳಲ್ಲಿ) | ವೆಚ್ಚ (ರೂ. ಲಕ್ಷಗಳಲ್ಲಿ) | ಮಾನವ ದಿನಗಳ ಸಂಖ್ಯೆ (ಲಕ್ಷಗಳಲ್ಲಿ) | ಉದ್ಯೋಗ ನೀಡಿರುವುದು (ಕುಟುಂಬಗಳ ಸಂಖ್ಯೆ) | ಕಾಮಗಾರಿಗಳು (ಸಂಖ್ಯೆ) | | |
|---|---|---|---|---|---|---|---|
| | | | | | ಕೈಗೆತ್ತಿಕೊಳ್ಳಲಾದ | ಪೂರ್ಣಗೊಂಡಿರುವುದು | ಪ್ರಗತಿಯಲ್ಲಿರುವುದು |
| ೨೦೧೪-೧೫ (೩೦ ಜಿಲ್ಲೆ) | ೧೯೦೩.೪೩ | ೧೩೮೦.೧೭ | ೪೩೪.೭೫ | ೧೦.೯೭ | ೧೨೫೩೩೧೨ | ೧೩೨೫೯೪ | ೧೧೨೦೭೧೮ |
| ೨೦೧೫-೧೬ | ೧೧೪೩.೨೭ | ೯೧೬.೫೭ | ೨೩೮.೬೭ | ೬.೬೫ | ೯೦೮೨೨೯ | ೧೮೩೯೩೬ | ೭೨೪೨೯೩ |

*ರಾಜ್ಯ ಮಟ್ಟದಲ್ಲಿ ಲಭ್ಯವಿರುವ ಮೊತ್ತ ಹಾಗೂ ವೆಚ್ಚವನ್ನು ಒಳಗೊಂಡಿರುತ್ತದೆ   ಮೂಲ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರ *(ಡಿಸೆಂಬರ್ ೨೦೧೫ ರವರೆಗೆ)

### ಕೋಷ್ಟಕ ೮.೪೭: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸಾಧಿಸಿದ ಭೌತಿಕ ಪ್ರಗತಿ- ೨೦೧೫-೧೬ (ಡಿಸೆಂಬರ್ ೨೦೧೫ರ ಅಂತ್ಯದವರೆಗೆ

| ಕ್ರ. ಸಂ. | ವಿವರ | ಯೂನಿಟ್ | ಪ್ರಗತಿ |
|---|---|---|---|
| ೧ | ಉದ್ಯೋಗ ಚೀಟಿ ವಿತರಣೆ (ಪ್ರಾರಂಭದಿಂದ) | ನಂ. | ೫೩೮೫೫೫೧ |
| ೨ | ಸೃಜಿಸಲಾದ ಮಾನವ ದಿನಗಳು | ನಂ. | ೨೩೮.೬೭ ಲಕ್ಷ ಮಾನವ ದಿನಗಳು |
| ೩ | ಉದ್ಯೋಗ ಒದಗಿಸಿದ ಕುಟುಂಬಗಳು | ನಂ. | ೬.೬೫ ಲಕ್ಷ |
| ೪ | ೧೦೦ ದಿನಗಳನ್ನು ಪೂರೈಸಿದ ಕುಟುಂಬಗಳ ಸಂಖ್ಯೆ | ಲಕ್ಷ | ೨೫೭೯೯ |
| ೫ | ಪ್ರತಿ ಕುಂಟುಂಬಕ್ಕೆ ಒದಗಿಸಲಾದ ಸರಾಸರಿ ಮಾನವ ದಿನಗಳು | ನಂ. | ೩೬ ದಿನಗಳು |
| ಸೂಚನೆ: ಉದ್ಯೋಗ ಚೀಟಿ ಊರ್ಜಿತಗೊಳಿಸುವಿಕೆಯ ಪ್ರಕ್ರಿಯೆ ಪ್ರಾಂಭಿಕೆಯ ಕಾರಣದಿಂದ ಕುಟುಂಬಗಳಿಗೆ ಉದ್ಯೋಗ ಚೀಟಿ ವಿತರಣೆಯ ಸ್ಥಿರತೆ ಇರುವುದಿಲ್ಲ. ಈ ಪ್ರಕ್ರಿಯೆಯೊಂದಿಗೆ ನಕಲು ಮಾಡುವುದು/ನಕಲು/ಮರಣ ಹೊಂದಿದವರ ಉದ್ಯೋಗ ಚೀಟಿಗಳನ್ನು ಭೌತಿಕವಾಗಿ ಹಾಗೂ ಎಂ.ಐ.ಎಸ್ ಡಾಟಾ ಬೇಸ್‌ಗಳಿಂದ ಊರ್ಜಿತಗೊಳಿಸಬಹುದಾಗಿದೆ. | | | |

ಮೂಲ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರ

## ಪ್ರಮುಖ ಕಾರ್ಯಕ್ರಮಗಳಲ್ಲಿ ಉದ್ಯೋಗ ವೇತನ ಸೃಷ್ಟಿ

೨೦೧೫ರ ಏಪ್ರಿಲ್ ನಿಂದ ಡಿಸೆಂಬರ್ ೨೦೧೫ರವರೆಗೆ ರಾಜ್ಯ ಸರ್ಕಾರದ ವಿವಿಧ ಕಾರ್ಯಕ್ರಮಗಳಲ್ಲಿ ೧೪.೦೦ ಕೋಟಿ ಮಾನವ ದಿನಗಳನ್ನು ಸೃಷ್ಟಿಯಾಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ೨೩.೪೫ ಕೋಟಿ ಮಾನವ ದಿನಗಳು ಸೃಷ್ಟಿಯಾಗಿವೆ. ಉದ್ಯೋಗ ಖಾತರಿ

ಯೋಜನೆಯನ್ನು ವಿಂಗಡಣೆ ಮಾಡಿದಾಗ ಒಟ್ಟು ಉದ್ಯೋಗ ಸೃಷ್ಟಿಯಲ್ಲಿ ರಸ್ತೆ ಮತ್ತು ಸೇತುವೆ ನಿರ್ಮಾಣದಲ್ಲಿ ೭.೭೯ ಕೋಟಿ ಮಾನವ ದಿನಗಳು (ಶೇ.೫೫.೫೮), ದೊಡ್ಡ, ಮಧ್ಯಮ ನೀರಾವರಿ ಮತ್ತು ಪ್ರವಾಹ ನಿಯಂತ್ರಣ ಯೋಜನೆಗಳಲ್ಲಿ ೧.೯೬ ಕೋಟಿ ಮಾನವ ದಿನಗಳು(ಶೇ.೧೪.೦೦), ಸಣ್ಣ ನೀರಾವರಿ ಯೋಜನೆಗಳಲ್ಲಿ ೦.೯೪ ಕೋಟಿ ಮಾನವ ದಿನಗಳು (ಶೇ.೬.೬೯) ಸೃಷ್ಟಿಯಾಗಿದ್ದು, ನಂತರದಲ್ಲಿ ಕಟ್ಟಡ ನಿರ್ಮಾಣದಲ್ಲಿ ೦.೬೧ ಕೋಟಿ ಮಾನವ ದಿನಗಳು (ಶೇ.೪.೩೪), ಜಲಾನಯನ ಅಭಿವೃದ್ಧಿಯಲ್ಲಿ ೦.೨೯ ಕೋಟಿ ಮಾನವ ದಿನಗಳು (ಶೇ.೨.೦೭), ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ(ಕಾಡಾ)ದಡಿಯಲ್ಲಿ ೦.೦೪ ಕೋಟಿ ಮಾನವ ದಿನಗಳು (ಶೇ.೦.೩೦) ಮತ್ತು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ಎಂ.ಜಿ.ಎನ್.ಆರ್.ಇ.ಜಿ.ಎಸ್.) ಯಲ್ಲಿ ೨.೩೮ ಕೋಟಿ ಮಾನವ ದಿನಗಳು ಸೃಷ್ಟಿಯಾಗಿರುತ್ತದೆ.

ವಾರ್ಷಿಕ ಗುರಿಯ ಅನುಪಾತದಲ್ಲಿ ರಸ್ತೆ ಮತ್ತು ಸೇತುವೆ ನಿರ್ಮಾಣದಲ್ಲಿ ೭.೭೯ ಕೋಟಿ ಮಾನವ ದಿನಗಳು (ಶೇ.೧೦೧.೫೦), ಕಟ್ಟಡ ನಿರ್ಮಾಣದಲ್ಲಿ ೦.೬೧ ಕೋಟಿ ಮಾನವ ದಿನಗಳು (ಶೇ.೭೧.೭೭), ನಂತರದಲ್ಲಿ ಜಲಾನಯನ ಅಭಿವೃದ್ಧಿಯಲ್ಲಿ ೦.೨೯ ಕೋಟಿ ಮಾನವ ದಿನಗಳು (ಶೇ.೪೪.೨೨), ಸಣ್ಣ ನೀರಾವರಿ ಯೋಜನೆಗಳಲ್ಲಿ ೦.೯೪ ಕೋಟಿ ಮಾನವ ದಿನಗಳು (ಶೇ.೩೯.೧೬), ದೊಡ್ಡ, ಮಧ್ಯಮ ನೀರಾವರಿ ಮತ್ತು ಪ್ರವಾಹ ನಿಯಂತ್ರಣ ಯೋಜನೆಗಳಲ್ಲಿ ೧.೯೬ ಕೋಟಿ ಮಾನವ ದಿನಗಳು (ಶೇ.೩೮.೩೮), ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ(ಕಾಡಾ) ದಡಿಯಲ್ಲಿ ೦.೦೪ ಕೋಟಿ ಮಾನವ ದಿನಗಳು (ಶೇ.೨೦.೦೮) ಮತ್ತು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ಎಂ.ಜಿ.ಎನ್.ಆರ್.ಇ.ಜಿ.ಎಸ್.)ಯಲ್ಲಿ ೨.೩೮ ಕೋಟಿ ಮಾನವ ದಿನಗಳು ಸೃಷ್ಟಿಯಾಗಿರುತ್ತದೆ.ಕಳೆದ ವರ್ಷ ಇದೇ ಅವಧಿಯಲ್ಲಿ ೧೧೭.೯೦ ಶೇಕಡ ವಾರ್ಷಿಕ ಗುರಿಯನ್ನು ಸಣ್ಣ ನೀರಾವರಿ ಯೋಜನೆಗಳಲ್ಲಿ ನಂತರದಲ್ಲಿ ರಸ್ತೆ ಮತ್ತು ಸೇತುವೆ ನಿರ್ಮಾಣದಲ್ಲಿ (ಶೇ.೯೩.೫೩) ಮತ್ತು ಜಲಾನಯನ ಅಭಿವೃದ್ಧಿಯಲ್ಲಿ (೯೨.೨೧ ಶೇಕಡ) ಸಾಧಿಸಲಾಗಿದೆ.ವಿವರವನ್ನು ಕೋಷ್ಟಕ ೮.೪೮ರಲ್ಲಿ ನೀಡಲಾಗಿದೆ.

**ಕೋಷ್ಟಕ ೮.೪೮: ಪ್ರಮುಖ ಕಾರ್ಯಕ್ರಮಗಳಲ್ಲಿ ಕೂಲಿ ಉದ್ಯೋಗ ಸೃಷ್ಟಿ (೨೦೧೫-೧೬)**

| ಕಾರ್ಯಕ್ರಮಗಳು | ವಾರ್ಷಿಕ ಗುರಿ | | ೨೦೧೫-೧೬ಕ್ಕೆ (ಡಿಸೆಂಬರ್ ೨೦೧೫ ರವರೆಗಿನ ಗುರಿ) | ಸಾಧನೆ | |
|---|---|---|---|---|---|
| | ೨೦೧೪-೧೫ | ೨೦೧೫-೧೬ | | ೨೦೧೪-೧೫ ರಿಂದ (ಡಿಸೆಂಬರ್ ೨೦೧೪ ರವರೆಗೆ) | ೨೦೧೫-೧೬ ರಿಂದ (ಡಿಸೆಂಬರ್ ೨೦೧೫ ರವರೆಗೆ) |
| ೧. ದೊಡ್ಡ, ಮಧ್ಯಮ ನೀರಾವರಿ ಮತ್ತು ಪ್ರವಾಹ ನಿಯಂತ್ರಣ | ೨೦೫೬.೧೪ | ೫೧೧.೦೧ | ೩೬೭.೭೧ | ೮೬೧.೦೮ (೪೧.೮೮) | ೧೯೬.೧೪ (೩೮.೩೮) |
| ೨. ಸಣ್ಣ ನೀರಾವರಿ | ೨೦೯.೬೯ | ೨೩೯.೩೧ | ೧೩೦.೧೫ | ೨೪೭.೨೩ (೧೧೭.೯೦) | ೯೩.೭೧ (೩೯.೧೬) |
| ೩. ಕಾಡಾ | ೨೨.೦೩ | ೨೦.೯೨ | ೯.೧೭ | ೫.೫೬ (೨೫.೨೪) | ೪.೨೦ (೨೦.೦೮) |
| ೪. ಜಲಾನಯನ ಅಭಿವೃದ್ಧಿ | ೨೬೦.೦೮ | ೬೫.೭೨ | ೪೬.೦೧ | ೯೨.೨೧ (೩೫.೪೫) | ೨೯.೦೬ (೪೪.೨೨) |
| ೫. ರಸ್ತೆಗಳು ಮತ್ತು ಸೇತುವೆಗಳು | ೮೦೧.೬೫ | ೭೬೭.೧೦ | ೪೪೭.೯೮ | ೭೪೯.೮೦ (೯೩.೫೩) | ೭೭೮.೫೮ (೧೦೧.೫೦) |
| ೬. ಕಟ್ಟಡಗಳು | ೯೯.೨೦ | ೮೪.೬೪ | ೩೮.೯೩ | ೭೬.೮೮ (೭೭.೫೦) | ೬೦.೭೫ (೭೧.೭೭) |
| ಒಟ್ಟು ಕಾರ್ಯಕ್ರಮಗಳು (ಗುರಿ ಹೊಂದಿದ) | ೩೪೪೮.೭೯ | ೧೬೮೮.೭೦ | ೧೦೩೯.೯೫ | ೨೦೩೨.೭೭ (೫೮.೯೪) | ೧೧೬೨.೪೪ (೬೮.೮೪) |
| ಎನ್.ಆರ್.ಇ.ಜಿ.ಎಸ್. | * | * | * | ೩೧೨.೪೦ | ೨೩೮.೩೧ |
| ಒಟ್ಟು ಕಾರ್ಯಕ್ರಮಗಳು | ೩೪೪೮.೭೯ | ೧೬೮೮.೭೦ | ೧೦೩೯.೯೫ | ೨೩೪೫.೧೭ | ೧೪೦೦.೭೫ |

ಆವರಣದೊಳಗಿರುವ ಅಂಕಿಗಳು ಶೇಕಡಾವಾರು ವಾರ್ಷಿಕ ಗುರಿಯನ್ನು ತಿಳಿಸುತ್ತವೆ * ಬೇಡಿಕೆ ಆಧಾರಿತ ಕಾರ್ಯಕ್ರಮ – ಯಾವುದೇ ಗುರಿ ಉದ್ದೇಶ ಹೊಂದಿಲ್ಲ

ಮೂಲ: ಸಂಬಂಧಪಟ್ಟ ಕರ್ನಾಟಕ ಸರ್ಕಾರದ ಇಲಾಖೆಗಳು

## ಸ್ವಯಂ ಉದ್ಯೋಗ ಕಾರ್ಯಕ್ರಮ

### ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ

ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯು ಬಡತನ ನಿವಾರಣೆ ಕಾರ್ಯಕ್ರಮವಾಗಿದ್ದು, ಗ್ರಾಮೀಣಾಭಿವೃದ್ಧಿ ಮಂತ್ರಾಲಯದಿಂದ ಜಾರಿಗೊಳಿಸಲಾಗುತ್ತಿದೆ.೨೦೧೨-೧೩ನೇ ಸಾಲಿಗೆ ಇದನ್ನು ಎನ್.ಆರ್.ಎಲ್.ಎಂ.ಯೋಜನೆಯಾಗಿ ಪುನರ್ ರಚಿಸಲಾಗಿದೆ.ಆದಕಾರಣ, ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಗೆ ೨೦೧೫-೧೬ನೇ ಸಾಲಿನಲ್ಲಿ ಅನುದಾನ ನಿಗದಿಯಾಗಿರುವುದಿಲ್ಲ.

### ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನಾ ಸಂಸ್ಥೆ (ಕೆ.ಎಸ್.ಆರ್.ಎಲ್.ಪಿ.ಎಸ್.)

ಎಸ್.ಜಿ.ಎಸ್.ವೈ. ಯೋಜನೆಯನ್ನು 'ನ್ಯಾಶನಲ್ ರೂರಲ್ ಲೈವ್ಲಿಹುಡ್ ಮಿಷನ್' (ಎನ್.ಆರ್.ಎಲ್.ಎಂ.) ಎಂದು ಪುನರ್‌ರಚಿಸಲಾಗಿದೆ. ಈ ಯೋಜನೆಯನ್ನು "ಆಜೀವಿಕ" ಹೆಸರಿನಲ್ಲಿ ಅನುಷ್ಠಾನಗೊಳಿಸಲಾಗುವುದು. ರಾಷ್ಟ್ರದ ಎಲ್ಲಾ ರಾಜ್ಯಗಳು ಯೋಜನೆಯ ಅನುಷ್ಠಾನಕ್ಕಾಗಿ ರಾಜ್ಯಸಂಸ್ಥೆಯನ್ನು ಸ್ಥಾಪಿಸಬೇಕಾಗಿದೆ. ಇದರನ್ವಯ ಕರ್ನಾಟಕ ರಾಜ್ಯದಲ್ಲಿ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನಾ ಸಂಸ್ಥೆ (ಕೆ.ಎಸ್.ಆರ್.ಎಲ್.ಪಿ.ಎಸ್.)ಯನ್ನು ಸ್ಥಾಪಿಸಲಾಗಿದೆ. ಎನ್.ಆರ್.ಎಲ್.ಎಂ. ಯೋಜನೆಯು ೨೦೧೩-೧೪ನೇ ಸಾಲಿನಿಂದ ಪ್ರಾರಂಭವಾಗಿದೆ. ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯದ ಉನ್ನತ ಸಮಿತಿಯು ಎನ್.ಆರ್.ಎಲ್.ಪಿ. ಯೋಜನೆಯಡಿಯಲ್ಲಿ ರೂ.೬೦.೩೦ ಕೋಟಿಗಳ ಹಾಗೂ ಎನ್.ಆರ್.ಎಲ್.ಎಂ. ಯೋಜನೆಯಡಿ ರೂ.೩೦ ಕೋಟಿಗಳ ಕ್ರಿಯಾ ಯೋಜನೆಯನ್ನು (೨೦೧೪-೧೫) ಅನುಮೋದಿಸಿದೆ. ೨೦೧೪-೧೫ನೇ ಸಾಲಿನಲ್ಲಿ ಇನ್‌ಸೆಂಟೀವ್ ಅಪ್ರೋಚ್ ನಡಿ ರಾಜ್ಯದ ೨೦ ತಾಲ್ಲೂಕುಗಳು ವ್ಯಾಪ್ತಿಗೊಳಗೊಂಡಿವೆ ಹಾಗೂ ೨೦೧೫-೧೬ರಲ್ಲಿ ೬೪ ತಾಲ್ಲೂಕುಗಳನ್ನು ವ್ಯಾಪ್ತಿಗೊಳಿಸುವ ಯೋಜನೆ ಹೊಂದಲಾಗಿದೆ. ಇತರೆ ತಾಲ್ಲೂಕುಗಳಲ್ಲಿ ಎನ್.ಆರ್.ಎಲ್.ಎಂ.ಯೋಜನೆಯು ನಾನ್ ಇನ್‌ಸೆಂಟೀವ್ ಅಪ್ರೋಚ್ ನಡಿ ಅನುಷ್ಠಾನಗೊಳ್ಳುತ್ತಿದ್ದು, ಮುಂದಿನ ಎರಡು ವರ್ಷಗಳಲ್ಲಿ ಇನ್‌ಸೆಂಟೀವ್ ಅಪ್ರೋಚ್ ನಡಿ ವ್ಯಾಪ್ತಿಗೊಳಿಸಲಾಗುವುದು. ಎನ್.ಆರ್.ಎಲ್.ಎಂ. ಯೋಜನೆಗೆ ೨೦೧೫-೧೬ರಲ್ಲಿ ರೂ.೩೦ ಕೋಟಿಗಳ ಅನುದಾನ ನಿಗದಿಪಡಿಸಲಾಗಿದೆ. ರೂ.೧೬.೭೫ ಕೋಟಿಗಳ ಹಣ ಬಿಡುಗಡೆಯಾಗಿದೆ ಮತ್ತು ರೂ.೨೧.೮೫ ಕೋಟಿ ಹಣ ವೆಚ್ಚ ಮಾಡಲಾಗಿದೆ.

ಈ ಹಿಂದಿನ ವರ್ಷಗಳಲ್ಲಿ ಬಿಡುಗಡೆಯಾದ ಹಣಕ್ಕಿಂತ ಹೆಚ್ಚಿಗೆ ಹಣವನ್ನು ವೆಚ್ಚ ಮಾಡಲಾಗಿದೆ. ಇದೇ ರೀತಿ ಎನ್.ಆರ್.ಎಲ್.ಪಿ. ಯೋಜನೆಯಡಿ ರೂ.೬೦.೩೦ ಕೋಟಿ ಹಣ ಅನುಮೋದನೆಯಾಗಿದ್ದು, ರೂ.೧೦.೪೮ ಕೋಟಿ ಹಣ ಬಿಡುಗಡೆಯಾಗಿದೆ ಹಾಗೂ ರೂ.೧೪.೮೪ ಕೋಟಿ ಹಣ ವೆಚ್ಚ ಮಾಡಲಾಗಿದೆ. ಇಲ್ಲಿಯೂ ಸಹ ಈ ಹಿಂದಿನ ವರ್ಷಗಳಲ್ಲಿ ಬಿಡುಗಡೆಯಾದ ಹಣದಲ್ಲಿ ಬಾಕಿ ಉಳಿದ ಹಣ ಬಳಸಿಕೊಂಡು ಈ ವರ್ಷ ಬಿಡುಗಡೆಯಾದ ಹಣಕ್ಕಿಂತ ಹೆಚ್ಚಿಗೆ ಹಣವನ್ನು ವೆಚ್ಚ ಮಾಡಲಾಗಿದೆ. ವಿವರಗಳನ್ನು ಕೋಷ್ಟಕ ೮.೪೯ರಲ್ಲಿ ನೀಡಲಾಗಿದೆ.

**ಕೋಷ್ಟಕ ೮.೪೯: ೨೦೧೫-೧೬ನೇ ಸಾಲಿನಲ್ಲಿ ಎನ್.ಆರ್.ಎಲ್.ಎಂ. ಹಾಗೂ ಎನ್.ಆರ್.ಎಲ್.ಪಿ. ಯೋಜನೆಗಳ ಅನುದಾನ ಬಿಡುಗಡೆ ಹಾಗೂ ಖರ್ಚುಗಳ ವಿವರ (ಡಿಸೆಂಬರ್ ೨೦೧೫ರ ಅಂತ್ಯದವರೆಗೆ)**

| ವಿವರಗಳು | ಎನ್.ಆರ್.ಎಲ್.ಎಂ. | ಎನ್.ಆರ್.ಎಲ್.ಪಿ. |
|---|---|---|
| ಹಂಚಿಕೆ | ೩೦.೦೦ | ೬೦.೩೦ |
| ಬಿಡುಗಡೆ | ೧೬.೭೫ | ೧೦.೪೮ |
| ಖರ್ಚು | ೨೧.೮೫ | ೧೪.೮೪ |

ಮೂಲ: ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನಾ ಸಂಸ್ಥೆ

### ಸರ್ಕಾರದ ಉಪಕ್ರಮಗಳು – ಸಾಮಾಜಿಕ ಭದ್ರತೆ

ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯವು ಕಂದಾಯ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿದ್ದು, ವೃದ್ಧರು, ವಿಧವೆಯರು ಹಾಗೂ ಅಂಗವಿಕಲರಿಗೆ ಆರ್ಥಿಕ ಸಹಾಯವನ್ನು ಒದಗಿಸುವುದರ ಮೂಲಕ ಸಾಮಾಜಿಕ ಭದ್ರತೆಯನ್ನು ನೀಡುತ್ತಿದೆ. ಅವಿವಾಹಿತ ಮಹಿಳೆಯರಿಗೆ 'ಮನಸ್ವಿನಿ' ಯೋಜನೆ ಮತ್ತು ಲೈಂಗಿಕ ಅಲ್ಪಸಂಖ್ಯಾತರಿಗೆ 'ಮೈತ್ರಿ' ಯೋಜನೆಗಳನ್ನು ಕೂಡ ಜಾರಿಗೆ ತರಲಾಗಿದೆ. ಕಾರ್ಮಿಕರ ರಾಜ್ಯವಿಮಾ ಯೋಜನೆಯು ಒಂದು ಸಾಮಾಜಿಕ ಭದ್ರತೆಯ ಪ್ರಮುಖ ಯೋಜನೆಯಾಗಿದ್ದು ಕಾರ್ಮಿಕರಿಗೆ ವೈದ್ಯಕೀಯ ಸೇವೆಗಳನ್ನು ಒದಗಿಸುತ್ತಿದೆ.

ಅಸಂಘಟಿತ ಕಾರ್ಮಿಕರ ಜೀವನ ಮಟ್ಟವನ್ನು ಉತ್ತಮಪಡಿಸಿ, ಸಾಮಾಜಿಕ ಭದ್ರತೆಯನ್ನು ಒದಗಿಸಲು ಕೇಂದ್ರ ಸರ್ಕಾರವು ಜಾರಿಗೆ ತಂದ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ, ೨೦೦೮ರ ಉಪಬಂಧಗಳನ್ವಯ ರಾಜ್ಯ ಸರ್ಕಾರವು ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯನ್ನು ರಚಿಸಿದೆ.

ಅಪಘಾತದ ಕಾರಣ ಮರಣ/ಶಾಶ್ವತ ದುರ್ಬಲತೆ/ತಾತ್ಕಾಲಿಕ ದುರ್ಬಲತೆ ಹೊಂದಿ ಸಂಕಷ್ಟಕ್ಕೆ ಸಿಲುಕುವ ಖಾಸಗಿ ಆಟೋ, ಟ್ಯಾಕ್ಸಿ, ಮ್ಯಾಕ್ಸಿಕ್ಯಾಬ್, ಲಾರಿ ಮತ್ತು ಬಸ್ ವಾಹನ ಚಾಲಕರ ಹಿತರಕ್ಷಣೆ ಮತ್ತು ಅವರ ಕುಟುಂಬದ ಸದಸ್ಯರಿಗೆ ನೆರವು ನೀಡುವ ಉದ್ದೇಶದಿಂದ ರಾಜ್ಯ ಸರ್ಕಾರ ೨೦೧೧-೧೨ ನೇ ಸಾಲಿನಲ್ಲಿ "ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ವಾಹನ ಚಾಲಕರ ಅಪಘಾತ ಪರಿಹಾರ ಯೋಜನೆ" ಎಂಬ ಹೆಸರಿನಲ್ಲಿ ನೂತನ ವಿಮಾ ಯೋಜನೆಯನ್ನು ಮಂಡಳಿಯ ಮೂಲಕ ಜಾರಿಗೆ ತಂದಿದೆ.

### ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನೆ

ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನೆಯು ಅಸಂಘಟಿತ ವಲಯದ ಕೆಲವು ನಿರ್ದಿಷ್ಟ ಕಾರ್ಮಿಕ ಕುಟುಂಬದವರಿಗೆ ಆರೋಗ್ಯ ಸೌಲಭ್ಯ ಒದಗಿಸಲು, ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಒಂದು ಮಹತ್ವಾಕಾಂಕ್ಷಿ ಯೋಜನೆಯಾಗಿದೆ. ಈ ಯೋಜನೆಯನ್ನು ಬಿಪಿಎಲ್ ಕಾರ್ಮಿಕ ಕುಟುಂಬದವರು, ಎಮ್.ಜಿ.ಎನ್.ಆರ್.ಇ.ಜಿ.ಎ. (ಹಿಂದಿನ ಆರ್ಥಿಕ ವರ್ಷದಲ್ಲಿ ಕನಿಷ್ಠ ೧೫ ದಿನ ಕೆಲಸ ನಿರ್ವಹಿಸಿದವರು), ಬೀಡಿ ಕಾರ್ಮಿಕರು, ಗೃಹ ಕಾರ್ಮಿಕರು, ರೈಲ್ವೆ ಇಲಾಖೆಯ ಪರವಾನಗಿ ಪಡೆದ ವೆಂಡರ್ಸ್, ಪೋರ್ಟರ್ಸ್ ಮತ್ತು ಹಾಕರ್ಸ್, ಬೀದಿ ಬದಿ ವ್ಯಾಪಾರಿಗಳು, ನಿರ್ಮಾಣ ಕಾರ್ಮಿಕರು, ಆಟೋ ರಿಕ್ಷಾ ಚಾಲಕರು, ಸೈಕಲ್ ರಿಕ್ಷಾ ತಳ್ಳುವವರು, ಚಿಂದಿ ಆಯುವವರು, ಗಣಿ ಕಾರ್ಮಿಕರು, ಸಫಾಯಿ ಕರ್ಮಚಾರಿಗಳು, ನೇಕಾರರು ಮತ್ತು ಕುಶಲಕರ್ಮಿಗಳು ಕುಟುಂಬದವರಿಗೆ ಯೋಜನೆಯ ವ್ಯಾಪ್ತಿಯನ್ನು ವಿಸ್ತರಿಸಲಾಗಿದೆ.

* * * * *



ವರ್ಲ್ಡ್ ಟ್ರೇಡ್ ಸೆಂಟರ್, ಬೆಂಗಳೂರು



ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ಬೆಂಗಳೂರು